# ಪಂಚಾಯತ್ ರಾಜ್ ಸಂಸ್ಥೆಗಳ ಮತ್ತು
# ನಗರ ಸ್ಥಳೀಯ ಸಂಸ್ಥೆಗಳ
# ಮೇಲಿನ
# ವಾರ್ಷಿಕ ತಾಂತ್ರಿಕ ಪರಿಶೀಲನಾ ವರದಿ
# ಮಾರ್ಚ್ 2018ಕ್ಕೆ ಕೊನೆಗೊಂಡ ವರ್ಷ

**ಕರ್ನಾಟಕ ಸರ್ಕಾರ**


**ಪ್ರಧಾನ ಮಹಾಲೇಖಾಪಾಲರು**
**(ಸಾಮಾನ್ಯ ಮತ್ತು ಸಾಮಾಜಿಕ ವಲಯ ಲೆಕ್ಕಪರಿಶೋಧನೆ) ರವರ ಕಛೇರಿ,**
**ಕರ್ನಾಟಕ**

## ವಿಷಯಸೂಚಿ


| ವಿವರಗಳು | ಕಂಡಿಕೆ ಸಂಖ್ಯೆ | ಪುಟ ಸಂಖ್ಯೆ |
|---|---|---|
| ಪ್ರಸ್ತಾವನೆ | | iii |
| ಅವಲೋಕನ | | v |
| **ಅಧ್ಯಾಯ – I** | | |
| **ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ** | | |
| ಪಂಚಾಯತ್ ರಾಜ್ ಸಂಸ್ಥೆಗಳ ಹೊಣೆಗಾರಿಕೆ ಚೌಕಟ್ಟು ಮತ್ತು ಹಣಕಾಸಿನ ವರದಿ | 1.1 | 1 |
| **ಅಧ್ಯಾಯ – II** | | |
| **ಪಂಚಾಯತ್ ರಾಜ್ ಸಂಸ್ಥೆಗಳ ಲೆಕ್ಕಪರಿಶೋಧನೆಯ ಫಲಿತಾಂಶಗಳು** | | |
| **ಅನುಪಾಲನಾ ಲೆಕ್ಕಪರಿಶೋಧನೆ** | | |
| **ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ** | | |
| ಗ್ರಾಮ ಪಂಚಾಯತಿಗಳಿಂದ ಉಪಕರದ ಮೊತ್ತದ ಮಾರ್ಗಪಲ್ಲಟ | 2.1 | 13 |
| ಸಾರ್ವಜನಿಕ ಹಣದ ದುರ್ಬಳಕೆ/ವ್ಯರ್ಥ ಉಪಯೋಗ | 2.2 | 14 |
| **ಅಧ್ಯಾಯ – III** | | |
| **ನಗರಾಭಿವೃದ್ಧಿ ಇಲಾಖೆ** | | |
| ನಗರ ಸ್ಥಳೀಯ ಸಂಸ್ಥೆಗಳ ಹೊಣೆಗಾರಿಕೆ ಚೌಕಟ್ಟು ಮತ್ತು ಹಣಕಾಸಿನ ವರದಿ | 3.1 | 17 |
| **ಅಧ್ಯಾಯ – IV** | | |
| **ನಗರ ಸ್ಥಳೀಯ ಸಂಸ್ಥೆಗಳ ಲೆಕ್ಕಪರಿಶೋಧನೆಯ ಫಲಿತಾಂಶಗಳು** | | |
| **ಅನುಪಾಲನಾ ಲೆಕ್ಕಪರಿಶೋಧನೆ** | | |
| **ನಗರಾಭಿವೃದ್ಧಿ ಇಲಾಖೆ** | | |
| ದಂಡದ ಬಡ್ಡಿಯ ತಪ್ಪಿಸಬಹುದಾಗಿದ್ದ ಪಾವತಿ | 4.1 | 27 |
| ಆಸ್ತಿ ತೆರಿಗೆ ತಪ್ಪಾದ ನಿರ್ಧರಣೆಯಿಂದ ಆದಾಯದ ನಷ್ಟ | 4.2 | 28 |
| ಆದಾಯದ ನಷ್ಟ | 4.3 | 31 |
| ಒಪ್ಪಂದದ ಬೇಡಿಕೆಯ ಪರಿವರ್ತನೆ/ಮಾರ್ಪಾಟು ಮಾಡದಿದ್ದುದರಿಂದ ಹಾಗೂ ವಿದ್ಯುತ್ ಅಂಶದ ನಿರ್ವಹಣೆ ಮಾಡದಿದ್ದುದರಿಂದಾದ ತಪ್ಪಿಸಬಹುದಾಗಿದ್ದ ಪಾವತಿ | 4.4 | 34 |
| ಹೆಚ್ಚುವರಿ ನೆಲಬಾಡಿಗೆಯನ್ನು ವಸೂಲು ಮಾಡದಿದ್ದುದರಿಂದ ಆದಾಯದ ನಷ್ಟ | 4.5 | 36 |
| ಮೇಲ್ವಾಟು ವೆಚ್ಚವನ್ನು ಕಡಿಮೆ ಸಂಗ್ರಹಣೆ ಮಾಡಿದ್ದರಿಂದಾದ ಆದಾಯದ ನಷ್ಟ | 4.6 | 37 |

## ಅನುಬಂಧಗಳ ಪಟ್ಟಿ


| ಅನುಬಂಧ ಸಂಖ್ಯೆ | ವಿವರಗಳು | ಪುಟ ಸಂಖ್ಯೆ |
|---|---|---|
| 1.1 | ಪಂಚಾಯತ್ ರಾಜ್ ಸಂಸ್ಥೆಗಳ ಸಾಂಸ್ಥಿಕ ರಚನೆ | 41 |
| 1.2 | 2016–17ರ ಲೆಕ್ಕಪರಿಶೋಧನೆಯ ಅವಧಿಯವರೆಗೆ ಬಾಕಿಯಿರುವ ತಪಾಸಣಾ ವರದಿಗಳ ಮತ್ತು ಕಂಡಿಕೆಗಳ ವಿವರಗಳು – ಪಂಚಾಯತ್ ರಾಜ್ ಸಂಸ್ಥೆಗಳು | 42 |
| 1.3 | ಪ್ರಮುಖ ಯೋಜನೆಗಳಿಗೆ ಸಂಬಂಧಿಸಿದಂತೆ ಹಣಕಾಸಿನ ವಿವರಗಳನ್ನು ತೋರಿಸುವ ತಃಖ್ತೆ | 43 |
| 1.4 | 2017–18ನೇ ಸಾಲಿಗೆ ಪ್ರಧಾನ ಶೀರ್ಷಿಕೆ 8782ರ ಅಡಿಯಲ್ಲಿ 'II ಲೋಕೋಪಯೋಗಿ ಇಲಾಖೆ ಚೆಕ್ಕುಗಳು' ಹಾಗೂ 'II ಅರಣ್ಯ ಇಲಾಖೆಯ ಚೆಕ್ಕುಗಳ' ಅಡಿಯಲ್ಲಿರುವ ಮೊತ್ತಗಳನ್ನು ತೋರಿಸುವ ತಃಖ್ತೆ | 44 |
| 1.5 | 2017–18ನೇ ಅವಧಿಯಲ್ಲಿ ತಾಲ್ಲೂಕು ಪಂಚಾಯತಿ ಹಾಗೂ ಗ್ರಾಮ ಪಂಚಾಯತಿ ಅಮಾನತ್ತು ಲೆಕ್ಕಗಳ ಅಡಿಯಲ್ಲಿ ಉಳಿದಿರುವ ಶಿಲ್ಕುಗಳನ್ನು ತೋರಿಸುವ ತಃಖ್ತೆ | 45 |
| 2.1 | 59 ಗ್ರಾಮಪಂಚಾಯತಿಗಳು ಉಪಕರದ ಮೊತ್ತಗಳನ್ನು ಮಾರ್ಗಪಲ್ಲಟ ಮಾಡಿರುವುದನ್ನು ತೋರಿಸುವ ತಃಖ್ತೆ | 46 |
| 3.1 | ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳ ಕಾರ್ಯಚಟುವಟಿಕೆಗಳಿಗೆ ಸಂಬಂಧಿಸಿದ ಸಾಂಸ್ಥಿಕ ರಚನೆ | 47 |
| 3.2 | 2016–17ರ ಲೆಕ್ಕಪರಿಶೋಧನೆಯ ಅವಧಿಯಲ್ಲಿ ನಗರ ಸ್ಥಳೀಯ ಸಂಸ್ಥೆಯಲ್ಲಿ ಬಾಕಿ ಉಳಿದಿರುವ ತಪಾಸಣಾ ವರದಿಗಳು ಮತ್ತು ಕಂಡಿಕೆಗಳ ವಿವರಗಳ ತಃಖ್ತೆ | 48 |
| 4.1 | ಬಿಬಿಎಮ್‌ಪಿ ದಂಡದ ಬಡ್ಡಿಯನ್ನು ಪಾವತಿಸಿರುವುದನ್ನು ತೋರಿಸುವ ತಃಖ್ತೆ | 49 |
| 4.2 | ಆಸ್ತಿ ತೆರಿಗೆಯನ್ನು ಕಡಿಮೆ ನಿರ್ಧರಣೆ ಮಾಡಿರುವುದು ಮತ್ತು ಆದಾಯ ನಷ್ಟ ತೋರಿಸುವ ತಃಖ್ತೆ | 50 |
| 4.3 | ಬ್ಯಾಂಕ್ ಖಾತೆಗಳಿಗೆ ಪುನರಾವರ್ತಿತ ಮತ್ತು ಪತ್ತೆಯಾದ/ಪತ್ತೆಯಾಗದ ಉಪಕರಣಗಳ ವಿವರಗಳನ್ನು ತೋರಿಸುವ ತಃಖ್ತೆ | 51 |
| 4.4 | (ಎ) ಒಪ್ಪಂದದ ಬೇಡಿಕೆಯನ್ನು ಕಡಿತಗೊಳಿಸದಿದ್ದುದರಿಂದಾದ ತಪ್ಪಿಸಬಹುದಾಗಿದ್ದ ಅಧಿಕ ವೆಚ್ಚವನ್ನು ತೋರಿಸುವ ತಃಖ್ತೆ<br>(ಬಿ) ಒಪ್ಪಂದದ ಬೇಡಿಕೆಯನ್ನು ಹೆಚ್ಚಿಸಲು ವಿಫಲಗೊಂಡಿದ್ದರಿಂದಾದ ತಪ್ಪಿಸಬಹುದಾಗಿದ್ದ ಅಧಿಕ ವೆಚ್ಚವನ್ನು ತೋರಿಸುವ ತಃಖ್ತೆ | 57 |
| 4.5 | 2015–16ರಿಂದ 2017–18ರ ಅವಧಿಯಲ್ಲಿ ಯುಎಲ್‌ಬಿಗಳಿಗೆ ವಿದ್ಯುತ್ ಸರಬರಾಜು ಕಂಪನಿಗಳು ವಿಧಿಸಿದ ವಿದ್ಯುತ್ ಅಂಶದ ಮೇಲ್ತೆರಿಗೆಯನ್ನು ತೋರಿಸುವ ತಃಖ್ತೆ | 58 |
| 4.6 | ಹೆಚ್ಚುವರಿ ಭೂ ಬಾಡಿಗೆಯನ್ನು ವಿಧಿಸದಿದ್ದುದರಿಂದಾದ ಆದಾಯದ ನಷ್ಟವನ್ನು ತೋರಿಸುವ ತಃಖ್ತೆ | 59 |

## ಪ್ರಸ್ತಾವನೆ

ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಕರ್ತವ್ಯಗಳು, ಅಧಿಕಾರಗಳು ಮತ್ತು ಸೇವಾ ಷರತ್ತುಗಳ ನಿಯಮ, 1971ರ ಪರಿಚ್ಛೇದ 20(1)ರ ಅಡಿಯಲ್ಲಿ ತಾಂತ್ರಿಕ ಮಾರ್ಗಸೂಚಿ ಮತ್ತು ಮೇಲ್ವಿಚಾರಣೆ ವ್ಯವಸ್ಥೆಯನುಸಾರ ಮಾರ್ಚ್ 2018ಕ್ಕೆ ಅಂತ್ಯಗೊಂಡ ವರ್ಷದ ಪಂಚಾಯತ್ ರಾಜ್ ಸಂಸ್ಥೆಗಳ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಪರಿಶೀಲನಾ ವರದಿಯನ್ನು ಕರ್ನಾಟಕ ಸರ್ಕಾರಕ್ಕೆ ಸಲ್ಲಿಸುವುದಕ್ಕಾಗಿ ಸಿದ್ಧಪಡಿಸಲಾಗಿದೆ.

ಈ ವರದಿಯು, ರಾಜ್ಯದಲ್ಲಿನ ಪಂಚಾಯತ್ ರಾಜ್ ಸಂಸ್ಥೆಗಳ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಲೆಕ್ಕಪರಿಶೋಧನೆಯ ಗಮನಾರ್ಹ ಫಲಿತಾಂಶಗಳನ್ನು ಒಳಗೊಂಡಿದೆ.

ಈ ವರದಿಯಲ್ಲಿ ತಿಳಿಸಿರುವ ಪ್ರಕರಣಗಳು 2017–18ರ ವರ್ಷದಲ್ಲಿ ಲೆಕ್ಕಪತ್ರಗಳ ಪರೀಕ್ಷಾ–ಪರಿಶೀಲನೆಯ ಸಮಯದಲ್ಲಿ ಗಮನಕ್ಕೆ ಬಂದವುಗಳೇ ಅಲ್ಲದೆ ಅದಕ್ಕಿಂತ ಮುಂಚಿನ ವರ್ಷಗಳಲ್ಲಿ ಗಮನಿಸಿದ್ದಾದರೂ ಹಿಂದಿನ ವರದಿಗಳಲ್ಲಿ ಸೇರಿಸಲಾಗದೇ ಇರುವಂತಹವುಗಳನ್ನು, ಅವಶ್ಯವಿದ್ದೆಡೆಯಲ್ಲಿ, ಸೇರಿಸಲಾಗಿದೆ.

ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ನೀಡಿರುವ ಲೆಕ್ಕಪರಿಶೋಧನಾ ಮಾನದಂಡಗಳ ಅನುಸಾರ ಲೆಕ್ಕಪರಿಶೋಧನೆಯನ್ನು ನಡೆಸಲಾಗಿದೆ.

ಭಾಷಾಂತರಿಸಿದ ಈ ಆವೃತ್ತಿಯಲ್ಲಿನ ಯಾವುದೇ ಸಂದೇಹಗಳಿಗೆ ಆಂಗ್ಲ ಭಾಷಾ ಆವೃತ್ತಿಯೇ ಅಧಿಕೃತವೆಂದು ಪರಿಗಣಿಸಬೇಕು.

# ಅವಲೋಕನ

## ಅವಲೋಕನ

*ಈ ವರದಿಯು ನಾಲ್ಕು ಅಧ್ಯಾಯಗಳನ್ನು ಒಳಗೊಂಡಿದೆ. ಮೊದಲನೇ ಮತ್ತು ಮೂರನೇ ಅಧ್ಯಾಯಗಳು ಅನುಕ್ರಮವಾಗಿ ಪಂಚಾಯತ್ ರಾಜ್ ಸಂಸ್ಥೆಗಳ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಹೊಣೆಗಾರಿಕೆ ಚೌಕಟ್ಟು ಮತ್ತು ಹಣಕಾಸು ವರದಿಯನ್ನು ಒಳಗೊಂಡಿದೆ. ಎರಡನೇ ಅಧ್ಯಾಯವು ಪಂಚಾಯತ್ ರಾಜ್ ಸಂಸ್ಥೆಗಳ ಅನುಪಾಲನಾ ಲೆಕ್ಕಪರಿಶೋಧನೆಯ ವರದಿಯ ಫಲವಾಗಿ ಕಂಡುಬಂದಂತಹ ಅಂಶಗಳನ್ನು ಒಳಗೊಂಡಿದೆ. ನಾಲ್ಕನೆಯ ಅಧ್ಯಾಯವು ನಗರ ಸ್ಥಳೀಯ ಸಂಸ್ಥೆಗಳ ಅನುಪಾಲನಾ ಲೆಕ್ಕಪರಿಶೋಧನೆಯ ವರದಿಯ ಫಲವಾಗಿ ಕಂಡುಬಂದಂತಹ ಅಂಶಗಳನ್ನು ಒಳಗೊಂಡಿದೆ. ಲೆಕ್ಕಪರಿಶೋಧನೆಯಲ್ಲಿ ಕಂಡುಬಂದ ಅಂಶಗಳ ಸಾರಾಂಶವನ್ನು ಈ ಸಾಮಾನ್ಯ ಅವಲೋಕನದಲ್ಲಿ ನೀಡಲಾಗಿದೆ.*

## 1. ಪಂಚಾಯತ್ ರಾಜ್ ಸಂಸ್ಥೆಗಳ ಹೊಣೆಗಾರಿಕೆ ಚೌಕಟ್ಟು ಮತ್ತು ಹಣಕಾಸಿನ ವರದಿ

*2015–16ಕ್ಕೆ ಹೋಲಿಸಿದಾಗ 2017–18ರಲ್ಲಿ ಜಿಲ್ಲಾ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿಗಳ ಸ್ವೀಕೃತಿಗಳು ಶೇಕಡಾ 10ರಷ್ಟು ಹೆಚ್ಚಳಗೊಂಡಿದ್ದವು ಹಾಗೂ ರಾಜ್ಯದ ಅನುದಾನ/ನಿಯೋಜಿತ ರಾಜಸ್ವದ ವೆಚ್ಚಗಳು ಶೇಕಡಾ 11ರಷ್ಟು ಇಳಿಕೆಗೂಂಡಿದವ್ವು. ಹದಿನಾಲ್ಕನೇ ಹಣಕಾಸು ಆಯೋಗದ ಅನುದಾನವು ₹24.24 ಕೋಟಿಯಷ್ಟು ಕಡಿಮೆ ಸ್ವೀಕೃತವಾಗಿತ್ತು. ಹದಿನಾಲ್ಕನೇ ಹಣಕಾಸು ಆಯೋಗದ ಅನುದಾನದ ₹64.63 ಲಕ್ಷವನ್ನು ಗ್ರಾಮ ಪಂಚಾಯತಿಗಳಿಗೆ ಬಿಡುಗಡೆ ಮಾಡದೆ ಸ್ವೀಪ್–ಇನ್ ಠೇವಣಿ ಖಾತೆಯಲ್ಲಿ ಹೂಡಿಕೆ ಇಡಲಾಗಿತ್ತು. ಮಾರ್ಚ 2018ರ ಅಂತ್ಯದ ವೇಳೆಗೆ ಕೇಂದ್ರ/ರಾಜ್ಯ ಹಣಕಾಸು ಆಯೋಗದ ಅನುದಾನದಲ್ಲಿ ₹5.01 ಕೋಟಿಯನ್ನು ಉಳಿತಾಯ ಖಾತೆಯಲ್ಲಿ ಹಾಗು ₹83.16 ಕೋಟಿಯನ್ನು ಸ್ವಿಪ್–ಇನ್ ಠೇವಣಿ ಖಾತೆಯಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಪಂಚಾಯತ್ ರಾಜ್ ಸಂಸ್ಥೆಗಳಿಗೆ ಬಿಡುಗಡೆ ಮಾಡದೆ ಉಳಿಸಿಕೊಂಡಿತ್ತು. ಅಕ್ಟೋಬರ್ 2018ರಲ್ಲಿದ್ದಂತೆ ನೋಂದಣಿಗಳ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು 2016–17ನೇ ಹಾಗೂ 2017–18 ವರ್ಷದ ಸ್ಥಿರ ಸ್ವತ್ತುಗಳ ವರ್ಗಾವಣೆ ಮೇಲೆ ಶುಲ್ಕವನ್ನು ತಾಲ್ಲೂಕು ಪಂಚಾಯತಿಗಳಿಗೆ ವರ್ಗಾವಣೆ ಮಾಡಿರಲಿಲ್ಲ. 11 ಜಿಲ್ಲಾ ಪಂಚಾಯತಿಗಳಿಂದ ಮತ್ತು 107 ತಾಲ್ಲೂಕು ಪಂಚಾಯತಿಗಳಿಂದ (1ರಿಂದ 178 ದಿನಗಳು) 2017–18ರ ವಾರ್ಷಿಕ ಲೆಕ್ಕಪತ್ರವನ್ನು ಮಹಾಲೇಖಾಪಾಲರಿಗೆ ಸಲ್ಲಿಸುವಲ್ಲಿ ವಿಳಂಬವಿತ್ತು. 15 ಜಿಲ್ಲಾ ಪಂಚಾಯತಿಗಳು ಹಾಗೂ 51 ತಾಲ್ಲೂಕು ಪಂಚಾಯತಿಗಳು ಅಕ್ಟೋಬರ್ 2018ರ ಅಂತ್ಯದವರೆಗೂ ಮಹಾಲೇಖಾಪಾಲರಿಗೆ 2017–18ನೇ ವರ್ಷದ ಲೆಕ್ಕಪತ್ರವನ್ನು ಸಲ್ಲಿಸಿರುವುದಿಲ್ಲ. ಮಾರ್ಚ್ 2018ರವರೆಗೆ 4,739 ಕಂಡಿಕೆಗಳನ್ನು (ಶೇಕಡಾ 29.5) ಒಳಗೊಂಡ 1,820 ತಪಾಸಣಾ ವರದಿಗಳು (ಶೇಕಡಾ 51.4), 10 ವರ್ಷಗಳಿಗೂ ಮೇಲ್ಪಟ್ಟು ಬಾಕಿ ಉಳಿದಿವೆ. ಇದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಅಸಮರ್ಪಕ ಕ್ರಮವನ್ನು ಸೂಚಿಸುತ್ತದೆ.*

***(ಅಧ್ಯಾಯ I)***

## 2. ಅನುಪಾಲನಾ ಲೆಕ್ಕಪರಿಶೋಧನೆ – ಪಂಚಾಯತ್ ರಾಜ್ ಸಂಸ್ಥೆಗಳು

- ***ಗ್ರಾಮ ಪಂಚಾಯತಿಗಳಿಂದ ಉಪಕರದ ಮೊತ್ತದ ಮಾರ್ಗಪಲ್ಲಟ***

*ಗ್ರಾಮ ಪಂಚಾಯತಿಗಳು ವಿವಿಧ ಉಪಕರದ ಮೊತ್ತಗಳನ್ನು ಜಮೆ ಮಾಡದಿರುವುದು ತಮ್ಮದೇ ವೆಚ್ಚಗಳಿಗೆ ₹1.32 ಕೋಟಿಗಳನ್ನು ಮಾರ್ಗಪಲ್ಲಟ ಮಾಡಲು ಅವಕಾಶ ಮಾಡಿಕೊಟ್ಟಿತು ಮತ್ತು ಉಪಕರಗಳನ್ನು ವಿಧಿಸಿ ಸಂಗ್ರಹಿಸಿದ್ದ ಉದ್ದೇಶವನ್ನೇ ಸೋಲಿಸಿದಂತಾಯಿತು.*

***(ಕಂಡಿಕೆ 2.1)***

➢ **ಸಾರ್ವಜನಿಕ ಹಣದ ದುರ್ಬಳಕೆ/ವ್ಯರ್ಥ ಉಪಯೋಗ**

*ಗಂಗಾವತಿ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಯವರು ಯಾವುದೇ ಸಾರ್ವಜನಿಕ ಹಿತಾಸಕ್ತಿಯಿಲ್ಲದೇ ಮುದ್ರಣ/ಎಲೆಕ್ಟ್ರಾನಿಕ್ ಮಾಧ್ಯಮಗಳಲ್ಲಿ ಶುಭಾಶಯಗಳು ಮತ್ತು ಸಂದೇಶಗಳನ್ನು ಪ್ರಕಟಿಸಲು ₹22.47 ಕೋಟಿಗಳನ್ನು ವೆಚ್ಚ ಮಾಡಿದರು.*

**(ಕಂಡಿಕೆ 2.2)**

## 3. ನಗರ ಸ್ಥಳೀಯ ಸಂಸ್ಥೆಗಳ ಹೊಣೆಗಾರಿಕೆ ಚೌಕಟ್ಟು ಮತ್ತು ಹಣಕಾಸಿನ ವರದಿ

*ಆಸ್ತಿ ತೆರಿಗೆಯ ವಸೂಲಾತಿಗೆ ಹೋಲಿಸಿದಾಗ ಪಾವತಿಯು ಕಳಪೆಯಾಗಿತ್ತು. ನಗರ ಸ್ಥಳೀಯ ಸಂಸ್ಥೆಗಳು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು ಒಳಗೊಂಡಂತೆ ಆರೋಗ್ಯ ಉಪಕರ, ಗ್ರಂಥಾಲಯ ಉಪಕರ ಮತ್ತು ಭಿಕ್ಷಾಟನೆ ಉಪಕರವನ್ನು ಸಂಬಂಧಪಟ್ಟ ಇಲಾಖೆಗಳಿಗೆ ಜಮೆ ಮಾಡಿರಲಿಲ್ಲ ಅಥವಾ ಕಡಿಮೆ ಜಮೆ ಮಾಡಿದರು. ಅಕ್ಟೋಬರ್ 2018ರಲ್ಲಿದ್ದಂತೆ ನೋಂದಣಿಗಳ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು 2016–17ನೇ ಹಾಗೂ 2017–18 ವರ್ಷದ ಸ್ಥಿರ ಸ್ವತ್ತುಗಳ ವರ್ಗಾವಣೆ ಮೇಲೆ ಶುಲ್ಕವನ್ನು ನಗರ ಸ್ಥಳೀಯ ಸಂಸ್ಥೆಗಳಿಗೆ ವರ್ಗಾವಣೆ ಮಾಡಿರಲಿಲ್ಲ. ರಾಜ್ಯ ಸರ್ಕಾರವು ಸಾಲೇತರ ನಿವ್ವಳ ಸ್ವಂತ ರಾಜಸ್ವ ಸ್ವೀಕೃತಿಗಳ ಅನುಗುಣವಾಗಿ ನಿರ್ದಿಷ್ಟ ಪಡಿಸಿದ ಶೇಕಡಾ 10ರ ಬದಲಾಗಿ ಶೇಕಡಾ 6.93ರಷ್ಟನ್ನು ಮಾತ್ರ ಬಿಡುಗಡೆಗೊಳಿಸಿತು. ನಗರ ಸ್ಥಳೀಯ ಸಂಸ್ಥೆಗಳ ಕಾರ್ಯಚಟುವಟಿಕೆಗಳನ್ನು ಮೇಲ್ವಿಚಾರಣೆ ಮಾಡುವ ಸಲುವಾಗಿ ರಾಜ್ಯ ಸರ್ಕಾರವು ಆಂತರಿಕ ಲೆಕ್ಕಪರಿಶೋಧನೆ ವಿಭಾಗವನ್ನು ಹೊಂದಿರಲಿಲ್ಲ. ರಾಜ್ಯದಲ್ಲಿ ಆಸ್ತಿ ತೆರಿಗೆ ಮಂಡಳಿಯನ್ನು ಸ್ಥಾಪಿಸಿರಲಿಲ್ಲ (ನವೆಂಬರ್ 2018). ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯು 2016–17 ಮತ್ತು 2017–18ರ ವರ್ಷದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸಂಬಂಧಿಸಿದ ಲೆಕ್ಕಪತ್ರಗಳ ಲೆಕ್ಕಪರಿಶೋಧನೆಯನ್ನು ನೆಡಸಿರಲಿಲ್ಲ. ಮಾರ್ಚ್ 2018ರ ವೇಳೆಗೆ, 4,109 ಕಂಡಿಕೆಗಳನ್ನು ಒಳಗೊಂಡ 265 ತಪಾಸಣಾ ವರದಿಗಳು ಮೂರು ವರ್ಷಗಳಿಗೂ ಮೇಲ್ಪಟ್ಟು ಬಾಕಿ ಉಳಿದಿವೆ. ಇದು ನಗರ ಸ್ಥಳೀಯ ಸಂಸ್ಥೆಗಳ ಅಸಮರ್ಪಕ ಕ್ರಮವನ್ನು ಸೂಚಿಸುತ್ತದೆ.*

**(ಅಧ್ಯಾಯ III)**

## 4. ಅನುಪಾಲನಾ ಲೆಕ್ಕಪರಿಶೋಧನೆ – ನಗರ ಸ್ಥಳೀಯ ಸಂಸ್ಥೆಗಳು

➢ **ದಂಡದ ಬಡ್ಡಿಯ ತಪ್ಪಿಸಬಹುದಾಗಿದ್ದ ಪಾವತಿ**

*ಆಯವ್ಯಯ ಅವಕಾಶಗಳು ಮತ್ತು ಪರ್ಯಾಪ್ತ ನಿಧಿಗಳು ಲಭ್ಯವಿದ್ದರೂ ಸಹ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಸಾಲದ ಕಂತುಗಳನ್ನು ಮರುಪಾವತಿಸುವಲ್ಲಿ ನಿರಂತರವಾಗಿ ಸುಸ್ತಿದಾರನಾಗಿದ್ದು, ₹20.07 ಕೋಟಿ ತಪ್ಪಿಸಬಹುದಾಗಿದ್ದ ದಂಡದ ಬಡ್ಡಿಯನ್ನು ಪಾವತಿಸುವಲ್ಲಿ ಪರಿಣಮಿಸಿತು.*

**(ಕಂಡಿಕೆ 4.1)**

➢ **ಆಸ್ತಿ ತೆರಿಗೆ ತಪ್ಪಾದ ನಿರ್ಧಾರಣೆಯಿಂದ ಆದಾಯದ ನಷ್ಟ**

*ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಬೊಮ್ಮನಹಳ್ಳಿ ವಲಯದ ಜಂಟಿ ಆಯುಕ್ತರು ಕಟ್ಟಡವೊಂದರ ಕಾರಿಡಾರ್/ಸೇವಾಪ್ರದೇಶವನ್ನು ಕಡಿಮೆ ದರದಲ್ಲಿ ತಪ್ಪಾಗಿ ನಿರ್ಣಯಿಸಿದರು. ಆಸ್ತಿ ತೆರಿಗೆಯನ್ನು ವಿಧಿಸಲು ಅನುಭೋಗತಾ ಪ್ರಮಾಣಪತ್ರದ ದಿನಾಂಕವನ್ನು ಸಹ ಅವರು ಪರಿಗಣಿಸಲಿಲ್ಲ. ಇವುಗಳು ತೆರಿಗೆಯನ್ನು ಕಡಿಮೆ ನಿರ್ಣಯಿಸುವಲ್ಲಿ ಪರಿಣಮಿಸಿ ತತ್ಪರಿಣಾಮವಾಗಿ ₹6.72 ಕೋಟಿ ಆದಾಯದ ನಷ್ಟವಾಯಿತು.*

**(ಕಂಡಿಕೆ 4.2)**

➢ ***ಆದಾಯದ ನಷ್ಟ***

*ಬೊಮ್ಮನಹಳ್ಳಿ ಬಿಬಿಎಮ್‌ಪಿ ಆರೋಗ್ಯ ವಿಭಾಗದ ಆರೋಗ್ಯ ಅಧಿಕಾರಿಗಳ ಕಛೇರಿಯಲ್ಲಿ ವಾಣಿಜ್ಯ ಪರವಾನಗಿಗಳನ್ನು ಮೋಸದಿಂದ ನೀಡಿರುವುದು ಮತ್ತು ಆನ್‌ಲೈನ್ ವಾಣಿಜ್ಯ ಪರವಾನಗಿ ವ್ಯವಸ್ಥೆಯನ್ನು ಕಾಲ್ಪನಿಕ ಸಂಖ್ಯೆಗಳೊಂದಿಗೆ ಬದಲಾಯಿಸಿರುವುದು ₹3.75 ಕೋಟಿ ಆದಾಯದ ನಷ್ಟದಲ್ಲಿ ಪರಿಣಮಿಸಿತು. ಅಲ್ಲದೆ, ₹22.44 ಲಕ್ಷ ಮೊತ್ತದ 354 ಬ್ಯಾಂಕರ್ಸ್ ಚೆಕ್ಕುಗಳನ್ನು/ಡಿಮ್ಯಾಂಡ್ ಡ್ರಾಫ್ಟ್‌ಗಳನ್ನು ಬ್ಯಾಂಕ್ ಖಾತೆಗೆ ಜಮೆ ಮಾಡದೆ ಸಂಹಿತೆಯ ನಿಬಂಧನೆಗಳನ್ನು ಅನುಪಾಲಿಸಲು ಆರೋಗ್ಯಾಧಿಕಾರಿಗಳು ವಿಫಲರಾದರು.*

***(ಕಂಡಿಕೆ 4.3)***

➢ ***ಒಪ್ಪಂದದ ಬೇಡಿಕೆಯ ಪರಿವರ್ತನೆ/ಮಾರ್ಪಾಟು ಮಾಡದಿದ್ದುದರಿಂದ ಹಾಗೂ ವಿದ್ಯುತ್ ಅಂಶದ ನಿರ್ವಹಣೆ ಮಾಡದಿದ್ದುದರಿಂದಾದ ತಪ್ಪಿಸಬಹುದಾಗಿದ್ದ ಪಾವತಿ***

*ಕಲಬುರಗಿ ಮಹಾನಗರ ಪಾಲಿಕೆ, ರಾಮನಗರ ಪುರಸಭೆ ಮತ್ತು ಹರಪನಹಳ್ಳಿ, ಕಾರ್ಕಳ ಹಾಗೂ ಮಳವಳ್ಳಿ ಪಟ್ಟಣ ಪಂಚಾಯತಿಗಳು ಒಪ್ಪಂದದ ಬೇಡಿಕೆಯನ್ನು ಬಳಕೆಗೆ ಅನುಗುಣವಾಗಿ ಮಾರ್ಪಾಟು ಮಾಡಲು ಕ್ರಮ ಕೈಗೊಳ್ಳದಿರುವುದು ಹಾಗೂ ವಿದ್ಯುತ್ ಅಂಶವನ್ನು ನಿಗದಿತ ಮಟ್ಟದಲ್ಲಿ ನಿರ್ವಹಿಸದಿರುವುದು 2015–16ರಿಂದ 2017–18ರ ಅವಧಿಯಲ್ಲಿ ₹94.93 ಲಕ್ಷ ತಪ್ಪಿಸಬಹುದಾಗಿದ್ದ ಪಾವತಿಯಲ್ಲಿ ಪರಿಣಮಿಸಿತು.*

***(ಕಂಡಿಕೆ 4.4)***

➢ ***ಹೆಚ್ಚುವರಿ ನೆಲಬಾಡಿಗೆಯನ್ನು ವಸೂಲು ಮಾಡದಿದ್ದುದರಿಂದ ಆದಾಯದ ನಷ್ಟ***

*ಕಟ್ಟಡ ಪರವಾನಗಿ ನೀಡಿದ ದಿನಾಂಕದಿಂದ ಎರಡು ವರ್ಷಗಳೊಳಗೆ ಕಟ್ಟಡಗಳನ್ನು ಪೂರ್ಣಗೊಳಿಸದ ಆರು ಪರೀಕ್ಷಾ–ತನಿಖೆ ನಡೆಸಿದ ಪ್ರಕರಣಗಳಲ್ಲಿ ಹೆಚ್ಚುವರಿ ನೆಲಬಾಡಿಗೆಯನ್ನು ಸಂಗ್ರಹ ಮಾಡುವಲ್ಲಿನ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಿಫಲತೆಯು ₹36.50 ಲಕ್ಷ ಆದಾಯದ ನಷ್ಟದಲ್ಲಿ ಪರಿಣಮಿಸಿತು.*

***(ಕಂಡಿಕೆ 4.5)***

➢ ***ಮೇಲ್ವಾಟು ವೆಚ್ಚವನ್ನು ಕಡಿಮೆ ಸಂಗ್ರಹಣೆ ಮಾಡಿದ್ದರಿಂದಾದ ಆದಾಯದ ನಷ್ಟ***

*ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಂಜನಾಪುರ ಉಪವಿಭಾಗದ ಸಹಾಯಕ ಕಂದಾಯ ಅಧಿಕಾರಿಯವರಿಂದ ಮೇಲ್ವಾಟು ವೆಚ್ಚದ ಕಡಿಮೆ ಸಂಗ್ರಹಣೆಯು ₹31.21 ಲಕ್ಷ ಆದಾಯದ ನಷ್ಟದಲ್ಲಿ ಪರಿಣಮಿಸಿತು.*

***(ಕಂಡಿಕೆ 4.6)***

# ಅಧ್ಯಾಯ - I

# ಪಂಚಾಯತ್ ರಾಜ್ ಸಂಸ್ಥೆಗಳ ಹೊಣೆಗಾರಿಕೆ ಚೌಕಟ್ಟು ಮತ್ತು ಹಣಕಾಸಿನ ವರದಿ

# ಅಧ್ಯಾಯ–I

## ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

## ಪಂಚಾಯತ್ ರಾಜ್ ಸಂಸ್ಥೆಗಳ ಹೊಣೆಗಾರಿಕೆ ಚೌಕಟ್ಟು ಮತ್ತು ಹಣಕಾಸಿನ ವರದಿ

## 1.1 ಪೀಠಿಕೆ

ಸಂವಿಧಾನದ 73ನೆಯ ತಿದ್ದುಪಡಿಯ ಪರಿಣಾಮವಾಗಿ, ರಾಜ್ಯದಲ್ಲಿ ಗ್ರಾಮ, ತಾಲ್ಲೂಕು ಹಾಗೂ ಜಿಲ್ಲಾ ಮಟ್ಟಗಳಲ್ಲಿ ಮೂರು ಹಂತಗಳ ಪಂಚಾಯತ್ ರಾಜ್ ಸಂಸ್ಥೆಗಳ ವ್ಯವಸ್ಥೆಯನ್ನು ಸ್ಥಾಪಿಸುವುದಕ್ಕಾಗಿ ರಾಜ್ಯ ಸರ್ಕಾರವು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ನ್ನು ಕಾಯಿದೆಯ ಮೂಲಕ ಜಾರಿಗೊಳಿಸಿತು ಹಾಗೂ ಪಂಚಾಯತ್ ರಾಜ್ ಸಂಸ್ಥೆಗಳು ಸ್ಥಳೀಯ ಸ್ವಯಂ ಸರ್ಕಾರಗಳಾಗಿ ಕಾರ್ಯ ನಿರ್ವಹಿಸುವುದಕ್ಕೆ ಅನುವುಗೊಳಿಸುವ ಸಲುವಾಗಿ ನಿಯಮಗಳನ್ನು ರಚಿಸಿತು. ಈ ತಿದ್ದುಪಡಿಯು, ಸಂವಿಧಾನದ ಹನ್ನೊಂದನೇ ಅನುಸೂಚಿಯಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳಿಗೆ ವರ್ಗಾಯಿಸಬೇಕಾದ ಕಾರ್ಯಕ್ರಮಗಳನ್ನು ಪಟ್ಟಿ ಮಾಡಿತು.

ಪಂಚಾಯತ್ ರಾಜ್ ಸಂಸ್ಥೆಗಳು ಜನತೆಯ ಭಾಗವಹಿಸುವಿಕೆಯನ್ನು ಹಾಗೂ ಆರ್ಥಿಕ ಅಭಿವೃದ್ಧಿ ಮತ್ತು ಸಾಮಾಜಿಕ ನ್ಯಾಯಕ್ಕಾಗಿ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದಕ್ಕೆ ಪ್ರೋತ್ಸಾಹ ನೀಡುವ ಗುರಿಯನ್ನು ಹೊಂದಿದೆ.

### *1.1.1 ರಾಜ್ಯದ ಚಿತ್ರಣ*

ರಾಜ್ಯದ ಜನಸಂಖ್ಯಾಶಾಸ್ತ್ರ ಹಾಗೂ ವಿಕಾಸಾತ್ಮಕ ವಿಷಯಗಳಿಗೆ ಸಂಬಂಧಿಸಿದಂತೆ ತುಲನಾತ್ಮಕ ಚಿತ್ರಣವನ್ನು **ಕೋಷ್ಟಕ 1.1**ರಲ್ಲಿ ನೀಡಲಾಗಿದೆ. ಕರ್ನಾಟಕದಲ್ಲಿ ಜನಸಂಖ್ಯೆಯ ಬೆಳವಣಿಗೆಯು ಕಳೆದ ದಶಕದಲ್ಲಿ ಶೇಕಡಾ 15.60ರಷ್ಟಿದ್ದಿತು ಹಾಗೂ ಇದು ರಾಷ್ಟ್ರೀಯ ಸರಾಸರಿಯಾದ ಶೇಕಡಾ 17.70ಕ್ಕಿಂತ ಕಡಿಮೆಯಿದ್ದಿತು.

ನಗರ ಮತ್ತು ಗ್ರಾಮೀಣ ಜನಸಂಖ್ಯೆಯ ದಶವಾರ್ಷಿಕ ಬೆಳವಣಿಗೆಯು ಅನುಕ್ರಮವಾಗಿ ಶೇಕಡಾ 7.63 ಹಾಗೂ ಶೇಕಡಾ 31.27ರಷ್ಟಿದ್ದಿತು. 2011ರ ಜನಗಣತಿಯ ಪ್ರಕಾರ ರಾಜ್ಯದ ಜನಸಂಖ್ಯೆಯು 6.11 ಕೋಟಿಯಷ್ಟಿದ್ದು ಅದರಲ್ಲಿ ಮಹಿಳೆಯರು ಶೇಕಡಾ 49.20ರಷ್ಟಿದ್ದರು. ರಾಜ್ಯವು 114 ಹಿಂದುಳಿದ ತಾಲ್ಲೂಕುಗಳನ್ನು ಹೊಂದಿದೆ ಹಾಗೂ ಅವುಗಳ ಪೈಕಿ 14 ಜಿಲ್ಲೆಗಳಲ್ಲಿ ವ್ಯಾಪಿಸಿರುವ 39 ತಾಲ್ಲೂಕುಗಳು ಅತ್ಯಂತ ಹಿಂದುಳಿದ ತಾಲ್ಲೂಕುಗಳಾಗಿವೆ.

**ಕೋಷ್ಟಕ 1.1: ರಾಜ್ಯದ ಪ್ರಮುಖ ಅಂಕಿಅಂಶಗಳು**

| ಸೂಚಕಗಳು | ಪರಿಮಾಣ | ರಾಜ್ಯ | ರಾಷ್ಟ್ರ |
|---|---|---|---|
| ಜನಸಂಖ್ಯೆ | 1,000ಗಳಲ್ಲಿ | 61,095 | 12,10,855 |
| ಜನಸಂಖ್ಯಾ ಸಾಂದ್ರತೆ | ಚದರಕಿಮೀ ಒಂದಕ್ಕೆ ವ್ಯಕ್ತಿಗಳು | 319 | 382 |
| ನಗರ ಜನಸಂಖ್ಯೆ | ಶೇಕಡಾವಾರು | 38.70 | 31.20 |
| ಪಂಚಾಯತ್ ರಾಜ್ ಸಂಸ್ಥೆಗಳ ಸಂಖ್ಯೆ | ಸಂಖ್ಯೆಗಳಲ್ಲಿ | 6,228 | 2,40,540 (ಅಂದಾಜು) |
| ಜಿಲ್ಲಾ ಪಂಚಾಯತಿಗಳ ಸಂಖ್ಯೆ | ಸಂಖ್ಯೆಗಳಲ್ಲಿ | 30 | 540 (ಅಂದಾಜು) |
| ತಾಲ್ಲೂಕು ಪಂಚಾಯತಿಗಳ ಸಂಖ್ಯೆ | ಸಂಖ್ಯೆಗಳಲ್ಲಿ | 176 | 6,000 (ಅಂದಾಜು) |
| ಗ್ರಾಮ ಪಂಚಾಯತಿಗಳ ಸಂಖ್ಯೆ | ಸಂಖ್ಯೆಗಳಲ್ಲಿ | 6,024 | 2,34,000 (ಅಂದಾಜು) |
| ಲಿಂಗಾನುಪಾತ (ಪ್ರತೀ 1,000 ಪುರುಷರಿಗೆ ಮಹಿಳೆಯರ ಸಂಖ್ಯೆ) | ಸಂಖ್ಯೆಗಳಲ್ಲಿ | 973 | 943 |
| ಸಾಕ್ಷರತಾ ಪ್ರಮಾಣ | ಶೇಕಡಾವಾರು | 75.40 | 73.00 |

ಆಧಾರ: 2016–17ನೇ ಸಾಲಿನ ಆರ್ಥಿಕ ಸಮೀಕ್ಷಾ ವರದಿ ಮತ್ತು ಜನಗಣತಿ 2011

## 1.2 ಪಂಚಾಯತ್ ರಾಜ್ ಸಂಸ್ಥೆಗಳ ಸಾಂಸ್ಥಿಕ ರಚನೆ

ರಾಜ್ಯಮಟ್ಟದಲ್ಲಿ ಕರ್ನಾಟಕ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರ ನೇತೃತ್ವದಲ್ಲಿರುವ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಸಂಪರ್ಕಸೇತು

ಇಲಾಖೆಯಾಗಿದೆ. ಪಂಚಾಯತ್ ರಾಜ್ ಸಂಸ್ಥೆಗಳ ಕಾರ್ಯಚಟುವಟಿಕೆಗಳಿಗೆ ಸಂಬಂಧಿಸಿದಂತೆ ಸಾಂಸ್ಥಿಕ ರಚನೆಯನ್ನು **ಅನುಬಂಧ 1.1**ರಲ್ಲಿ ನೀಡಲಾಗಿದೆ.

### *1.2.1 ಸ್ಥಾಯಿ ಸಮಿತಿಗಳು*

ಪಂಚಾಯತ್ ರಾಜ್ ಸಂಸ್ಥೆಗಳಿಗೆ ವಹಿಸಲಾಗಿರುವ ಕಾರ್ಯಚಟುವಟಿಕೆಗಳನ್ನು ನೆರವೇರಿಸಿಕೊಂಡು ಹೋಗುವುದಕ್ಕಾಗಿ ಸ್ಥಾಯಿ ಸಮಿತಿಗಳನ್ನು ರಚಿಸಲಾಗಿದೆ. ಸಮಿತಿಗಳ ರಚನಾಕ್ರಮವನ್ನು ಕೆಳಗಿನ **ಕೋಷ್ಟಕ 1.2**ರಲ್ಲಿ ನೀಡಲಾಗಿದೆ:

**ಕೋಷ್ಟಕ 1.2: ಸ್ಥಾಯಿ ಸಮಿತಿಗಳ ರಚನಾಕ್ರಮ**

| ಪಂಚಾಯತ್ ರಾಜ್ ಸಂಸ್ಥೆಗಳ ಮಟ್ಟ | ಮುಖ್ಯಕಾರ್ಯನಿರ್ವಾಹಕರು | ಸ್ಥಾಯಿ ಸಮಿತಿಗಳು | ಸ್ಥಾಯಿ ಸಮಿತಿಯ ಕಾರ್ಯನಿರ್ವಾಹಕರು |
|---|---|---|---|
| ಗ್ರಾಮ ಪಂಚಾಯತಿ | ಅಧ್ಯಕ್ಷರು | (ಎ) ಸಾಮಾನ್ಯ ಸ್ಥಾಯಿ ಸಮಿತಿ<br>(ಬಿ) ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸಮಿತಿ<br>(ಸಿ) ಸಾಮಾಜಿಕ ನ್ಯಾಯ ಸಮಿತಿ | (ಎ) ಉಪಾಧ್ಯಕ್ಷರು<br>(ಬಿ) ಅಧ್ಯಕ್ಷರು<br>(ಸಿ) ಅಧ್ಯಕ್ಷರು (ಅನುಸೂಚಿತ ಜಾತಿ ಅಥವಾ ಅನುಸೂಚಿತ ಪಂಗಡಗಳ ಚುನಾಯಿತ ಸದಸ್ಯರಿಂದ ಆಯ್ಕೆಯಾದವರು) |
| ತಾಲ್ಲೂಕು ಪಂಚಾಯತಿ | ಅಧ್ಯಕ್ಷರು | (ಎ) ಸಾಮಾನ್ಯ ಸ್ಥಾಯಿ ಸಮಿತಿ<br>(ಬಿ) ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸಮಿತಿ<br>(ಸಿ) ಸಾಮಾಜಿಕ ನ್ಯಾಯ ಸಮಿತಿ | (ಎ) ಉಪಾಧ್ಯಕ್ಷರು<br>(ಬಿ) ಅಧ್ಯಕ್ಷರು<br>(ಸಿ) ಅಧ್ಯಕ್ಷರು (ಇತರ ಸ್ಥಾಯಿ ಸಮಿತಿಯ ಸದಸ್ಯರಿಂದ ಆಯ್ಕೆಯಾದವರು) |
| ಜಿಲ್ಲಾ ಪಂಚಾಯತಿ | ಅಧ್ಯಕ್ಷರು | (ಎ) ಸಾಮಾನ್ಯ ಸ್ಥಾಯಿ ಸಮಿತಿ<br>(ಬಿ) ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸಮಿತಿ<br>(ಸಿ) ಸಾಮಾಜಿಕ ನ್ಯಾಯ ಸಮಿತಿ<br>(ಡಿ) ಶಿಕ್ಷಣ ಮತ್ತು ಆರೋಗ್ಯ ಸಮಿತಿ<br>(ಇ) ಕೃಷಿ ಮತ್ತು ಕೈಗಾರಿಕೆಗಳ ಸಮಿತಿ | (ಎ) ಉಪಾಧ್ಯಕ್ಷರು<br>(ಬಿ) ಅಧ್ಯಕ್ಷರು<br>(ಸಿ) ಅಧ್ಯಕ್ಷರು (ಇತರ ಸ್ಥಾಯಿ ಸಮಿತಿಯ ಸದಸ್ಯರಿಂದ ಆಯ್ಕೆಯಾದವರು)<br>(ಡಿ) ಅಧ್ಯಕ್ಷರು (ಇತರ ಸ್ಥಾಯಿ ಸಮಿತಿಯ ಸದಸ್ಯರಿಂದ ಆಯ್ಕೆಯಾದವರು)<br>(ಇ) ಅಧ್ಯಕ್ಷರು (ಇತರ ಸ್ಥಾಯಿ ಸಮಿತಿಯ ಸದಸ್ಯರಿಂದ ಆಯ್ಕೆಯಾದವರು) |

ಆಧಾರ: ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993

## 1.3 ಉತ್ತರದಾಯಿತ್ವದ ಚೌಕಟ್ಟು

### *1.3.1 ಸಾರ್ವಜನಿಕ ತನಿಖಾಧಿಕಾರಿ*

ಹದಿಮೂರನೇ ಹಣಕಾಸು ಆಯೋಗದ ಶಿಫಾರಸುಗಳ ಪ್ರಕಾರ, ರಾಜ್ಯ ಸರ್ಕಾರವು ಸ್ಥಳೀಯ ಸಂಸ್ಥೆಗಳ ಕಾರ್ಯಕರ್ತರಾದಂತಹ ಚುನಾಯಿತ ಸದಸ್ಯರು ಮತ್ತು ಅಧಿಕಾರಿಗಳಿಬ್ಬರ ವಿರುದ್ಧ ಭ್ರಷ್ಟಾಚಾರ ಮತ್ತು ದುರ್ಬಳಕೆ ದೂರುಗಳನ್ನು ತನಿಖೆ ಮಾಡಲು ಸ್ವತಂತ್ರ ಸ್ಥಳೀಯ ಸಾರ್ವಜನಿಕ ತನಿಖಾಧಿಕಾರಿಯ ವ್ಯವಸ್ಥೆಯನ್ನು ನಿಗದಿ ಪಡಿಸಬೇಕಿತ್ತು.

ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಪಂಚಾಯತ್ ರಾಜ್ ಸಂಸ್ಥೆಗಳ ವಿವಿಧ ಹಂತಗಳಿಗೆ ಸಾರ್ವಜನಿಕ ತನಿಖಾಧಿಕಾರಿಯಾಗಿ ವಿವಿಧ ಸರಕಾರಿ ಅಧಿಕಾರಿಗಳನ್ನು ನೇಮಕ ಮಾಡಿತು (ಮಾರ್ಚ್ 2014). ಇದು ಭ್ರಷ್ಟಾಚಾರ ಮತ್ತು ದುರ್ಬಳಕೆಯ ದೂರುಗಳನ್ನು ತನಿಖೆ ಮಾಡುವ ಸ್ವತಂತ್ರ ಸಾರ್ವಜನಿಕ ತನಿಖಾಧಿಕಾರಿಯ ನೇಮಕಾತಿಯ ಉದ್ದೇಶದ ವಿರುದ್ಧವಾಗಿತ್ತು.

### *1.3.2 ಲೆಕ್ಕಪರಿಶೋಧನಾ ಅಧ್ಯಾದೇಶ*

**1.3.2.1** ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯು ಗ್ರಾಮ ಪಂಚಾಯತಿಗಳಿಗೆ ಶಾಸನಬದ್ಧ ಬಾಹ್ಯ ಲೆಕ್ಕಪರಿಶೋಧನಾ ಸಂಸ್ಥೆಯಾಗಿದೆ. ಅದರ ಕರ್ತವ್ಯವು, ಇನ್ನಿತರವುಗಳ ಜೊತೆಗೆ, ಲೆಕ್ಕಪತ್ರಗಳ ಯಥಾರ್ಥತೆಯನ್ನು ಪ್ರಮಾಣೀಕರಿಸುವುದು, ಆಂತರಿಕ ನಿಯಂತ್ರಣ ವ್ಯವಸ್ಥೆಯನ್ನು ನಿರ್ಧರಣೆ ಮಾಡುವುದು ಹಾಗೂ ನಷ್ಟ, ಕಳವು ಹಾಗೂ ವಂಚನೆಯ ಪ್ರಕರಣಗಳನ್ನು ಲೆಕ್ಕಪರಿಶೋಧನೆಗೊಳಪಡುವ ಸಂಸ್ಥೆಗಳಿಗೆ ಹಾಗೂ ರಾಜ್ಯ ಸರ್ಕಾರಕ್ಕೆ ವರದಿ ಮಾಡುವುದನ್ನು ಒಳಗೊಂಡಿರುತ್ತದೆ.

ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯು ಡಿಸೆಂಬರ್ 2018 ರವರೆಗೆ ನಡೆಸಿದ ರಾಜ್ಯದಲ್ಲಿನ ಗ್ರಾಮ ಪಂಚಾಯತಿಗಳ ಲೆಕ್ಕಪರಿಶೋಧನೆಯ ಸ್ಥಿತಿಗತಿಯನ್ನು **ಕೋಷ್ಟಕ 1.3**ರಲ್ಲಿ ನೀಡಲಾಗಿದೆ.

**ಕೋಷ್ಟಕ 1.3: ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯು ಡಿಸೆಂಬರ್ 2018 ರವರೆಗೆ ನಡೆಸಿದ ಗ್ರಾಮ ಪಂಚಾಯತಿಗಳ ಲೆಕ್ಕಪರಿಶೋಧನೆಯ ಸ್ಥಿತಿಗತಿ**

| ವರ್ಷ | ಗ್ರಾಮ ಪಂಚಾಯತಿಗಳ ಸಂಖ್ಯೆ | ಲೆಕ್ಕಪರಿಶೋಧನೆಗೊಳಪಟ್ಟ ಗ್ರಾಮ ಪಂಚಾಯತಿಗಳ ಸಂಖ್ಯೆ |
|---|---|---|
| 2013–14 | 5,629 | 5,105 |
| 2014–15 | 5,629 | 5,064 |
| 2015–16 | 6,022 | 5,267 |
| 2016–17 | 6,022 | 5,091 |
| 2017–18 | 6,022 | 3,965 |

ಆಧಾರ: ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯು ನೀಡಿದ ಮಾಹಿತಿ

**1.3.2.2** ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ಜಿಲ್ಲಾ ಪಂಚಾಯತಿಗಳು ಮತ್ತು ತಾಲ್ಲೂಕು ಪಂಚಾಯತಿಗಳ ಲೆಕ್ಕಪತ್ರಗಳನ್ನು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಕರ್ತವ್ಯಗಳು, ಅಧಿಕಾರಗಳು ಮತ್ತು ಸೇವಾ ಷರತ್ತುಗಳ ಅಧಿನಿಯಮ, 1971ರ ಪರಿಚ್ಛೇದ 19(3)ರ ಅಡಿಯಲ್ಲಿ ಲೆಕ್ಕಪರಿಶೋಧನೆ ಮಾಡುವರು ಹಾಗೂ ಲೆಕ್ಕಪತ್ರಗಳನ್ನು ಪ್ರಮಾಣೀಕರಿಸುವರು. ಮಾರ್ಚ್ 2018ರ ಅಂತ್ಯಕ್ಕೆ 92[1] ಪಂಚಾಯತ್ ರಾಜ್ ಸಂಸ್ಥೆಯ ಘಟಕಗಳ 2017–18ರ ವರೆಗಿನ ಲೆಕ್ಕಪತ್ರಗಳ ಲೆಕ್ಕಪರಿಶೋಧನೆಯನ್ನು ಪೂರ್ಣಗೊಳಿಸಲಾಗಿದೆ.

ರಾಜ್ಯ ಸರ್ಕಾರವು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ಕ್ಕೆ ತಿದ್ದುಪಡಿಯನ್ನು ತರುವ ಮೂಲಕ, ತಾಂತ್ರಿಕ ಮಾರ್ಗಸೂಚಿ ಹಾಗೂ ಮೇಲ್ವಿಚಾರಣೆ ಮಾಡ್ಯೂಲಿನ ಅಡಿಯಲ್ಲಿ ಗ್ರಾಮ ಪಂಚಾಯತಿಗಳ ಲೆಕ್ಕಪರಿಶೋಧನೆಯನ್ನು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರಿಗೆ ವಹಿಸಿತು (ಮೇ 2011). ಮಾರ್ಚ್ 2018ರ ಅಂತ್ಯಕ್ಕೆ ತಾಂತ್ರಿಕ ಮಾರ್ಗಸೂಚಿ ಹಾಗೂ ಮೇಲ್ವಿಚಾರಣೆ ಮಾಡ್ಯೂಲಿನ ಅಡಿಯಲ್ಲಿ 50 ಗ್ರಾಮ ಪಂಚಾಯತಿಗಳ 2017–18ರ ವರೆಗಿನ ಲೆಕ್ಕಪರಿಶೋಧನೆಯನ್ನು ನಡೆಸಲಾಗಿದೆ.

### 1.3.2.3 ತಪಾಸಣಾ ವರದಿಗಳಿಗೆ ಪ್ರತಿಕ್ರಿಯೆ

ಇಲಾಖಾ ಮುಖ್ಯಸ್ಥರುಗಳು/ಜಿಲ್ಲಾ ಪಂಚಾಯತಿಗಳ ಬಟವಾಡೆ ಅಧಿಕಾರಿಗಳು (ಡಿಡಿಓಗಳು) ಮಹಾಲೇಖಾಪಾಲರು ನೀಡಲಾದ ಆಕ್ಷೇಪಣೆಗಳಿಗೆ ತ್ವರಿತವಾಗಿ ಗಮನ ನೀಡುವುದನ್ನು ಕರ್ನಾಟಕ ಜಿಲ್ಲಾ ಪಂಚಾಯತ್ (ಹಣಕಾಸು ಮತ್ತು ಲೆಕ್ಕಪತ್ರ) ನಿಯಮಗಳು, 1996 ನಿಗದಿಪಡಿಸಿದೆ. ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ಆಕ್ಷೇಪಣೆಗಳ ತ್ವರಿತ ವಿಲೇವಾರಿಯು ಅಂತಿಮವಾಗಿ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಜವಾಬ್ದಾರಿಯಾಗಿರುತ್ತದೆ ಎಂಬುದಾಗಿಯೂ ಅದು ನಿರ್ದಿಷ್ಟಪಡಿಸಿದೆ. ಮಾರ್ಚ್ 2018ರ ಅಂತ್ಯಕ್ಕೆ, ವಿವಿಧ ಪಂಚಾಯತ್ ರಾಜ್ ಇಲಾಖೆಗಳಲ್ಲಿ 16,078 ಕಂಡಿಕೆಗಳನ್ನು ಒಳಗೊಂಡ 3,542 ತಪಾಸಣಾ ವರದಿಗಳು ಬಾಕಿ ಉಳಿದಿರುವ ವಿವರಗಳನ್ನು **ಕೋಷ್ಟಕ 1.4**ರಲ್ಲಿ ತೋರಿಸಲಾಗಿದೆ.

[1] ಎಲ್ಲಾ 92 ಘಟಕಗಳು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗಳ ಅಡಿಯಲ್ಲಿ ಬರುತದೆ.

**ಕೋಷ್ಟಕ 1.4: 2016–17ರ ಲೆಕ್ಕಪರಿಶೋಧನೆಯ ಅವಧಿಯವರೆಗೆ ಬಾಕಿಯಿರುವ ತಪಾಸಣಾ ವರದಿಗಳ ಮತ್ತು ಕಂಡಿಕೆಗಳ ವಿವರಗಳು**

| ಘಟಕ | 10 ವರ್ಷಗಳಿಗೆ ಮೇಲ್ಪಟ್ಟು (2007–08 ರವರೆಗೆ) | | 5 ರಿಂದ 10 ವರ್ಷ (2008–09 ರಿಂದ 2012–13) | | 3 ರಿಂದ 5 ವರ್ಷ (2013–14 ರಿಂದ 2014–15) | | 2015–16 | | 2016–17 | | ಒಟ್ಟು | |
|---|---|---|---|---|---|---|---|---|---|---|---|---|
| | ತಪಾಸಣಾ ವರದಿ | ಕಂಡಿಕೆ | ತಪಾಸಣಾ ವರದಿ | ಕಂಡಿಕೆ | ತಪಾಸಣಾ ವರದಿ | ಕಂಡಿಕೆ | ತಪಾಸಣಾ ವರದಿ | ಕಂಡಿಕೆ | ತಪಾಸಣಾ ವರದಿ | ಕಂಡಿಕೆ | ತಪಾಸಣಾ ವರದಿ | ಕಂಡಿಕೆ |
| ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಮತ್ತು ಅಧೀನ ಇಲಾಖೆಗಳನ್ನು ಒಳಗೊಂಡಂತೆ | 1,820 | 4,739 | 1,004 | 5,073 | 302 | 2,149 | 170 | 1,422 | 97 | 1,344 | 3,393 | 14,727 |
| ಗ್ರಾಮ ಪಂಚಾಯತಿಗಳು | 0 | 0 | 92 | 712 | 32 | 337 | 02 | 27 | 23 | 275 | 149 | 1,351 |
| **ಒಟ್ಟು** | **1,820** | **4,739** | **1,096** | **5,785** | **334** | **2,486** | **172** | **1,449** | **120** | **1,619** | **3,542** | **16,078** |

ಆಧಾರ: ತಪಾಸಣಾ ವರದಿಗಳು

ಬಾಕಿಯಿದ್ದ 3,542 ತಪಾಸಣಾ ವರದಿಗಳ ಪೈಕಿ 4,739 ಕಂಡಿಕೆಗಳನ್ನು (ಶೇಕಡಾ 29) ಒಳಗೊಂಡ 1,820 ತಪಾಸಣಾ ವರದಿಗಳು (ಶೇಕಡಾ 51), 10 ವರ್ಷಗಳಿಗೂ ಮೇಲ್ಪಟ್ಟು ಬಾಕಿ ಉಳಿದಿವೆ. ಇದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಅಸಮರ್ಪಕ ಕ್ರಮವನ್ನು ಸೂಚಿಸುತ್ತದೆ. ಬಾಕಿ ಉಳಿದಿರುವ ತಪಾಸಣಾ ವರದಿ ಮತ್ತು ಕಂಡಿಕೆಗಳನ್ನು **ಅನುಬಂಧ 1.2**ರಲ್ಲಿ ನೀಡಲಾಗಿದೆ.

#### 1.3.2.4 ಸಾಮಾಜಿಕ ಲೆಕ್ಕಪರಿಶೋಧನೆ

ರಾಜ್ಯ ಸರ್ಕಾರವು ಕರ್ನಾಟಕದಲ್ಲಿ ಯೋಜನೆಗಳ ಅನುಷ್ಠಾನಕ್ಕೆ ಸಂಬಂಧಿಸಿದ ಸಾಮಾಜಿಕ ಲೆಕ್ಕಪರಿಶೋಧನೆಯ ನಿಯಮಾವಳಿ 2011ನ್ನು ನಿಗದಿ ಪಡಿಸಿತ್ತು (ಜನವರಿ 2012). ನಿಯಮಾವಳಿಯ ಪ್ರಕಾರ, ನಿರ್ದೇಶಕರ ನೇತೃತ್ವದಲ್ಲಿ ಸಮಾಜಿಕ ಲೆಕ್ಕಪರಿಶೋಧನೆಯ ನಿರ್ದೇಶನಾಲಯವನ್ನು ಸ್ಥಾಪಿಸಲಾಯಿತು ಹಾಗೂ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ, 1960ರಲ್ಲಿ ನೋಂದಣಿ ಆಗಿತ್ತು (ಮೇ 2012). 2017–18ರ ಸಮಾಜಿಕ ಲೆಕ್ಕಪರಿಶೋಧನಾ ನೆಡಸಿದ ವಿವರಗಳನ್ನು **ಕೋಷ್ಟಕ 1.5**ರಲ್ಲಿ ತೋರಿಸಲಾಗಿದೆ.

**ಕೋಷ್ಟಕ 1.5: 2017–18ರ ಸಮಾಜಿಕ ಲೆಕ್ಕಪರಿಶೋಧನಾ ನೆಡಸಿದ ವಿವರಗಳು**

| ಕ್ರ ಸಂ | ಯೋಜನೆಯ ಹೆಸರು | ಗ್ರಾಮ ಪಂಚಾಯತಿಗಳ ಸಂಖ್ಯೆ |
|---|---|---|
| 1 | ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ (MNREGA) | ಮೊದಲ ಸುತ್ತು – 5,899<br>ಎರಡನೆಯ ಸುತ್ತು – 5,879 |
| 2 | ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಕಾರ್ಯಕ್ರಮ | 176 ಬ್ಲಾಕ್ಸ್ |
| 3 | ಸ್ವಚ್ಛ ಭಾರತ್ ಮಿಷನ್ | 2,902 |
| 4 | ಹದಿನಾಲ್ಕನೇ ಹಣಕಾಸು ಆಯೋಗ | 9 ಬ್ಲಾಕ್ಸ್ |

ಆಧಾರ: ಸಮಾಜಿಕ ಲೆಕ್ಕಪರಿಶೋಧನಾ ನಿರ್ದೇಶನಾಲಯ ನೀಡಿದ ಮಾಹಿತಿ

## 1.4 ಹಣಕಾಸಿನ ಚಿತ್ರಣ ಮತ್ತು ವರದಿಯ ಚೌಕಟ್ಟು

### *1.4.1* ಹಣಕಾಸಿನ ಚಿತ್ರಣ

#### 1.4.1.1 ಪಂಚಾಯತ್ ರಾಜ್ ಸಂಸ್ಥೆಗಳ ಸಂಪನ್ಮೂಲಗಳು

ಪಂಚಾಯತ್ ರಾಜ್ ಸಂಸ್ಥೆಗಳ ಸಂಪನ್ಮೂಲಗಳು ಅವರ ಸ್ವಂತ ಆದಾಯ, ರಾಜ್ಯ ಹಣಕಾಸು ಆಯೋಗದ ಅನುದಾನಗಳು, ಕೇಂದ್ರ ಹಣಕಾಸು ಆಯೋಗದ ಅನುದಾನಗಳು, ನಿರ್ವಹಣೆ ಮತ್ತು ಅಭಿವೃದ್ಧಿ ಉದ್ದೇಶಗಳಿಗಾಗಿ ರಾಜ್ಯ ಸರ್ಕಾರದ ಹಾಗೂ ಕೇಂದ್ರ ಸರ್ಕಾರದ ಅನುದಾನಗಳನ್ನು ಒಳಗೊಂಡಿರುತ್ತವೆ. ಪ್ರಮುಖ ಯೋಜನೆಗಳ ಹಣಕಾಸು ವಿವರಗಳನ್ನು **ಅನುಬಂಧ 1.3**ರಲ್ಲಿ ತೋರಿಸಲಾಗಿದೆ.

2015–16 ರಿಂದ 2017–18ರ ಅವಧಿಗೆ ಪಂಚಾಯತ್ ರಾಜ್ ಸಂಸ್ಥೆಗಳ ಸಂಪನ್ಮೂಲಗಳ ಪ್ರವೃತ್ತಿಯನ್ನು **ಕೋಷ್ಟಕ 1.6**ರಲ್ಲಿ ತೋರಿಸಲಾಗಿದೆ:

**ಕೋಷ್ಟಕ 1.6: ಪಂಚಾಯತ್ ರಾಜ್ ಸಂಸ್ಥೆಗಳ ಸಂಪನ್ಮೂಲಗಳ ಪ್ರವೃತ್ತಿಗಳು ಹಾಗೂ ಸಂಯೋಜನೆ**

(₹ ಕೋಟಿಗಳಲ್ಲಿ)

| ಆಧಾರ | 2015–16 | 2016–17 | 2017–18 |
|---|---|---|---|
| **ಜಿಲ್ಲಾ ಪಂಚಾಯತ್** | | | |
| ರಾಜ್ಯ ಅನುದಾನ/ನಿಯೋಜಿತ ರಾಜಸ್ವಗಳು | 7,586.51 | 9,912.95 | 9,811.41 |
| ಕೇಂದ್ರ ಪುರಸ್ಕೃತ ಯೋಜನೆಗಳಿಗೆ ಅನುದಾನ | 1,866.65 | 474.35 | |
| ಕೇಂದ್ರ ಹಣಕಾಸು ಆಯೋಗ | 22.60 | - | - |
| ಇತರೆ ಸ್ವೀಕೃತಿಗಳು | 255.24$^{\beta}$ | 70.96[¥] | 183.44^ |
| **ಒಟ್ಟು** | **9,731.00** | **10,458.26** | **9,994.85** |
| **ತಾಲ್ಲೂಕು ಪಂಚಾಯತ್** | | | |
| ರಾಜ್ಯ ಅನುದಾನ/ನಿಯೋಜಿತ ರಾಜಸ್ವಗಳು | 11,868.60 | 14,950.80 | 15,704.88 |
| ಕೇಂದ್ರ ಪುರಸ್ಕೃತ ಯೋಜನೆಗಳಿಗೆ ಅನುದಾನ | 1,682.62 | 80.89 | |
| ಕೇಂದ್ರ ಹಣಕಾಸು ಆಯೋಗ | 45.23 | - | - |
| ಇತರೆ ಸ್ವೀಕೃತಿಗಳು | 20.61$^{\beta}$ | 11.61[¥] | 9.62^ |
| **ಒಟ್ಟು** | **13,617.06** | **15,043.30** | **15,714.50** |
| **ಗ್ರಾಮ ಪಂಚಾಯತ್** | | | |
| ಸ್ವಂತ ಆದಾಯ$^{\Sigma}$ | 330.53 | 331.67 | 322.76 |
| ರಾಜ್ಯ ಅನುದಾನ/ನಿಯೋಜಿತ ರಾಜಸ್ವಗಳು | 2,486.16 | 2,900.40 | 3,977.52 |
| ಕೇಂದ್ರ ಪುರಸ್ಕೃತ ಯೋಜನೆಗಳಿಗೆ ಅನುದಾನ | 4.19 | 0.00 | 0.00 |
| ಕೇಂದ್ರ ಹಣಕಾಸು ಆಯೋಗ | 1,130.07 | 1,373.59 | 1,555.60 |
| **ಒಟ್ಟು** | **3,950.95** | **4,605.66** | **5,855.88** |

ಆಧಾರ: ಹಣಕಾಸಿನ ಲೆಕ್ಕಪತ್ರಗಳು (Finance Accounts)

$^{\beta}$ 29 ಜಿಲ್ಲಾ ಪಂಚಾಯತಿಗಳ ಹಾಗೂ 164 ತಾಲ್ಲೂಕು ಪಂಚಾಯತಿಗಳ ಅಂಕಿಅಂಶಗಳು

[¥] 13 ಜಿಲ್ಲಾ ಪಂಚಾಯತಿಗಳ ಹಾಗೂ 143 ತಾಲ್ಲೂಕು ಪಂಚಾಯತಿಗಳ ಅಂಕಿಅಂಶಗಳು

^ 15 ಜಿಲ್ಲಾ ಪಂಚಾಯತಿಗಳ ಹಾಗೂ 124 ತಾಲ್ಲೂಕು ಪಂಚಾಯತಿಗಳ ಅಂಕಿಅಂಶಗಳು

$^{\Sigma}$ www.panchatantra.kar.nic.in, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಜಾಲತಾಣಾ

### 1.4.1.2 ಸಂಪನ್ಮೂಲಗಳ ಅನ್ವಯ

2015–16 ರಿಂದ 2017–18ರ ಅವಧಿಗೆ ಜಿಲ್ಲಾ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿಗಳ ಸಂಪನ್ಮೂಲಗಳ ಅನ್ವಯದ ಪ್ರವೃತ್ತಿಯನ್ನು **ಕೋಷ್ಟಕ 1.7**ರಲ್ಲಿ ತೋರಿಸಲಾಗಿದೆ.

**ಕೋಷ್ಟಕ 1.7: ಸಂಪನ್ಮೂಲಗಳ ಅನ್ವಯ**

(₹ ಕೋಟಿಗಳಲ್ಲಿ)

| ಆಧಾರ | 2015–16 | 2016–17 | 2017–18 |
|---|---|---|---|
| **ಜಿಲ್ಲಾ ಪಂಚಾಯತ್** | | | |
| ರಾಜ್ಯ ಅನುದಾನ/ನಿಯೋಜಿತ ರಾಜಸ್ವಗಳು | 7,709.76 | 7,340.98 | 6,244.27 |
| ಕೇಂದ್ರ ಪುರಸ್ಕೃತ ಯೋಜನೆಗಳಿಗೆ ಅನುದಾನ[¥] | 3,331.18 | 1,829.46 | 2,350.21 |
| ಕೇಂದ್ರ ಹಣಕಾಸು ಆಯೋಗ | 102.28 | 6.98 | 6.60 |
| **ಒಟ್ಟು** | **11,143.22** | **9,177.42** | **8,601.08** |
| **ತಾಲ್ಲೂಕು ಪಂಚಾಯತ್** | | | |
| ರಾಜ್ಯ ಅನುದಾನ/ನಿಯೋಜಿತ ರಾಜಸ್ವಗಳು | 11,605.30 | 13,616.67 | 10,868.42 |
| ಕೇಂದ್ರ ಹಣಕಾಸು ಆಯೋಗ | 195.65 | 41.48 | 20.43 |
| **ಒಟ್ಟು** | **11,800.95** | **13,658.15** | **10,888.85** |

[¥] ಕೇಂದ್ರ ಪುರಸ್ಕೃತ ಯೋಜನೆಯ ಖರ್ಚುಗಳಲ್ಲಿ ತಾಲ್ಲೂಕು ಪಂಚಾಯತಿಗಳ ಖರ್ಚುಗಳನ್ನೊಳಗೊಂಡಿದೆ

ಆಧಾರ: 2015–16ರ 29 ಜಿಲ್ಲಾ ಪಂಚಾಯತಿ ಮತ್ತು 164 ತಾಲ್ಲೂಕು ಪಂಚಾಯತಿಗಳ ಲೆಕ್ಕಪರಿಶೋಧನೆಯ ಅಂಕಿಅಂಶಗಳು.

2016–17ರ ರಾಜ್ಯ ಅನುದಾನ/ನಿಯೋಜಿತ ರಾಜಸ್ವಕ್ಕಾಗಿ ಖಜಾನೆ ಒದಗಿಸಿದ ಅಂಕಿಅಂಶಗಳು ಮತ್ತು ಕೇಂದ್ರ ಪುರಸ್ಕೃತ ಯೋಜನೆ/ಕೇಂದ್ರ ಹಣಕಾಸು ಆಯೋಗಕ್ಕಾಗಿ 15 ಜಿಲ್ಲಾ ಪಂಚಾಯತಿ ಮತ್ತು 140 ತಾಲ್ಲೂಕು ಪಂಚಾಯತಿಗಳ ವಾರ್ಷಿಕ ಲೆಕ್ಕಪತ್ರಗಳು.

2017–18ರ ರಾಜ್ಯ ಅನುದಾನ/ನಿಯೋಜಿತ ರಾಜಸ್ವಕ್ಕಾಗಿ ಖಜಾನೆ ಒದಗಿಸಿದ ಅಂಕಿಅಂಶಗಳು ಮತ್ತು ಕೇಂದ್ರ ಪುರಸ್ಕೃತ ಯೋಜನೆ/ಕೇಂದ್ರ ಹಣಕಾಸು ಆಯೋಗಕ್ಕಾಗಿ 15 ಜಿಲ್ಲಾ ಪಂಚಾಯತಿ ಮತ್ತು 118 ತಾಲ್ಲೂಕು ಪಂಚಾಯತಿಗಳ ವಾರ್ಷಿಕ ಲೆಕ್ಕಪತ್ರಗಳು.

ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ತಾಂತ್ರಿಕ ಮಾರ್ಗಸೂಚಿ ಹಾಗೂ ಮೇಲ್ವಿಚಾರಣೆ (ಟಿಜಿಎಸ್) ಅಡಿಯಲ್ಲಿ ಗ್ರಾಮ ಪಂಚಾಯತಿಗಳ ಲೆಕ್ಕಪರಿಶೋಧನೆ ಮಾಡುತ್ತಿರುವುದರಿಂದ ಮತ್ತು ಗ್ರಾಮ ಪಂಚಾಯತಿಗಳ ಪ್ರಾಥಮಿಕ ಲೆಕ್ಕಪರಿಶೋಧಕರ (ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ), ಲೆಕ್ಕಪರಿಶೋಧನೆಯು ಬಾಕಿಯಿದ್ದುದರಿಂದ ಗ್ರಾಮ ಪಂಚಾಯತಿಗಳ ಕ್ರೂಡಿಕೃತ ಸಂಪನ್ಮೂಲಗಳ ವಿವರಗಳು ಲಭ್ಯವಿರುವುದಿಲ್ಲ.

ಜಿಲ್ಲಾ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿಗಳ ಸ್ವೀಕೃತಿಗಳು 2015–16ರಲ್ಲಿ ₹23,348.06 ಕೋಟಿಯಿಂದ 2017–18ರಲ್ಲಿ ₹25,709.35 ಕೋಟಿಗಳಷ್ಟು (ಶೇಕಡಾ 10ರಷ್ಟು) ಹೆಚ್ಚಳಗೊಂಡಿದ್ದವು ಹಾಗೂ ರಾಜ್ಯದ ಅನುದಾನ/ನಿಯೋಜಿತ ರಾಜಸ್ವದ ವೆಚ್ಚಗಳು 2015–16ರಲ್ಲಿ ₹19,315.06 ಕೋಟಿಯಿಂದ 2017–18ರಲ್ಲಿ ₹17,112.69 ಕೋಟಿಗಳಿಗೆ (ಶೇಕಡಾ 11ರಷ್ಟು) ಇಳಿಕೆಗೊಂಡಿರುವುದನ್ನು **ಕೋಷ್ಟಕ 1.6** ಮತ್ತು **ಕೋಷ್ಟಕ 1.7**ರಿಂದ ಗಮನಿಸಬಹುದಾಗಿದೆ.

### 1.4.1.3 ಹದಿನಾಲ್ಕನೇ ಹಣಕಾಸು ಆಯೋಗದ ಮೂಲ ಅನುದಾನದ ಕಡಿಮೆ ಸ್ವೀಕೃತಿಗಳು

ಹದಿನಾಲ್ಕನೇ ಹಣಕಾಸು ಆಯೋಗವು ರಾಜ್ಯದ ಗ್ರಾಮ ಪಂಚಾಯತಿಗಳಿಗೆ[2] ಮೂಲ ಅನುದಾನಗಳ ಕಡೆಗೆ ₹8,359.79 ಕೋಟಿ ಅನುದಾನವನ್ನು 2015–16 ರಿಂದ 2019–20ರ ಅವಧಿಗೆ ಹಾಗೂ ಕಾರ್ಯಕ್ಷಮತೆ ಅನುದಾನದ ಕಡೆಗೆ ₹928.87 ಕೋಟಿಯನ್ನು 2016–17 ರಿಂದ 2019–20ರ ಅವಧಿಗೆ ಹಂಚಿಕೆ ಮಾಡಿತು. ಭಾರತ ಸರ್ಕಾರವು ಪ್ರತಿ ವರ್ಷದ ಅನುದಾನವನ್ನು ಆಯಾ ಹಣಕಾಸು ವರ್ಷದಲ್ಲಿ ಎರಡು ಕಂತುಗಳಲ್ಲಿ (ಜೂನ್ ಮತ್ತು ಅಕ್ಟೋಬರ್) ಬಿಡುಗಡೆ ಮಾಡಬೇಕಿತ್ತು. ಮೊದಲನೇ ಕಂತಿನ ಬಳಕೆ ಪ್ರಮಾಣಪತ್ರವನ್ನು ಸ್ವೀಕರಿಸಿದ ನಂತರವೇ ಎರಡನೇ ಕಂತನ್ನು ಬಿಡುಗಡೆ ಮಾಡಬೇಕಿತ್ತು.

ರಾಜ್ಯದಲ್ಲಿನ ಗ್ರಾಮ ಪಂಚಾಯತಿಗಳಿಗೆ 2017–18ರ ಅವಧಿಯಲ್ಲಿ ಹಂಚಿಕೆ ಮಾಡಿದ್ದ ಮೂಲ ಅನುದಾನವು ₹1,604.42 ಕೋಟಿಯಾಗಿತ್ತು. ಇದಕ್ಕೆ ಪ್ರತಿಯಾಗಿ, **ಕೋಷ್ಟಕ 1.8**ರಲ್ಲಿ ವಿವರಿಸಿದಂತೆ ರಾಜ್ಯವು ₹1,580.18 ಕೋಟಿಯನ್ನು ಎರಡು ಕಂತುಗಳಲ್ಲಿ ₹24.24 ಕೋಟಿಯ ಕೊರತೆಯೊಂದಿಗೆ ಪಡೆದುಕೊಂಡಿತು.

**ಕೋಷ್ಟಕ 1.8: ಹದಿನಾಲ್ಕನೇ ಹಣಕಾಸು ಆಯೋಗದ ಅನುದಾನದ ಕಡಿಮೆ ಸ್ವೀಕೃತಿಗಳು**

(₹ ಕೋಟಿಗಳಲ್ಲಿ)

| ಕಂತು | ಬಿಡುಗಡೆ ಮಾಡಬೇಕಾದ ಮೊತ್ತ | ಬಿಡುಗಡೆ ಮಾಡಿದ ಮೊತ್ತ | ಕೊರತೆ | ಷರಾ |
|---|---|---|---|---|
| ಮೊದಲ | 802.21 | 790.22 | 11.99 | ದಿ. 16.01.2017ರ ಬಳಕೆ ಪ್ರಮಾಣ ಪತ್ರದಂತೆ 5,932 ಗ್ರಾಮ ಪಂಚಾಯತಿಗಳಲ್ಲಿ ಮಾತ್ರ ಕ್ರಮಬದ್ಧವಾಗಿ ಚುನಾಯಿತ ಸಂಸ್ಥೆಗಳಿದ್ದವು |
| ಎರಡನೆಯ | 802.21 | 789.96 | 12.25 | ದಿ. 28.8.2017ರ ಬಳಕೆ ಪ್ರಮಾಣ ಪತ್ರದಂತೆ 5,932 ಗ್ರಾಮ ಪಂಚಾಯತಿಗಳಲ್ಲಿ ಮಾತ್ರ ಕ್ರಮಬದ್ಧವಾಗಿ ಚುನಾಯಿತ ಸಂಸ್ಥೆಗಳಿದ್ದವು |
| **ಒಟ್ಟು** | **1604.42** | **1580.18** | **24.24** | |

ಆಧಾರ: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ನೀಡಿದ ಮಾಹಿತಿ

ರಾಜ್ಯದಲ್ಲಿ ಅಸ್ತಿತ್ವದಲ್ಲಿರುವ 6,024 ಗ್ರಾಮ ಪಂಚಾಯತಿಗಳ ಪೈಕಿ 5,932 ಗ್ರಾಮ ಪಂಚಾಯತಿಗಳಲ್ಲಿ ಮಾತ್ರ ಕ್ರಮಬದ್ಧವಾಗಿ ಚುನಾಯಿತ ಸಂಸ್ಥೆಗಳಿರುವುದು ಈ ಕೊರತೆಗೆ ಕಾರಣವಾಗಿತ್ತು.

[2] ಜಿಲ್ಲಾ ಪಂಚಾಯತ್‌ಗಳು ಮತ್ತು ತಾಲ್ಲೂಕು ಪಂಚಾಯತ್‌ಗಳು ಹದಿನಾಲ್ಕನೇ ಹಣಕಾಸು ಆಯೋಗದ ಅನುದಾನಕ್ಕೆ ಅರ್ಹರಲ್ಲ.

### 1.4.1.4 2017–18ನೇ ವರ್ಷಕ್ಕೆ ಕಾರ್ಯಕ್ಷಮತೆ ಅನುದಾನಗಳನ್ನು ಪಡೆಯದಿರುವುದು

ರಾಜ್ಯ ಸರ್ಕಾರವು, ಮಾರ್ಚ್ 2018ರಲ್ಲಿದ್ದಂತೆ 2017–18ರ ಅವಧಿಗೆ ಹದಿನಾಲ್ಕನೇ ಹಣಕಾಸು ಆಯೋಗದಡಿಯ ಕಾರ್ಯಕ್ಷಮತೆ ಅನುದಾನಗಳನ್ನು ಪಡೆದಿರಲಿಲ್ಲ. ಹದಿನಾಲ್ಕನೇ ಹಣಕಾಸು ಆಯೋಗದಡಿಯಲ್ಲಿ ಕಾರ್ಯಕ್ಷಮತೆ ಅನುದಾನಗಳ ವಿತರಣೆಗೆ ಹೆಚ್ಚುವರಿ ಷರತ್ತುಗಳು ಮತ್ತು ಮಾನದಂಡಗಳನ್ನು ನಿಗದಿಪಡಿಸಿರುವ ಪರಿಷ್ಕೃತ ಯೋಜನೆಯನ್ನು ಭಾರತ ಸರ್ಕಾರವು ತಿಳಿಸಿತು (ಸೆಪ್ಟಂಬರ್ 2017) ಮತ್ತು ಭಾರತ ಸರ್ಕಾರಕ್ಕೆ ಅದರ ಅನುಪಾಲನೆಯನ್ನು ಜನವರಿ/ಫೆಬ್ರವರಿ 2018ರಲ್ಲಿ ಸಲ್ಲಿಸಲಾಗಿದೆ ಎಂದು ರಾಜ್ಯ ಸರ್ಕಾರವು ತಿಳಿಸಿತು (ನವೆಂಬರ್ 2018). 2017–18ರ ಕಾರ್ಯಕ್ಷಮತೆ ಅನುದಾನಗಳನ್ನು ಜೂನ್ 2018ರಲ್ಲಿ ಸ್ವೀಕರಿಸಲಾಯಿತು ಎಂದೂ ಸಹ ಸರ್ಕಾರವು ತಿಳಿಸಿತು.

ಆದರೆ, ಪರಿಷ್ಕೃತ ಯೋಜನೆಯನ್ನು ಅಧಿಸೂಚಿಸುವಲ್ಲಿ ರಾಜ್ಯ ಸರ್ಕಾರದಿಂದ ವಿಳಂಬವಾಗಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಭಾರತ ಸರ್ಕಾರದ ಸೂಚನೆಗಳನ್ವಯ ಅಗತ್ಯವಿರುವ ಮಾಹಿತಿಯನ್ನು ರಾಜ್ಯ ಸರ್ಕಾರವು 31 ಅಕ್ಟೋಬರ್ 2017ರೊಳಗೆ ಸಲ್ಲಿಸಬೇಕಿತ್ತು ಆದರೆ, ಪರಿಷ್ಕೃತ ಯೋಜನೆಯನ್ನು ರಾಜ್ಯ ಸರ್ಕಾರವು ಜಿಲ್ಲಾ ಪಂಚಾಯತಿಗಳಿಗೆ ಕೇವಲ ಡಿಸೆಂಬರ್ 2017ರಲ್ಲಿ ಕಳುಹಿಸಿತ್ತು.

### 1.4.1.5 ಗ್ರಾಮ ಪಂಚಾಯತಿಗಳಿಗೆ ಬಿಡುಗಡೆಗೊಳಿಸದ ಹದಿನಾಲ್ಕನೇ ಹಣಕಾಸು ಆಯೋಗದ ಅನುದಾನಗಳು

ಹದಿನಾಲ್ಕನೇ ಹಣಕಾಸು ಆಯೋಗದ ಮಾರ್ಗಸೂಚಿಗಳನ್ವಯ ಕೇಂದ್ರ ಸರ್ಕಾರದಿಂದ ಅನುದಾನ ಪಡೆದ 15ದಿನದೊಳಗೆ ಗ್ರಾಮ ಪಂಚಾಯತಿಗಳಿಗೆ ಬಿಡುಗಡೆ ಮಾಡಬೇಕಿತ್ತು. ಆದಾಗ್ಯೂ, ಮಾರ್ಚ್ 2018ರ ಅಂತ್ಯದ ವೇಳೆಗೆ ₹64.63 ಲಕ್ಷವನ್ನು ಬಿಡುಗಡೆ ಮಾಡದೆ 4 ಸ್ವೀಪ್–ಇನ್ ಠೇವಣಿ ಖಾತೆಯಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ವಿಧಾನಸೌಧ ಶಾಖೆಯಲ್ಲಿ ಹೂಡಿಕೆ ಮಾಡಲಾಗಿತ್ತು. ಇದು ಅನುದಾನವನ್ನು ಅಕ್ರಮವಾಗಿ ತಡೆಹಿಡಿಯುವಲ್ಲಿ ಪರಿಣಮಿಸಿತು ಮತ್ತು ಮಾರ್ಗಸೂಚಿಗಳ ವಿರುದ್ಧವಾಗಿತ್ತು.

### 1.4.1.6 ಅನರ್ಹ ಗ್ರಾಮ ಪಂಚಾಯತಿಗಳಿಗೆ ಮೂಲ ಅನುದಾನದ ಅನಿಯಮಿತ ಬಿಡುಗಡೆ

ಹದಿನಾಲ್ಕನೇ ಹಣಕಾಸು ಆಯೋಗದ ಮಾರ್ಗಸೂಚಿಗಳು ಕ್ರಮಬದ್ಧವಾಗಿ ರಚಿಸಲ್ಪಟ್ಟ ಗ್ರಾಮ ಪಂಚಾಯತಿಗಳಿಗೆ[3] ಅನುದಾನವನ್ನು ಬಿಡುಗಡೆ ಮಾಡಲು ಸೂಚಿಸಿತು. ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರವು ಸಲ್ಲಿಸಿದ (ಆಗಸ್ಟ್ 2017 ಮತ್ತು ಜನವರಿ 2018) ಬಳಕೆ ಪ್ರಮಾಣ ಪತ್ರದ ಪ್ರಕಾರ ರಾಜ್ಯದಲ್ಲಿ 6,024 ಗ್ರಾಮ ಪಂಚಾಯತಿಗಳ ಪೈಕಿ ಕ್ರಮಬದ್ಧವಾಗಿ 5,932 ಮತ್ತು 5,977 ಗ್ರಾಮ ಪಂಚಾಯತಿಗಳಲ್ಲಿ ಮಾತ್ರ ಚುನಾಯಿತ ಸಂಸ್ಥೆಗಳಿದ್ದವು.

ಆದಾಗ್ಯೂ, ಕ್ರಮಬದ್ಧವಾಗಿ ಚುನಾಯಿತ ಸಂಸ್ಥೆಯ ರಚನೆಯನ್ನು ಪರಿಗಣಿಸದೆ ರಾಜ್ಯದ ಎಲ್ಲ ಗ್ರಾಮ ಪಂಚಾಯತಿಗಳಿಗೆ ಮೂಲ ಅನುದಾನವನ್ನು ಬಿಡುಗಡೆ ಮಾಡಲಾಗಿತ್ತು ಮತ್ತು ಇದು ಹದಿನಾಲ್ಕನೇ ಹಣಕಾಸು ಆಯೋಗದ ಮಾರ್ಗಸೂಚಿಗಳ ವಿರುದ್ಧವಾಗಿತ್ತು.

### 1.4.1.7 ವರ್ಗಾವಣೆ ಮಾಡದಿರುವ ಕೇಂದ್ರ/ರಾಜ್ಯ ಹಣಕಾಸು ಆಯೋಗ ಅನುದಾನ ಮತ್ತು ನಿಧಿಗಳ ಸಂಚಯನ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಹದಿಮೂರನೇ ಹಣಕಾಸು ಆಯೋಗದಡಿಯಲ್ಲಿ ಅನುದಾನಗಳ ಸ್ವೀಕರಣೆ ಮತ್ತು ವರ್ಗಾವಣೆಗೆ ಸ್ಟೇಟ್ ಬ್ಯಾಂಕ್ ಆಫ್

[3] ಕ್ರಮಬದ್ಧವಾಗಿ ರಚಿಸಲ್ಪಟ್ಟ ಪಂಚಾಯತ್ ಎಂದರೆ, ಚುನಾವಣೆ ನಡೆದಿದ್ದು ಮತ್ತು ಸಂವಿಧಾನದ ಭಾಗ IX ಮತ್ತು ಭಾಗ IXಎ ರಲ್ಲಿ ನೀಡಿರುವಂತೆ ಚುನಾಯಿತ ಸಂಸ್ಥೆಯನ್ನು ಹೊಂದಿರುವಂತಹ ಪಂಚಾಯತ್.

ಇಂಡಿಯಾ, ವಿಧಾನಸೌಧ ಶಾಖೆಯಲ್ಲಿ ಖಾತೆಯೊಂದನ್ನು[4] ನಿರ್ವಹಿಸುತ್ತಿತ್ತು. ಹದಿನಾಲ್ಕನೇ ಹಣಕಾಸು ಆಯೋಗದಡಿಯಲ್ಲಿ ಸ್ವೀಕರಿಸಿದ ಅನುದಾನಗಳನ್ನೂ ನವೆಂಬರ್ 2016ರ ವರೆಗೂ ಮತ್ತು ರಾಜ್ಯ ಹಣಕಾಸು (ಗ್ರಾಮ ಪಂಚಾಯತಿಗಳಿಗೆ ಬಿಡುಗಡೆ ಮಾಡಬೇಕಾದ ಶಾಸನಬದ್ಧ ಅನುದಾನ) ಆಯೋಗಕ್ಕೆ ಸಂಬಂಧಿಸಿದ ಹಣ ಸಹ ಈ ಖಾತೆಯ ಮೂಲಕ ಕಾರ್ಯಾಚರಣೆ ಮಾಡುತ್ತಿರುವುದನ್ನು ನಾವು ಗಮನಿಸಿದೆವು.

ಮಾರ್ಚ್ 2018ರ ಅಂತ್ಯದ ವೇಳೆಗೆ ₹5.01 ಕೋಟಿಯನ್ನು ಉಳಿತಾಯ ಖಾತೆಯಲ್ಲಿ ಹಾಗು ₹83.16 ಕೋಟಿಯನ್ನು 5 ಸ್ವಿಪ್–ಇನ್ ಡಿಪೋಸಿಟ್ ಖಾತೆಯಲ್ಲಿ ಉಳಿಸಿಕೊಂಡಿತ್ತು. ಕೇಂದ್ರ/ರಾಜ್ಯ ಹಣಕಾಸು ಆಯೋಗ ಅನುದಾನವನ್ನು ಪಂಚಾಯತ್ ರಾಜ್ ಸಂಸ್ಥೆಗಳಿಗೆ ವರ್ಗಾಯಿಸದೆ ಬ್ಯಾಂಕ್ ಖಾತೆಗಳಲ್ಲಿ ತಡೆಹಿಡಿದಿರುವುದು ಕೇಂದ್ರ/ರಾಜ್ಯ ಹಣಕಾಸು ಆಯೋಗದ ಮಾರ್ಗಸೂಚಿಗಳ ವಿರುದ್ಧವಾಗಿತ್ತು.

ಮುಂದುವರಿದಂತೇ, ಶಾಸನಬದ್ಧ ಅನುದಾನವನ್ನು ಪಂಚಾಯತ್ ರಾಜ್ ಸಂಸ್ಥೆಗಳಿಗೆ ವರ್ಗಾಯಿಸುವಲ್ಲಿ ಬ್ಯಾಂಕಿನವರಿಂದ 5 ರಿಂದ 26 ದಿನಗಳ ವಿಳಂಬವಿತ್ತು.

ವಿವಿಧ ಮೂಲಗಳಿಂದ ಸ್ವೀಕರಿಸಿದ ನಿಧಿಗಳನ್ನು ಒಂದೇ ಖಾತೆಯಲ್ಲಿ ಸಂಚಯನ ಮಾಡಿದ ಪರಿಣಾಮವಾಗಿ ಈ ವಿವಿಧ ಮೂಲಗಳಿಂದ ಸ್ವೀಕರಿಸಿದ ಹಣದ ಜಮೆ ಮತ್ತು ವೆಚ್ಚದ ಸೂಕ್ತ ಮರುಹೊಂದಾಣಿಕೆಯನ್ನು ಇಲಾಖೆಯು ಖಚಿತಪಡಿಸಿಕೊಳ್ಳಬೇಕಿತ್ತು. ಆದರೆ, ಅದನ್ನು ಮಾಡಿರಲಿಲ್ಲ. ಮರುಹೊಂದಾಣಿಕೆಯು ಇಲ್ಲದಿರುವುದರಿಂದ ಕೇಂದ್ರ/ರಾಜ್ಯದ ಹಣಕಾಸು ಆಯೋಗದಡಿ ಹಣದ ವರ್ಗಾವಣೆಯ ನಿಖರತೆಯನ್ನು ಮತ್ತು ಖಾತೆಯಲ್ಲಿ ಉಳಿದಿರುವ ಕೇಂದ್ರ/ರಾಜ್ಯ ಹಣಕಾಸು ಆಯೋಗಕ್ಕೆ ಸಂಬಂಧಿಸಿದ ಹಣದ ವಾಸ್ತವಿಕ ಪರಿಮಾಣವನ್ನು ಖಚಿತಪಡಿಸಿಕೊಳ್ಳಲಾಗಲಿಲ್ಲ. ಮರುಹೊಂದಾಣಿಕೆಯ ಇಲ್ಲದಿರುವಿಕೆ, ಸೂಕ್ತವಾದ ಲೆಕ್ಕಪತ್ರವನ್ನಿಡುವುದು ಮತ್ತು ಹದಿಮೂರನೇ ಹಣಕಾಸು ಆಯೋಗ, ಹದಿನಾಲ್ಕನೇ ಹಣಕಾಸು ಆಯೋಗ ಮತ್ತು ರಾಜ್ಯ ಹಣಕಾಸು ಆಯೋಗದ ಅನುದಾನಗಳ ಮೇಲೆ 'ಗಳಿಸಿದ ಬಡ್ಡಿಯನ್ನು' ವರದಿ ಮಾಡುವುದರ ಮೇಲೆಯೂ ಪರಿಣಾಮ ಬೀರುವುದು.

### 1.4.1.8 ಸ್ಥಿರ ಸ್ವತ್ತುಗಳ ವರ್ಗಾವಣೆ ಮೇಲೆ ಶುಲ್ಕದ ಬಿಡುಗಡೆ

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪರಿಚ್ಛೇದ 205ರ ಅನ್ವಯ ತಾಲ್ಲೂಕು ಪಂಚಾಯತಿ ಪ್ರದೇಶದ ಪರಿಮಿತಿಗಳೊಳಗೆ ಇರುವ ಎಲ್ಲಾ ಸ್ಥಿರ ಸ್ವತ್ತುಗಳ ಮಾರಾಟ, ದಾನ, ಅಡಮಾನ, ವಿನಿಮಯ ಮತ್ತು ಗುತ್ತಿಗೆ, ಇವುಗಳ ಲಿಖಿತ ಪತ್ರಗಳ ಮೇಲೆ ಕರ್ನಾಟಕ ಸ್ಟಾಂಪು ಅಧಿನಿಯಮ 1957ರ ಮೂಲಕ ವಿಧಿಸಲಾದ ಸುಂಕದ ಶೇಕಡಾ ಮೂರರಷ್ಟು ದರದಲ್ಲಿ ಸ್ಥಿರ ಸ್ವತ್ತುಗಳ ವರ್ಗಾವಣೆ ಮೇಲೆ ಶುಲ್ಕವನ್ನು ಅಧಿಭಾರದ ರೂಪದಲ್ಲಿ ವಿಧಿಸತಕ್ಕದ್ದು. ತಾಲ್ಲೂಕಿನಲ್ಲಿರುವ ಭೂಮಿಗಳು ಹಾಗೂ ಇತರೆ ಸ್ಥಿರ ಸ್ವತ್ತುಗಳಿಗೆ ಸಂಬಂಧಿಸಿದಂತೆ ಸಂಗ್ರಹಿಸಲಾದ ಸಂಪೂರ್ಣ ಮೊತ್ತವನ್ನು ರಾಜ್ಯದಲ್ಲಿರುವ ತಾಲ್ಲೂಕು ಪಂಚಾಯತಿಗಳಿಗೆ ತಾಲ್ಲೂಕಿನ ಜನಸಂಖ್ಯೆಗೆ ಅನುಗುಣವಾಗಿ, ಸಂಗ್ರಹಣಾ ವೆಚ್ಚಗಳ ಕಡೆಗೆ ಶೇಕಡಾ 10ರಷ್ಟನ್ನು ಕಡಿದುಕೊಂಡ ನಂತರ, ನೋಂದಣಿಗಳ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರವರು ವರ್ಗಾಯಿಸಬೇಕು.

2015–16ನೇ ವರ್ಷದ ಸ್ಥಿರ ಸ್ವತ್ತುಗಳ ವರ್ಗಾವಣೆ ಮೇಲೆ ಶುಲ್ಕ ₹46.78 ಕೋಟಿಗಳನ್ನು ತಾಲ್ಲೂಕು ಪಂಚಾಯತಿಗಳಿಗೆ ಸೆಪ್ಟೆಂಬರ್ 2017ರಲ್ಲಿ ಬಿಡುಗಡೆ ಮಾಡಲಾಗಿತ್ತು ಮತ್ತು 2016–17 ಮತ್ತು 2017–18ನೇ ವರ್ಷದ ಸ್ಥಿರ ಸ್ವತ್ತುಗಳ ವರ್ಗಾವಣೆ ಮೇಲೆ ಶುಲ್ಕವನ್ನು ತಾಲ್ಲೂಕು ಪಂಚಾಯತಿಗಳಿಗೆ ವರ್ಗಾವಣೆ ಮಾಡಿರಲಿಲ್ಲ ಎಂದು ನೋಂದಣಿಗಳ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು ತಿಳಿಸಿದರು (ಅಕ್ಟೋಬರ್ 2018). ಆದರೇ, ಖಜಾನೆಗಳ ನಿರ್ದೇಶಕರು, ಬೆಂಗಳೂರು, ನೀಡಿದ (ಡಿಸೆಂಬರ್ 2018) ಮಾಹಿತಿಯಂತೆ ಕೇವಲ ₹37.92 ಕೋಟಿಗಳನ್ನು ತಾಲ್ಲೂಕು ಪಂಚಾಯತಿಗಳಿಗೆ ವರ್ಗಾಯಿಸಲಾಗಿತ್ತು. ಇದು ಮರುಹೊಂದಾಣಿಕೆ ಯಾಗಬೇಕಾಗಿದೆ.

[4] ಹದಿಮೂರನೇ ಹಣಕಾಸು ಆಯೋಗದ ಅಡಿಯಲ್ಲಿ ಸ್ವೀಕರಿಸಿದ ಅನುದಾನ ಮತ್ತು ವರ್ಗಾವಣೆಗಾಗಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಮೊದಲಿನ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು), ಜಿ–ಸೇವಾ ಶಾಖೆಯಲ್ಲಿ, ತೆರೆಯಲಾದ ಖಾತೆ ಸಂಖ್ಯೆ 64062923099.

ಮುಂದುವರಿದಂತೇ, ಎಲ್ಲ ಜಿಲ್ಲಾ ನೋಂದಣಾಧಿಕಾರಿಗಳಿಂದ ಸಂಪೂರ್ಣ ಮಾಹಿತಿಯು ಸ್ವೀಕೃತವಾದ ನಂತರ ಮತ್ತು ಅವಶ್ಯಕ ಮರುಹೊಂದಾಣಿಕೆಯ ನಂತರ 2016–17 ಮತ್ತು 2017–18ರ ಸ್ಥಿರ ಸ್ವತ್ತುಗಳ ವರ್ಗಾವಣೆ ಮೇಲೆ ಶುಲ್ಕವನ್ನು ವರ್ಗಾಯಿಸಲಾಗುವುದು ಎಂದು ನೋಂದಣಿಗಳ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು ತಿಳಿಸಿದರು.

### *1.4.2 ಉತ್ತರದಾಯಿತ್ವದ ಚೌಕಟ್ಟು*

**1.4.2.1** ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಹಣಕಾಸಿನ ವರದಿಯು ಉತ್ತರದಾಯಿತ್ವದ ಒಂದು ಪ್ರಮುಖ ಅಂಶವಾಗಿದೆ. ಜಿಲ್ಲಾ ಪಂಚಾಯತಿಗಳು ಹಾಗೂ ತಾಲ್ಲೂಕು ಪಂಚಾಯತಿಗಳು ಹಣವನ್ನು ತೆಗೆಯುವುದು, ವೆಚ್ಚವನ್ನು ಭರಿಸುವುದು, ಲೆಕ್ಕಪತ್ರಗಳ ನಿರ್ವಹಣೆ, ಲೆಕ್ಕಪತ್ರಗಳನ್ನು ಸಲ್ಲಿಸುವುದು, ಇವೇ ಮುಂತಾದ ವಿಷಯಗಳು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993, ಕರ್ನಾಟಕ ಜಿಲ್ಲಾ ಪಂಚಾಯತ್ (ಹಣಕಾಸು ಮತ್ತು ಲೆಕ್ಕಪತ್ರಗಳು) ನಿಯಮಗಳು, 1996, ಕರ್ನಾಟಕ ಪಂಚಾಯತ್ ರಾಜ್ ತಾಲ್ಲೂಕು ಪಂಚಾಯತಿ (ಹಣಕಾಸು ಮತ್ತು ಲೆಕ್ಕಪತ್ರಗಳು) ನಿಯಮಗಳು, 1996, ಕರ್ನಾಟಕ ಖಜಾನೆ ಸಂಹಿತೆ, ಕರ್ನಾಟಕ ಹಣಕಾಸು ಸಂಹಿತೆ, ಸಾದಿಲ್ವಾರು ವೆಚ್ಚದ ಕೈಪಿಡಿ, ಕರ್ನಾಟಕ ಲೋಕೋಪಯೋಗಿ ಕಾಮಗಾರಿಗಳ ಲೆಕ್ಕಪತ್ರಗಳ ಸಂಹಿತೆ, ಕರ್ನಾಟಕ ಲೋಕೋಪಯೋಗಿ ಇಲಾಖಾ ಸಂಹಿತೆ, ಉಗ್ರಾಣ ಕೈಪಿಡಿ, ಆಯವ್ಯಯ ಕೈಪಿಡಿ, ಇತರೆ ಇಲಾಖಾ ಕೈಪಿಡಿಗಳು, ಸ್ಥಾಯಿ ಆದೇಶಗಳು ಹಾಗೂ ಸೂಚನೆಗಳು ಇವುಗಳಲ್ಲಿನ ನಿಬಂಧನೆಗಳಿಂದ ನಿಯಂತ್ರಿಸಲ್ಪಡುತ್ತವೆ.

**1.4.2.2** ನಿಯಮ 37(4), ಕರ್ನಾಟಕ ಜಿಲ್ಲಾ ಪಂಚಾಯತ್ (ಹಣಕಾಸು ಮತ್ತು ಲೆಕ್ಕಪತ್ರಗಳು) ನಿಯಮಗಳು, 1996 ಹಾಗೂ ನಿಯಮ 30(4), ಕರ್ನಾಟಕ ಪಂಚಾಯತ್ ರಾಜ್ ತಾಲ್ಲೂಕು ಪಂಚಾಯತಿ (ಹಣಕಾಸು ಮತ್ತು ಲೆಕ್ಕಪತ್ರಗಳು) ನಿಯಮಗಳು, 1996ರ ಅಡಿಯಲ್ಲಿ ನಿರ್ದಿಷ್ಟಪಡಿಸಿರುವಂತೆ, ಜಿಲ್ಲಾ ಪಂಚಾಯತಿಗಳ ಹಾಗೂ ತಾಲ್ಲೂಕು ಪಂಚಾಯತಿಗಳ ವಾರ್ಷಿಕ ಲೆಕ್ಕಪತ್ರಗಳನ್ನು ರಾಜಸ್ವ, ಬಂಡವಾಳ ಮತ್ತು ಋಣ, ಠೇವಣಿ ಮತ್ತು ಇರಸಾಲು (ಡಿಡಿಆರ್) ಲೆಕ್ಕಗಳಾಗಿ ಐದು ತಃಖ್ತೆಗಳಲ್ಲಿ ತಯಾರಿಸಲಾಗುವುದು. ಕರ್ನಾಟಕ ಪಂಚಾಯತ್ ರಾಜ್ ಗ್ರಾಮ ಪಂಚಾಯತಿಗಳ (ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು, 2006ರ ಅಡಿಯಲ್ಲಿ ನಿರ್ದಿಷ್ಟಪಡಿಸಿರುವಂತೆ, ಗ್ರಾಮ ಪಂಚಾಯತಿಯ ಲೆಕ್ಕಪತ್ರಗಳನ್ನು ಜೋಡಿ ನಮೂದು ಲೆಕ್ಕಪತ್ರ ಪದ್ಧತಿಯನ್ನು (ಡಿಇಎಎಸ್) ಅಳವಡಿಸಿಕೊಳ್ಳುವ ಮೂಲಕ ಸಂಚಯಿತ ಆಧಾರದ ಮೇರೆಗೆ ತಯಾರಿಸಲಾಗುತ್ತದೆ. ಹದಿಮೂರನೇ ಹಣಕಾಸು ಆಯೋಗದ ಶಿಫಾರಸುಗಳ ಅನ್ವಯ ಪಂಚಾಯತ್ ರಾಜ್ ಸಂಸ್ಥೆಗಳು 2011–12ರಿಂದ ಕೇಂದ್ರ ಸರ್ಕಾರವು ನಿಗದಿಪಡಿಸಿರುವಂತೆ ಮಾದರಿ ಪಂಚಾಯತ್ ಲೆಕ್ಕಪತ್ರ ಪದ್ಧತಿಯಲ್ಲಿ (ಎಂಪಿಎಎಸ್) ಲೆಕ್ಕಪತ್ರಗಳನ್ನು ತಯಾರಿಸಬೇಕು.

ಜಿಲ್ಲಾ ಪಂಚಾಯತಿಗಳು 2011–12ರಿಂದ ಲೆಕ್ಕಪತ್ರಗಳನ್ನು ಎಂಪಿಎಎಸ್ ನಮೂನೆಯಲ್ಲಿ ತಯಾರಿಸಿದ್ದವು, ಆದರೆ ಅನೇಕ ತಾಲ್ಲೂಕು ಪಂಚಾಯತಿಗಳು ಎಂಪಿಎಎಸ್ ನಮೂನೆಯಲ್ಲಿ ಲೆಕ್ಕಪತ್ರಗಳನ್ನು ಇನ್ನೂ ತಯಾರಿಸಿರಲಿಲ್ಲ ಹಾಗೂ **ಕೋಷ್ಟಕ 1.9**ರಲ್ಲಿ ವಿವರಿಸಿದಂತೆ ಮಾನದಂಡನೆಗಳನ್ನು ಅನುಸರಿಸುವಲ್ಲಿ ತಪ್ಪಿದವು.

**ಕೋಷ್ಟಕ 1.9: ಎಮ್‌ಪಿಎಎಸ್ ಮಾದರಿಯಲ್ಲಿ ತಾಲ್ಲೂಕು ಪಂಚಾಯತಿಗಳ ವಾರ್ಷಿಕ ಲೆಕ್ಕತ್ರಗಳ ಸ್ಥಿತಿ**

| ವರ್ಷ | ವಾರ್ಷಿಕ ಲೆಕ್ಕಪತ್ರವನ್ನು ಮಂಡಿಸಿದ ತಾಲ್ಲೂಕು ಪಂಚಾಯತಿಗಳು | ಎಂಪಿಎಎಸ್ ನಮೂನೆಯಲ್ಲಿ ಲೆಕ್ಕಪತ್ರವನ್ನು ತಯಾರಿಸದ ತಾಲ್ಲೂಕು ಪಂಚಾಯತಿಗಳು |
|---|---|---|
| 2014–15 | 172 | 7 |
| 2015–16 | 164 | 20 |
| 2016–17 | 143 | 30 |
| 2017–18 | 125 | 16 |

ಆಧಾರ: ತಾಲ್ಲೂಕು ಪಂಚಾಯತಿಗಳ ವಾರ್ಷಿಕ ಲೆಕ್ಕಪತ್ರಗಳು

ರಾಜ್ಯದ ಗ್ರಾಮ ಪಂಚಾಯತಿಗಳು ಎಂಪಿಎಎಸ್ ನಮೂನೆಯನ್ನು ಇನ್ನೂ ಅಳವಡಿಸಿಕೊಂಡಿರಲಿಲ್ಲ.

**1.4.2.3 ಜಿಲ್ಲಾ ಪಂಚಾಯತಿಗಳು ಹಾಗೂ ತಾಲ್ಲೂಕು ಪಂಚಾಯತಿಗಳಲ್ಲಿ ಲೆಕ್ಕಪತ್ರಗಳ ಸ್ಥಿತಿಗತಿ**

ಹಣಕಾಸು ವರ್ಷವು ಮುಕ್ತಾಯಗೊಂಡ ಮೂರು ತಿಂಗಳೊಳಗೆ ವಾರ್ಷಿಕ ಲೆಕ್ಕಪತ್ರಗಳನ್ನು ತಯಾರಿಸಿ ಪಂಚಾಯತ್ ರಾಜ್ ಸಂಸ್ಥೆಗಳ ಸಾಮಾನ್ಯ ಸಭೆಯಿಂದ ಅನುಮೋದನೆಯನ್ನು ಪಡೆದು ಮತ್ತು

ಲೆಕ್ಕಪರಿಶೋಧನೆಗಾಗಿ ಮಹಾಲೇಖಾಪಾಲರಿಗೆ/ಪ್ರಧಾನ ನಿರ್ದೇಶಕರು, ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಗೆ ಕಳುಹಿಸಬೇಕು ಎಂಬುದಾಗಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ನಿರ್ದಿಷ್ಟ ಪಡಿಸಿದೆ.

2017–18ರಲ್ಲಿ, ಸರಿಯಾದ ಸಮಯದಲ್ಲಿ ನಾಲ್ಕು ಜಿಲ್ಲಾ ಪಂಚಾಯತಿಗಳು ಮಾತ್ರ ವಾರ್ಷಿಕ ಲೆಕ್ಕಪತ್ರವನ್ನು ಸಲ್ಲಿಸಿದ್ದು, 11 ಜಿಲ್ಲಾ ಪಂಚಾಯತಿಗಳು ವಾರ್ಷಿಕ ಲೆಕ್ಕಪತ್ರವನ್ನು ಸಲ್ಲಿಸುವಲ್ಲಿ 1 ರಿಂದ 100 ದಿನಗಳಷ್ಟು ವಿಳಂಬವಾಗಿತ್ತು. 15 ಜಿಲ್ಲಾ ಪಂಚಾಯತಿಗಳು ಅಕ್ಟೋಬರ್ 2018ರ ಅಂತ್ಯದವರೆಗೂ ಮಹಾಲೇಖಾಪಾಲರಿಗೆ 2017–18ನೇ ವರ್ಷದ ಲೆಕ್ಕಪತ್ರವನ್ನು ಸಲ್ಲಿಸಿರುವುದಿಲ್ಲ. ಹಾಗೆಯೇ 18 ತಾಲ್ಲೂಕು ಪಂಚಾಯತಿಗಳು 2017–18ರ ವಾರ್ಷಿಕ ಲೆಕ್ಕಪತ್ರವನ್ನು ಸರಿಯಾದ ಸಮಯದಲ್ಲಿ ಸಲ್ಲಿಸಿದ್ದು, 107 ತಾಲ್ಲೂಕು ಪಂಚಾಯತಿಗಳು 2017–18ನೇ ವರ್ಷದ ವಾರ್ಷಿಕ ಲೆಕ್ಕಪತ್ರವನ್ನು ಸಲ್ಲಿಸುವಲ್ಲಿ 1 ರಿಂದ 178 ದಿನಗಳಷ್ಟು ವಿಳಂಬವಾಗಿತ್ತು. 51 ತಾಲ್ಲೂಕು ಪಂಚಾಯತಿಗಳು ಅಕ್ಟೋಬರ್ 2018ರ ಅಂತ್ಯದವರೆಗೂ ಮಹಾಲೇಖಾಪಾಲರಿಗೆ 2017–18ನೇ ವರ್ಷದ ಲೆಕ್ಕಪತ್ರವನ್ನು ಸಲ್ಲಿಸಿರುವುದಿಲ್ಲ.

2017–18ನೇ ವರ್ಷದ ಜಿಲ್ಲಾ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿಗಳ ವಾರ್ಷಿಕ ಲೆಕ್ಕಪತ್ರವನ್ನು ವಿಳಂಬವಾಗಿ ಸಲ್ಲಿಸಿದ ಮಾಹಿತಿಯನ್ನು **ಕೋಷ್ಟಕ 1.10**ರಲ್ಲಿ ತೋರಿಸಲಾಗಿದೆ.

**ಕೋಷ್ಟಕ 1.10: ಜಿಲ್ಲಾ ಪಂಚಾಯತಿಗಳು ಮತ್ತು ತಾಲ್ಲೂಕು ಪಂಚಾಯತಿಗಳು ವಾರ್ಷಿಕ ಲೆಕ್ಕಪತ್ರವನ್ನು ವಿಳಂಬವಾಗಿ ಸಲ್ಲಿಸಿದ ಮಾಹಿತಿ (ಅಕ್ಟೋಬರ್ 2018ರ ವರೆಗೆ)**

| ವಿಳಂಬ | ಜಿಲ್ಲಾ ಪಂಚಾಯತಿಗಳು | ತಾಲ್ಲೂಕು ಪಂಚಾಯತಿಗಳು |
|---|---|---|
| ವಿಳಂಬವಿಲ್ಲದಿರುವುದು | 4 | 18 |
| 1–30 ದಿನ | 8 | 55 |
| 31–60 ದಿನ | 2 | 26 |
| 61–100 ದಿನ | 1 | 16 |
| 100 ದಿನ ಮೇಲ್ಪಟ್ಟು | - | 10 |
| **ಒಟ್ಟು** | **15** | **125** |

ಆಧಾರ: ಈ ಕಛೇರಿಯಲ್ಲಿ ಸ್ವೀಕರಿಸಿದ ವಾರ್ಷಿಕ ಲೆಕ್ಕಪತ್ರಗಳ ಸಂಕಲನೆ

### 1.4.2.4 ಜಿಲ್ಲಾ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿ ಲೆಕ್ಕಪತ್ರಗಳಲ್ಲಿ ಗಮನಿಸಲಾದ ನ್ಯೂನ್ಯತೆಗಳು

2017–18ರ ಅವಧಿಯಲ್ಲಿ ಜಿಲ್ಲಾ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿ ಲೆಕ್ಕಪತ್ರಗಳಲ್ಲಿ ಗಮನಿಸಲಾದ ಪ್ರಮುಖ ಕೊರತೆಗಳು ಈ ಕೆಳಗಿನಂತಿವೆ:

- ರಾಜ್ಯ ಸರ್ಕಾರವು ಅರಣ್ಯ ವಿಭಾಗ ಮತ್ತು ಪಂಚಾಯತ್ ರಾಜ್ ಇಂಜನಿಯರಿಂಗ್ ವಿಭಾಗದಲ್ಲಿಯ ಹಣ ಭರವಸೆಯ ಪತ್ರ (ಲೆಟರ್ ಆಫ್ ಕ್ರೇಡಿಟ್) ವ್ಯವಸ್ಥೆಯನ್ನು ಹಿಂತೆಗೆದುಕೊಂಡಿತು (ಅಕ್ಟೋಬರ್ 2006 ಮತ್ತು ಜೂನ್ 2007). ತತ್ಪರಿಣಾಮವಾಗಿ, ಎರಡು ವಿಭಾಗಗಳು ಚೆಕ್ಕುಗಳ ವಿತರಣೆಯನ್ನು ನಿಲ್ಲಿಸಿದವು. ಆದಾಗ್ಯೂ, 12 ಜಿಲ್ಲಾ ಪಂಚಾಯತಿಗಳ (ಲೆಕ್ಕಪತ್ರಗಳನ್ನು ಸಲ್ಲಿಸಿದ 15 ಜಿಲ್ಲಾ ಪಂಚಾಯತಿಗಳಲ್ಲಿ) 2017–18ರ ವರ್ಷದ ವಾರ್ಷಿಕ ಲೆಕ್ಕಪತ್ರಗಳು **ಅನುಬಂಧ 1.4**ರಲ್ಲಿ ವಿವರಿಸಿರುವಂತೆ ಹಿಂದಿನ ಅವಧಿಗಳಿಗೆ ಬೃಹತ್ ಮೊತ್ತದ ಶಿಲ್ಕುಗಳನ್ನು ಪ್ರತಿಬಿಂಬಿಸಿದವು. ಜಿಲ್ಲಾ ಪಂಚಾಯತಿಗಳು ನಗದಾಗಿಸುವ ಚೆಕ್ಕುಗಳನ್ನು ಖಜಾನೆಗಳೊಂದಿಗೆ ಸಮನ್ವಯಗೊಳಿಸಿರಲಿಲ್ಲ ಎಂಬುದನ್ನು ಇದು ಸೂಚಿಸಿತು ಹಾಗೂ ವೆಚ್ಚವನ್ನು ತಪ್ಪಾಗಿ ವರದಿ ಮಾಡುವಲ್ಲಿ ಪರಿಣಮಿಸಿತು.

- ರಾಜ್ಯ ಸರ್ಕಾರವು ಜಿಲ್ಲಾ ಪಂಚಾಯತಿಯು ಕಾರ್ಯಾಚರಣೆ ಮಾಡುತ್ತಿದ್ದ ತಾಲ್ಲೂಕು ಪಂಚಾಯತಿ ಮತ್ತು ಗ್ರಾಮ ಪಂಚಾಯತಿ ಅಮಾನತು ಲೆಕ್ಕಗಳನ್ನು ರದ್ದುಪಡಿಸಿತು (ಸೆಪ್ಟೆಂಬರ್ 2004). ಆದಾಗ್ಯೂ, 10 ಜಿಲ್ಲಾ ಪಂಚಾಯತಿಗಳು (ಲೆಕ್ಕಪತ್ರಗಳನ್ನು ಸಲ್ಲಿಸಿದ 15 ಜಿಲ್ಲಾ ಪಂಚಾಯತಿಗಳಲ್ಲಿ) ಅಮಾನತ್ತು ಲೆಕ್ಕವನ್ನು ಮುಕ್ತಾಯಗೊಳಿಸಲು ಯಾವುದೇ ಕ್ರಮ ಕೈಗೊಳ್ಳಲಿಲ್ಲ. ಮಾರ್ಚ್ 2018ರ ಅಂತ್ಯಕ್ಕೆ ಬಾಕಿ ಇರುವ ಶಿಲ್ಕುಗಳ ವಿವರಗಳನ್ನು **ಅನುಬಂಧ 1.5**ರಲ್ಲಿ ತೋರಿಸಲಾಗಿದೆ.

## 1.5 ನಿರ್ಣಯ

2015-16ಕ್ಕೆ ಹೋಲಿಸಿದಾಗ 2017-18ರಲ್ಲಿ ಜಿಲ್ಲಾ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿಗಳ ಸ್ವೀಕೃತಿಗಳು ಶೇಕಡಾ 10ರಷ್ಟು ಹೆಚ್ಚಳಗೊಂಡಿದ್ದವು ಹಾಗೂ ರಾಜ್ಯದ ಅನುದಾನ/ನಿಯೋಜಿತ ರಾಜಸ್ವದ ವೆಚ್ಚಗಳು ಶೇಕಡಾ 11ರಷ್ಟು. ಇಳಿಕೆಗೂಂಡಿದ್ದವು. ಹದಿನಾಲ್ಕನೇ ಹಣಕಾಸು ಆಯೋಗದ ಅನುದಾನವು ₹24.24 ಕೋಟಿಯಷ್ಟು ಕಡಿಮೆ ಸ್ವೀಕೃತವಾಗಿತ್ತು. ಹದಿನಾಲ್ಕನೇ ಹಣಕಾಸು ಆಯೋಗದ ಅನುದಾನದ ₹64.63 ಲಕ್ಷವನ್ನು ಗ್ರಾಮ ಪಂಚಾಯತಿಗಳಿಗೆ ಬಿಡುಗಡೆ ಮಾಡದೆ ಸ್ವೀಪ್-ಇನ್ ಠೇವಣಿ ಖಾತೆಯಲ್ಲಿ ಹೂಡಿಕೆ ಇಡಲಾಗಿತ್ತು. ಮಾರ್ಚ್ 2018ರ ಅಂತ್ಯದ ವೇಳೆಗೆ ಕೇಂದ್ರ/ರಾಜ್ಯ ಹಣಕಾಸು ಆಯೋಗದ ಅನುದಾನದಲ್ಲಿ ₹5.01 ಕೋಟಿಯನ್ನು ಉಳಿತಾಯ ಖಾತೆಯಲ್ಲಿ ಹಾಗು ₹83.16 ಕೋಟಿಯನ್ನು ಸ್ವೀಪ್-ಇನ್ ಠೇವಣಿ ಖಾತೆಯಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಪಂಚಾಯತ್ ರಾಜ್ ಸಂಸ್ಥೆಗಳಿಗೆ ಬಿಡುಗಡೆ ಮಾಡದೆ ಉಳಿಸಿಕೊಂಡಿತ್ತು. ಅಕ್ಟೋಬರ್ 2018ರಲ್ಲಿದ್ದಂತೆ ನೋಂದಣಿಗಳ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು 2016-17ನೇ ಹಾಗೂ 2017-18 ವರ್ಷದ ಸ್ಥಿರ ಸ್ವತ್ತುಗಳ ವರ್ಗಾವಣೆ ಮೇಲೆ ಶುಲ್ಕವನ್ನು ತಾಲ್ಲೂಕು ಪಂಚಾಯತಿಗಳಿಗೆ ವರ್ಗಾವಣೆ ಮಾಡಿರಲಿಲ್ಲ. 11 ಜಿಲ್ಲಾ ಪಂಚಾಯತಿಗಳಿಂದ ಮತ್ತು 107 ತಾಲ್ಲೂಕು ಪಂಚಾಯತಿಗಳಿಂದ (1ರಿಂದ 178 ದಿನಗಳು) 2017-18ರ ವಾರ್ಷಿಕ ಲೆಕ್ಕಪತ್ರವನ್ನು ಮಹಾಲೇಖಾಪಾಲರಿಗೆ ಸಲ್ಲಿಸುವಲ್ಲಿ ವಿಳಂಬವಿತ್ತು. 15 ಜಿಲ್ಲಾ ಪಂಚಾಯತಿಗಳು ಹಾಗೂ 51 ತಾಲ್ಲೂಕು ಪಂಚಾಯತಿಗಳು ಅಕ್ಟೋಬರ್ 2018ರ ಅಂತ್ಯದವರೆಗೂ ಮಹಾಲೇಖಾಪಾಲರಿಗೆ 2017-18ನೇ ವರ್ಷದ ಲೆಕ್ಕಪತ್ರವನ್ನು ಸಲ್ಲಿಸಿರುವುದಿಲ್ಲ. ಮಾರ್ಚ್ 2018ರವರೆಗೆ 4,739 ಕಂಡಿಕೆಗಳನ್ನು (ಶೇಕಡಾ 29.5) ಒಳಗೊಂಡ 1,820 ತಪಾಸಣಾ ವರದಿಗಳು (ಶೇಕಡಾ 51.4), 10 ವರ್ಷಗಳಿಗೂ ಮೇಲ್ಪಟ್ಟು ಬಾಕಿ ಉಳಿದಿವೆ. ಇದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಅಸಮರ್ಪಕ ಕ್ರಮವನ್ನು ಸೂಚಿಸುತ್ತದೆ.

# ಅಧ್ಯಾಯ - II

# ಪಂಚಾಯತ್ ರಾಜ್ ಸಂಸ್ಥೆಗಳ ಲೆಕ್ಕಪರಶೋಧನೆಯ ಫಲಿತಾಂಶಗಳು

# ಅಧ್ಯಾಯ II – ಅನುಪಾಲನಾ ಲೆಕ್ಕಪರಿಶೋಧನೆ

## ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ

### 2.1 ಗ್ರಾಮ ಪಂಚಾಯತಿಗಳಿಂದ ಉಪಕರದ ಮೊತ್ತದ ಮಾರ್ಗಪಲ್ಲಟ

**ಗ್ರಾಮ ಪಂಚಾಯತಿಗಳು ವಿವಿಧ ಉಪಕರದ ಮೊತ್ತಗಳನ್ನು ಜಮೆ ಮಾಡದಿರುವುದು ತಮ್ಮದೇ ವೆಚ್ಚಗಳಿಗೆ ₹1.32 ಕೋಟಿಗಳನ್ನು ಮಾರ್ಗಪಲ್ಲಟ ಮಾಡಲು ಅವಕಾಶ ಮಾಡಿಕೊಟ್ಟಿತು ಮತ್ತು ಉಪಕರಗಳನ್ನು ವಿಧಿಸಿ ಸಂಗ್ರಹಿಸಿದ್ದ ಉದ್ದೇಶವನ್ನೇ ಸೋಲಿಸಿದಂತಾಯಿತು.**

ಕರ್ನಾಟಕ ಆರೋಗ್ಯ ಉಪಕರ ಅಧಿನಿಯಮ, 1962ರ ಪರಿಚ್ಛೇದ 4ಎ, ಕರ್ನಾಟಕ ಸಾರ್ವಜನಿಕ ಗ್ರಂಥಾಲಯಗಳ ಅಧಿನಿಯಮ, 1965ರ ಪರಿಚ್ಛೇದ 30(4) ಮತ್ತು ಕರ್ನಾಟಕ ಭಿಕ್ಷಾಟನಾ ನಿಷೇಧ ಅಧಿನಿಯಮ, 1975ರ ಪರಿಚ್ಛೇದ 31, ಭೂಮಿ ಮತ್ತು ಕಟ್ಟಡಗಳ ಮೇಲೆ ಸಂಗ್ರಹಿಸಿದ ತೆರಿಗೆ ಮೊತ್ತದ ಮೇಲೆ ಆರೋಗ್ಯ ಉಪಕರ (ಶೇಕಡಾ 15), ಗ್ರಂಥಾಲಯ ಉಪಕರ (ಶೇಕಡಾ ಆರು) ಮತ್ತು ಭಿಕ್ಷಾಟನಾ ಉಪಕರ (ಶೇಕಡಾ ಮೂರು), ಇವುಗಳನ್ನು ವಿಧಿಸಿ ಸಂಗ್ರಹಿಸಲು ಗ್ರಾಮ ಪಂಚಾಯತಿಗಳಿಗೆ ಅಧಿಕಾರ ನೀಡುತ್ತದೆ. ಗ್ರಾಮ ಪಂಚಾಯತಿಗಳು ತಾವು ವಸೂಲು ಮಾಡಿದ ಮೊತ್ತದ ಶೇಕಡಾ 10ರಷ್ಟನ್ನು ಸಂಗ್ರಹಣಾ ವೆಚ್ಚವನ್ನಾಗಿ ಕಡಿತಗೊಳಿಸಿ ಉಳಿದ ಮೊತ್ತವನ್ನು ರಾಜ್ಯ ಸರ್ಕಾರಕ್ಕೆ ಅಥವಾ ಸಂಬಂಧಿತ ಪ್ರಾಧಿಕಾರಗಳಿಗೆ ಅಪೇಕ್ಷಿತ ಉದ್ದೇಶಗಳನ್ನು[5] ಸಾಧಿಸುವುದಕ್ಕೆ ಜಮೆ ಮಾಡಬೇಕು.

ಇದಲ್ಲದೆ, ಉಚ್ಚ ನ್ಯಾಯಾಲಯವು ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಯ ಮೇಲಿನ ತನ್ನ ನಿರ್ಣಯದಲ್ಲಿ (ಸೆಪ್ಟಂಬರ್ 2012) ಈ ಕೆಳಗಿನಂತೆ ಅಭಿಪ್ರಾಯಪಟ್ಟಿದೆ:

**"ಭಿಕ್ಷಾಟನಾ ಉಪಕರವನ್ನು ಸಂಗ್ರಹಿಸಿದ ನಂತರ ಅದನ್ನು ತನ್ನಲ್ಲೇ ಉಳಿಸಿಕೊಳ್ಳುವ ಕ್ರಮವು ನಿಸ್ಸಂದೇಹವಾಗಿ ಅದರ ದುರುಪಯೋಗಕ್ಕೆ ಮತ್ತು ಗಂಭೀರ ದಂಡದ ಪರಿಣಾಮಗಳಿಗೆ ಕಾರಣವಾಗುತ್ತದೆ. ಕೇಂದ್ರ ಪರಿಹಾರ ಸಮಿತಿಗೆ ವರ್ಗಾಯಿಸಬೇಕಾದ ಭಿಕ್ಷಾಟನಾ ಉಪಕರ ಮೊತ್ತವನ್ನು ವರ್ಗಾವಣೆ ಮಾಡದಿರುವುದಕ್ಕೆ ಯಾವುದೇ ಕ್ಷಮೆಯಿರುವುದಿಲ್ಲ"**

ಮಾರ್ಚ್ 2014ಕ್ಕೆ ಕೊನೆಗೊಂಡ ವರ್ಷದ ಸ್ಥಳೀಯ ಸಂಸ್ಥೆಗಳ ಮೇಲಿನ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿಯ (ಆಗಸ್ಟ್ 2016) ಕಂಡಿಕೆ 2.3ಕ್ಕೆ ಪ್ರತಿಕ್ರಿಯೆಯಾಗಿ ಸಂಗ್ರಹಿಸಿದ ವಿವಿಧ ಉಪಕರಗಳನ್ನು ಸಂಬಂಧಿತ ಪ್ರಾಧಿಕಾರಗಳಿಗೆ ಜಮೆ ಮಾಡಬೇಕೆಂದು ಎಲ್ಲಾ ಗ್ರಾಮ ಪಂಚಾಯತಿಗಳಿಗೆ ಸರ್ಕಾರವು ನಿರ್ದೇಶನ ನೀಡಿತ್ತು. 31 ಮಾರ್ಚ್ 2018ರೊಳಗೆ ವಿವಿಧ ಉಪಕರಗಳನ್ನು ಜಮೆ ಮಾಡುವಂತೆ ಗ್ರಾಮ ಪಂಚಾಯತಿಗಳಿಗೆ ರಾಜ್ಯ ಸರ್ಕಾರವು ಮತ್ತೂ ನಿರ್ದೇಶನ ನೀಡಿತ್ತು (ಏಪ್ರಿಲ್ 2017).

ದಾಖಲೆಗಳ ಲೆಕ್ಕಪರಿಶೋಧನಾ ಪರಿಶೀಲನೆ ಮತ್ತು ರಾಜ್ಯದಲ್ಲಿನ 6,022 ಗ್ರಾಮ ಪಂಚಾಯತಿಗಳ ಪೈಕಿ 59 ಗ್ರಾಮ ಪಂಚಾಯತಿಗಳಿಗೆ ನೀಡಿದ ನಮೂನೆಗಳ ಮೂಲಕ ಸಂಗ್ರಹಿಸಿದ ಮಾಹಿತಿಯು, ಈ 59 ಗ್ರಾಮ ಪಂಚಾಯತಿಗಳು 2012–13ರಿಂದ 2016–17ರ ಅವಧಿಯಲ್ಲಿ ಭೂಮಿ ಮತ್ತು ಕಟ್ಟಡಗಳ ಮೇಲಿನ ತೆರಿಗೆಯ ಮೊತ್ತದ ಮೇಲೆ ಆರೋಗ್ಯ ಉಪಕರ (₹0.91 ಕೋಟಿ), ಗ್ರಂಥಾಲಯ ಉಪಕರ (₹0.37 ಕೋಟಿ) ಮತ್ತು ಭಿಕ್ಷಾಟನಾ ಉಪಕರ (₹0.17 ಕೋಟಿ), ಇವುಗಳ ಕಡೆಗೆ ₹1.45 ಕೋಟಿಗಳನ್ನು (ನಿವ್ವಳ ಉಪಕರದ ಮೊತ್ತ) ವಿಧಿಸಿ ಸಂಗ್ರಹಿಸಿದ್ದವೆಂದು ತೋರಿಸಿತು. ಶಾಸನಬದ್ಧ ನಿಬಂಧನೆಗಳನ್ನು, ಉಚ್ಚ ನ್ಯಾಯಾಲಯದ ನಿರ್ದೇಶನಗಳನ್ನು ಮತ್ತು ರಾಜ್ಯ ಸರ್ಕಾರದ ಸೂಚನೆಗಳನ್ನು ಉಲ್ಲಂಘಿಸಿ ಗ್ರಾಮ ಪಂಚಾಯತಿಗಳು ₹1.32 ಕೋಟಿಯನ್ನು ವೇತನ ವೆಚ್ಚ, ಅಭಿವೃದ್ಧಿ ಕಾಮಗಾರಿಗಳು, ಬೀದಿ ದೀಪಗಳು,

---

5 ಆರೋಗ್ಯಸೇವೆಗಳ ಮೂಲಸೌಕರ್ಯಗಳನ್ನು ಸುಧಾರಿಸಲು ರಾಜ್ಯ ಸರ್ಕಾರಕ್ಕೆ ಆರೋಗ್ಯ ಉಪಕರ, ನಗರ/ಜಿಲ್ಲಾ ಗ್ರಂಥಾಲಯ ಪ್ರಾಧಿಕಾರಗಳಿಗೆ ಗ್ರಂಥಾಲಯ ವಿಜ್ಞಾನದ ಅಭಿವೃದ್ಧಿ ಮತ್ತು ಸುಧಾರಣೆಗೆ ಗ್ರಂಥಾಲಯ ಉಪಕರ ಮತ್ತು ಭಿಕ್ಷುಕರಿಗೆ ಪರಿಹಾರ ಮತ್ತು ಪುನರ್ವಸತಿಯನ್ನು ಕಲ್ಪಿಸಲು ಕೇಂದ್ರ ಪರಿಹಾರ ನಿಧಿಗೆ ಭಿಕ್ಷಾಟನಾ ಉಪಕರ.

ನೀರಿನ ಬಿಲ್‌ಗಳು ಮತ್ತು ಇತರೆ ವೆಚ್ಚಗಳನ್ನು[6] ಭರಿಸಲು ಬಳಸಿದ್ದವು ಎಂಬುದನ್ನು ನಾವು ಗಮನಿಸಿದೆವು. ಗ್ರಾಮ ಪಂಚಾಯತಿಗಳು **ಅನುಬಂಧ–2.1**ರಲ್ಲಿ ತೋರಿಸಿರುವಂತೆ, ಸಂಬಂಧಿಸಿದ ಪ್ರಾಧಿಕಾರಗಳಿಗೆ ಜಮೆ ಮಾಡದೆ ಉಳಿದ ₹0.13 ಕೋಟಯನ್ನು ತಮ್ಮ ಬಳಿಯೇ ಉಳಿಸಿಕೊಂಡಿದ್ದವು.

ಗ್ರಾಮ ಪಂಚಾಯತಿಗಳು ತಮ್ಮ ಸ್ವಂತ ಖರ್ಚಿಗಾಗಿ ಈ ಹಣವನ್ನು ಮಾರ್ಗಪಲ್ಲಟ ಮಾಡಿರುವುದು ಅಕ್ರಮವಾಗಿತ್ತು ಮತ್ತು ಉಪಕರಗಳನ್ನು ವಿಧಿಸಿ ಸಂಗ್ರಹಿಸುವ ಉದ್ದೇಶವನ್ನೇ ಸೋಲಿಸಿದವು. ಉಪಕರಗಳನ್ನು ಜಮೆ ಮಾಡದಿರುವುದು ಆರೋಗ್ಯ ಇಲಾಖೆ, ಗ್ರಂಥಾಲಯ ಇಲಾಖೆಗೆ ಪುಸ್ತಕಗಳನ್ನು ಮತ್ತು ನಿಯತಕಾಲಿಕಗಳನ್ನು ಖರೀದಿಸಲು ಹಾಗೂ ಭಿಕ್ಷುಕರಿಗೆ ಪರಿಹಾರ ಮತ್ತು ಪುನರ್ವಸತಿಯನ್ನು ಕಲ್ಪಿಸಲು ಕೇಂದ್ರ ಪರಿಹಾರ ನಿಧಿಯ ಚಟುವಟಿಕೆಗಳನ್ನು ಬಾಧಿಸುವ ಸಾಧ್ಯತೆಯಿದೆ. ಇವುಗಳು ಕೇವಲ ದೃಷ್ಟಾಂತ ಪ್ರಕರಣಗಳಾಗಿದ್ದು ಬೇರೆ ಗ್ರಾಮ ಪಂಚಾಯತಿಗಳಲ್ಲಿ ಇಂತಹದೇ ಲೋಪಗಳ ಅಪಾಯಗಳನ್ನು ತಳ್ಳಿಹಾಕುವಂತಿಲ್ಲ. ಆದುದರಿಂದ ರಾಜ್ಯ ಸರ್ಕಾರವು ಎಲ್ಲ 6,022 ಗ್ರಾಮ ಪಂಚಾಯತಿಗಳಲ್ಲಿ ಈ ವಿಷಯವನ್ನು ಪರಿಶೀಲಿಸುವ ಹಾಗೂ ಸೂಕ್ತ ಪರಿಹಾರಾತ್ಮಕ ಕ್ರಮಗಳನ್ನು ತೆಗೆದುಕೊಳ್ಳುವ ಅಗತ್ಯವಿದೆ.

ಕಡೂರು ಮತ್ತು ತರೀಕರೆ ತಾಲ್ಲೂಕು ಪಂಚಾಯತಿಗಳ ಗ್ರಾಮ ಪಂಚಾಯತಿಗಳು ಆರು ತಿಂಗಳುಗಳೊಳಗೆ ಸಂಬಂಧಪಟ್ಟ ಪ್ರಾಧಿಕಾರಗಳಿಗೆ ವಿವಿಧ ಉಪಕರ ಮೊತ್ತಗಳನ್ನು ಜಮೆ ಮಾಡುತ್ತವೆ ಮತ್ತು ಇತರೆ ಗ್ರಾಮ ಪಂಚಾಯತಿಗಳು ಜಮೆಯ ಯಾವುದೇ ವಿವರಗಳನ್ನು ಸಲ್ಲಿಸಿಲ್ಲ ಎಂದು ರಾಜ್ಯ ಸರ್ಕಾರವು ಉತ್ತರಿಸಿತು (ಜೂನ್ 2018). ಗ್ರಾಮ ಪಂಚಾಯತಿಗಳ ವಿರುದ್ಧ ರಾಜ್ಯ ಸರ್ಕಾರವು ಸಹ ಅಗತ್ಯ ಕ್ರಮಗಳನ್ನು ಕೈಗೊಳ್ಳುವಲ್ಲಿ ವಿಫಲವಾಯಿತು.

## 2.2 ಸಾರ್ವಜನಿಕ ಹಣದ ದುರ್ಬಳಕೆ/ವ್ಯರ್ಥ ಉಪಯೋಗ

**ಗಂಗಾವತಿ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಯವರು ಯಾವುದೇ ಸಾರ್ವಜನಿಕ ಹಿತಾಸಕ್ತಿಯಿಲ್ಲದೇ ಮುದ್ರಣ/ಎಲೆಕ್ಟ್ರಾನಿಕ್ ಮಾಧ್ಯಮಗಳಲ್ಲಿ ಶುಭಾಶಯಗಳು ಮತ್ತು ಸಂದೇಶಗಳನ್ನು ಪ್ರಕಟಿಸಲು ₹22.47 ಕೋಟಿಗಳನ್ನು ವೆಚ್ಚ ಮಾಡಿದರು.**

ಸಾದಿಲ್ವಾರು ವೆಚ್ಚ ಕೈಪಿಡಿ, 1958ರ ನಿಯಮ 2ರ ಅನ್ವಯ ಸಾದಿಲ್ವಾರು ಶುಲ್ಕಗಳು ಕಛೇರಿಯಲ್ಲಿ ಕಛೇರಿಯ ನಿರ್ವಹಣೆಗೆ ಅಥವಾ ಇಲಾಖೆಯ ತಾಂತ್ರಿಕ ನಿರ್ವಹಣೆಗೆ ಆಗುವ ಎಲ್ಲ ಪ್ರಾಸಂಗಿಕ ಹಾಗೂ ಇತರ ಖರ್ಚುಗಳನ್ನು ಒಳಗೊಂಡಿರುತ್ತವೆ. ಕೆಲವು ಇತರೆ ವೆಚ್ಚ ಶೀರ್ಷಿಕೆಗಳ ಅಡಿಯಲ್ಲಿ ವರ್ಗೀಕೃತವಾಗಿರುವ ಖರ್ಚುಗಳನ್ನು ಇದು ಒಳಗೊಂಡಿರುವುದಿಲ್ಲ, ಉದಾಹರಣೆಗೆ ಕಾಮಗಾರಿಗಳು, ದಾಸ್ತಾನು ಇತ್ಯಾದಿ. ಕರ್ನಾಟಕ ಆರ್ಥಿಕ ಸಂಹಿತೆ, 1958ರ ನಿಯಮ 16, ಪ್ರತಿ ಸರ್ಕಾರಿ ನೌಕರನು ತನ್ನಿಂದ ಅಥವಾ ತನ್ನ ನಿಯಂತ್ರಣದಲ್ಲಿ ವೆಚ್ಚ ಮಾಡಿದ ಎಲ್ಲ ಸಾರ್ವಜನಿಕ ಹಣಕ್ಕೆ ಉತ್ತಮವಾದ ಮೌಲ್ಯವನ್ನು ಪಡೆಯಲಾಗಿದಿಯೇ ಎಂದು ನಿರಂತರವಾಗಿ ಗಮನವಿಡಬೇಕು ಮತ್ತು ಸಾರ್ವಜನಿಕ ಹಣದಿಂದ ಪ್ರತಿಯೊಂದು ತರಹದ ವ್ಯರ್ಥ ವೆಚ್ಚದ ವಿರುದ್ಧ ಎಚ್ಚರಿಕೆಯಿಂದ ಸಂರಕ್ಷಿಸಬೇಕು, ಎಂದು ನಿಗದಿಪಡಿಸುತ್ತದೆ. ಅಲ್ಲದೆ, ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು ಯಾವುದೇ ಸಾರ್ವಜನಿಕ ಹಿತಾಸಕ್ತಿ ಇಲ್ಲದೇ ಜಾಹಿರಾತುಗಳಿಗೆ ಅನಿಯಂತ್ರಿತವಾಗಿ ಸಾರ್ವಜನಿಕ ಹಣವನ್ನು ಬಳಸುವುದನ್ನು ತಡೆಯುವ ಉದ್ದೇಶದಿಂದ 'ಸರ್ಕಾರಿ ಜಾಹಿರಾತಿನ ವಿಷಯ ನಿಯಂತ್ರಣದ ಮೇಲೆ ಮಾರ್ಗಸೂಚಿಗಳನ್ನು' ಅನುಮೋದಿಸಿತು (ಮೇ 2015). ನ್ಯಾಯಾಲಯವು ಇತರ ವಿಷಯಗಳ ಜೊತೆಗೆ, ಜಾಹಿರಾತು ಪ್ರಚಾರವನ್ನು ಸಮರ್ಥಿಸಬೇಕು ಮತ್ತು ಸರ್ಕಾರದ ಜವಾಬ್ದಾರಿಗಳಿಗೆ ಸಂಬಂದಿಸಿರಬೇಕು ಎಂದು ತಿಳಿಸಿತ್ತು.

2017–18ರ ಅವಧಿಯಲ್ಲಿ 44 ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳ ದಾಖಲೆಗಳನ್ನು ಲೆಕ್ಕಪರಿಶೋಧನೆಯು ಪರೀಕ್ಷಾ–ತನಿಖೆ ನಡೆಸಿತು. ಒಂದು ತಾಲ್ಲೂಕು ಪಂಚಾಯತಿಯಲ್ಲಿ (ಗಂಗಾವತಿ, ಕೊಪ್ಪಳ ಜಿಲ್ಲೆ), ಕಾರ್ಯನಿರ್ವಾಹಕ ಅಧಿಕಾರಿಯವರು 2014–15ರಿಂದ 2016–17ರ ಅವಧಿಯಲ್ಲಿ ಲೆಕ್ಕಶೀರ್ಷಿಕೆ 2515–00–102–0–61 ಅಡಿಯಲ್ಲಿ (ತಾಲ್ಲೂಕು ಪಂಚಾಯತಿ ನಿರ್ವಹಣಾ ಅನುದಾನಗಳು) 56 ಸವಿವರ ಸಾದಿಲ್ವಾರು ಬಿಲ್ಲುಗಳ ಮೇಲೆ ₹22.47 ಲಕ್ಷಗಳನ್ನು ತೆಗೆದಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಈ ಮೊತ್ತವನ್ನು ಮುದ್ರಣ, ಎಲೆಕ್ಟ್ರಾನಿಕ್ ಮತ್ತು ಡಿಜಿಟಲ್

[6] 10 ಗ್ರಾಮಪಂಚಾಯತಿಗಳು ಮಾಡಿದ ₹0.20 ಕೋಟಿ ವೆಚ್ಚವನ್ನು ಯಾವ ಉದ್ದೇಶಕ್ಕೆ ಬಳಸಲಾಗಿದೆ ಎಂದು ತಿಳಿಸಲಿಲ್ಲ.

ಮಾಧ್ಯಮಗಳಲ್ಲಿ ಹಬ್ಬಗಳಿಗೆ (*ದೀಪಾವಳಿ, ಆನೆಗುಂಡಿ, ಕನಕಗಿರಿ), ಕನ್ನಡ ರಾಜ್ಯೋತ್ಸವ, ಸ್ವಾಂತಂತ್ರ ದಿನೋತ್ಸವ* ಮುಂತಾದ ದಿನಗಳಲ್ಲಿ ಸಂದೇಶಗಳನ್ನು ಪ್ರಕಟಿಸಲು ಮತ್ತು ಶುಭಾಶಯಗಳನ್ನು ತಿಳಿಸಲು ಪಾವತಿ ಮಾಡಲಾಗಿತ್ತು. ಸಾರ್ವಜನಿಕ ಖಜಾನೆಯಿಂದ ಮಾಡಿದ ಅಂತಹ ವೆಚ್ಚವು ಯಾವುದೇ ಸಾರ್ವಜನಿಕ ಉದ್ದೇಶವನ್ನು ಪೂರೈಸಲಿಲ್ಲ ಮತ್ತು ತಾಲ್ಲೂಕು ಪಂಚಾಯತಿಯ ಜವಾಬ್ದಾರಿಗಳಿಗೂ ಸಂಬಂಧಿಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

ಈ 56 ಸವಿವರ ಸಾದಿಲ್ವಾರು ಬಿಲ್ಲುಗಳ ಮೂಲಕ 143 ವೋಚರ್‌ಗಳನ್ನು ಪಾವತಿಸಲಾಗಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು ಮತ್ತು ಈ ವೋಚರ್‌ಗಳ ಪರಿಶೀಲನೆಯು ಕೆಳಗಿನವುಗಳನ್ನು ತಿಳಿಯಪಡಿಸಿತು:

(1) ಗಂಗಾವತಿ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಯವರು ಕ್ಲೈಮ್‌ಗಳ ಉದ್ದೇಶವನ್ನೇ ಹೊಂದಿರದ 55 ವೋಚರ್‌ಗಳ (ಶೇಕಡಾ 38) ಮೇಲೆ ಪಾವತಿಯನ್ನು ಅನುಮೋದಿಸಿದ್ದರು.

    91 ವೋಚರ್‌ಗಳಲ್ಲಿ (ಶೇಕಡಾ 64) ಸಂದೇಶಗಳನ್ನು ಪ್ರಕಟಿಸಿದ ದಿನಾಂಕಗಳನ್ನು ನಮೂದಿಸಿರಲಿಲ್ಲ ಮತ್ತು 115 ವೋಚರ್‌ಗಳಲ್ಲಿ (ಶೇಕಡಾ 80) ಮಾಧ್ಯಮದಲ್ಲಿ ನೀಡಲಾದ ಸಂದೇಶಗಳ ಗಾತ್ರ/ಅಳತೆಯ ವಿವರಗಳನ್ನು ಸೂಚಿಸಿರಲಿಲ್ಲ.

    ಕ್ಲೈಮ್‌ಗಳ ಪೂರ್ಣ ಮತ್ತು ಸ್ಪಷ್ಟವಾದ ವಿವರಗಳ ಅನುಪಸ್ಥಿತಿಯಲ್ಲಿ ಮೇಲಿನ ವಹಿವಾಟುಗಳ ನೈಜತೆಯನ್ನು ಲೆಕ್ಕಪರಿಶೋಧನೆಯು ದೃಢೀಕರಿಸಲು ಸಾಧ್ಯವಾಗಲಿಲ್ಲ.

(2) ಉದ್ದೇಶಗಳನ್ನು ಹೊಂದಿದ್ದ 88 ವೋಚರ್‌ಗಳಲ್ಲಿ ₹3.88 ಲಕ್ಷ ಮೊತ್ತದ 37 ವೋಚರ್‌ಗಳು (ಶೇಕಡಾ 42) ಒಂದು ಹಬ್ಬಕ್ಕಾಗಿ (ದೀಪಾವಳಿ) ಸಂದೇಶಗಳನ್ನು ತಿಳಿಸುವುದಕ್ಕೆ ಸಂಬಂಧಿಸಿದ್ದವು.

(3) ₹3.01 ಲಕ್ಷ ಮೊತ್ತದ 24 ವೋಚರ್‌ಗಳ ಸಂಬಂಧವಾಗಿ ಗಂಗಾವತಿ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಯವರು ₹1.47 ಲಕ್ಷ ಪಾವತಿಯನ್ನು ಅನುಮತಿಸಿರಲಿಲ್ಲ ಮತ್ತು ಅದಕ್ಕಾಗಿ ದಾಖಲಿತ ಕಾರಣಗಳು ಲಭ್ಯವಿರಲಿಲ್ಲ.

(4) ಅಂತಹ ಸಂದೇಶಗಳನ್ನು ಪ್ರಕಟಿಸುವ ಪ್ರಸ್ತಾವನೆಗಳನ್ನು ಗಂಗಾವತಿ ತಾಲ್ಲೂಕು ಪಂಚಾಯತಿಯ ಸಾಮಾನ್ಯ ಸಭೆಗೆ ಸಲ್ಲಿಸಿರುವುದಕ್ಕೆ ಯಾವುದೇ ಪುರಾವೆಗಳಿರಲಿಲ್ಲ. ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಯವರು ಮುದ್ರಣ/ಎಲೆಕ್ಟ್ರಾನಿಕ್ ಮಾಧ್ಯಮಗಳಿಗೆ ಸಂದೇಶಗಳನ್ನು ಪ್ರಕಟಿಸಲು ಯಾವುದೇ ವಿನಂತಿ ಮಾಡಿರಲಿಲ್ಲ ಎಂಬುದನ್ನೂ ಗಮನಿಸಲಾಯಿತು. ಹೀಗೆ, ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಯವರು ಯಾವುದೇ ಸಮರ್ಥನೆಯಿಲ್ಲದೇ ಮತ್ತು ಸಕ್ಷಮ ಪ್ರಾಧಿಕಾರದ (ಸಾಮಾನ್ಯ ಸಭೆ) ಮಂಜೂರಾತಿಯಿಲ್ಲದೇ ಸಾರ್ವಜನಿಕ ಹಣವನ್ನು ವೆಚ್ಚ ಮಾಡಿದ್ದರು. ಸಾಮಾನ್ಯ ಸಭೆಯು 2014–15ರಿಂದ 2016–17ನೇ ವರ್ಷಗಳಿಗೆ ಸಂಬಂಧಿಸಿದ ಜಾಹಿರಾತುಗಳ ಪಾವತಿಗೆ ಘಟನೋತ್ತರ ಮಂಜೂರಾತಿಯನ್ನು ನೀಡಿತು (ಜೂನ್ 2014, ಏಪ್ರಿಲ್ 2015 ಮತ್ತು ಮಾರ್ಚ್ 2017).

ಹೀಗೆ, ಗಂಗಾವತಿ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾಡಿದ ₹22.47 ಲಕ್ಷ ವೆಚ್ಚವು ಸಾಮಾನ್ಯವಾಗಿ ಒಪ್ಪಿಕೊಳ್ಳುವ ಹಣಕಾಸಿನ ಔಚಿತ್ಯ ತತ್ವಗಳಿಗೆ ಮತ್ತು ಗೌರವಾನ್ವಿತ ಸರ್ವೋಚ್ಛ ನ್ಯಾಯಾಲಯವು ಅನುಮೋದಿಸಿದ ವಿಷಯ ನಿಯಂತ್ರಣದ ಮೇಲಿನ ಮಾರ್ಗಸೂಚಿಗಳಿಗೆ ಅನುಗುಣವಾಗಿರಲಿಲ್ಲ. ಇದು ಸಾರ್ವಜನಿಕ ಉದ್ದೇಶಕ್ಕೆ ಸಂಬಂಧಿಸಿರದ ಚಟುವಟಿಕೆಯ ಮೇಲೆ ಸಾರ್ವಜನಿಕ ಹಣವನ್ನು ದುರುಪಯೋಗ/ವ್ಯರ್ಥ ಮಾಡುವುದರಲ್ಲಿ ಪರಿಣಮಿಸಿತು. ಅಲ್ಲದೆ, ಕ್ಲೈಮ್‌ಗಳ ಪೂರ್ಣ ಮತ್ತು ಸ್ಪಷ್ಟ ವಿವರಗಳನ್ನು ಹೊಂದಿರದ ವೋಚರ್‌ಗಳನ್ನು ಒಪ್ಪಿಕೊಂಡಿರುವುದು ವೆಚ್ಚ ನಿಯಂತ್ರಣವನ್ನು ದುರ್ಬಲಗೊಳಿಸುತ್ತದೆ ಮತ್ತು ಭರಿಸಿದ ವೆಚ್ಚದ ನಿಖರತೆಗೆ ಯಾವುದೇ ಭರವಸೆಯನ್ನೂ ನೀಡುವುದಿಲ್ಲ.

ತಾಲ್ಲೂಕು ಪಂಚಾಯತಿಯ ಆಡಳಿತ ಸಮಿತಿಯ ಮೌಖಿಕ ಕೋರಿಕೆಗಳ ಆಧಾರದ ಮೇಲೆ ಈ ಸಂದೇಶಗಳನ್ನು ಮತ್ತು ಶುಭಾಶಯಗಳನ್ನು ಪ್ರಕಟಿಸಲಾಯಿತು ಮತ್ತು ಸಾಮಾನ್ಯ ಸಭೆಯು ಪಾವತಿಗಾಗಿ ಅನುಮೋದನೆಯನ್ನು ನೀಡಿತು ಎಂದು ರಾಜ್ಯ ಸರ್ಕಾರವು ತಿಳಿಸಿತು (ಆಗಸ್ಟ್ 2018). ಆದರೂ ಸಾರ್ವಜನಿಕ ಖಜಾನೆಯಿಂದ ಭರಿಸಿದ ವೆಚ್ಚವು ಯಾವುದೇ ಸಾರ್ವಜನಿಕ ಉದ್ದೇಶವನ್ನೂ ಪೂರೈಸಲಿಲ್ಲ

ಅಥವಾ ತಾಲ್ಲೂಕು ಪಂಚಾಯತಿಯ ಜವಾಬ್ದಾರಿಗಳಿಗೂ ಸಂಬಂಧಿಸಿರಲಿಲ್ಲ ಎಂಬುದು ವಾಸ್ತವಾಂಶವಾಗಿದೆ. ನಿರ್ದಿಷ್ಟ ವಿವರಗಳಿಲ್ಲದೇ ವೋಚರ್‌ಗಳನ್ನು ಒಪ್ಪಿಕೊಂಡಿರುವ ಲೆಕ್ಕಪರಿಶೋಧನೆಯ ವೀಕ್ಷಣೆಗೆ ಉತ್ತರ ನೀಡಿರುವುದಿಲ್ಲ. ಅಲ್ಲದೆ, ಗಂಗಾವತಿ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಯವರು ಮೌಖಿಕ ವಿನಂತಿಗಳ ಆಧಾರದ ಮೇಲೆ ಕಾರ್ಯ ನಿರ್ವಹಿಸಿದ್ದರು ಮತ್ತು ಸಮರ್ಥನೆಯಿಲ್ಲದೇ/ಲಿಖಿತ ಮಂಜೂರಾತಿಯಿಲ್ಲದೇ ಹಣವನ್ನು ವೆಚ್ಚ ಮಾಡಿದ್ದರು, ಇದು ಸಮರ್ಥನೀಯವಾಗಿರಲಿಲ್ಲ.

# ಅಧ್ಯಾಯ - III

# ನಗರ ಸ್ಥಳೀಯ ಸಂಸ್ಥೆಗಳ ಹೊಣೆಗಾರಿಕೆ ಚೌಕಟ್ಟು ಮತ್ತು ಹಣಕಾಸಿನ ವರದಿ

# ಅಧ್ಯಾಯ–III

# ನಗರಾಭಿವೃದ್ಧಿ ಇಲಾಖೆ

# ನಗರ ಸ್ಥಳೀಯ ಸಂಸ್ಥೆಗಳ ಹೊಣೆಗಾರಿಕೆ ಚೌಕಟ್ಟು ಮತ್ತು ಹಣಕಾಸಿನ ವರದಿ

## 3.1 ಪೀಠಿಕೆ

1992ರಲ್ಲಿ ಕಾಯಿದೆಯ ಮೂಲಕ ವಿಧಿಸಲಾದ ಸಂವಿಧಾನದ 74ನೆಯ ತಿದ್ದುಪಡಿಯು ನಗರ ಪ್ರದೇಶಗಳ ಜನತೆಗಾಗಿ ಸ್ಥಳೀಯ ಸ್ವಯಂ ಸರ್ಕಾರಗಳನ್ನು ರಚಿಸುವುದನ್ನು ಚಿಂತಿಸಿದ್ದಿತು. ತಿದ್ದುಪಡಿಯು, ಸಂವಿಧಾನದ XIIನೆಯ ಅನುಸೂಚಿಯಲ್ಲಿ ಪಟ್ಟಿ ಮಾಡಲಾಗಿರುವ 18 ವಿಷಯಗಳಿಗೆ ಸಂಬಂಧಿಸಿದಂತೆ ಆರ್ಥಿಕ ಅಭಿವೃದ್ಧಿ ಹಾಗೂ ಸಾಮಾಜಿಕ ನ್ಯಾಯಕ್ಕಾಗಿ ಸೇವೆಗಳನ್ನು ವಿತರಿಸುವುದಕ್ಕಾಗಿ ಸ್ವಾಯತ್ತ ಸಂಸ್ಥೆಗಳಾಗಿ ದಕ್ಷತೆಯಿಂದ ಹಾಗೂ ಪರಿಣಾಮಕಾರಿತ್ವದಿಂದ ಕಾರ್ಯನಿರ್ವಹಿಸುವುದಕ್ಕಾಗಿ ನಗರ ಸ್ಥಳೀಯ ಸಂಸ್ಥೆಗಳಿಗೆ ಅಧಿಕಾರವನ್ನು ನೀಡಿಲು ಪ್ರಯತ್ನಿಸಿತು. ರಾಜ್ಯದಲ್ಲಿರುವ ಪ್ರವರ್ಗವಾರು ನಗರ ಸ್ಥಳೀಯ ಸಂಸ್ಥೆಗಳನ್ನು **ಕೋಷ್ಟಕ 3.1**ರಲ್ಲಿ ತೋರಿಸಲಾಗಿದೆ:

**ಕೋಷ್ಟಕ 3.1: ಕರ್ನಾಟಕ ರಾಜ್ಯದಲ್ಲಿರುವ ಪ್ರವರ್ಗವಾರು ನಗರ ಸ್ಥಳೀಯ ಸಂಸ್ಥೆಗಳು**

| ನಗರ ಸ್ಥಳೀಯ ಸಂಸ್ಥೆಗಳು | ನಗರ ಸ್ಥಳೀಯ ಸಂಸ್ಥೆಗಳ ಸಂಖ್ಯೆ |
|---|---|
| ಮಹಾನಗರ ಪಾಲಿಕೆಗಳು | 11 |
| ನಗರಸಭೆಗಳು | 58 |
| ಪುರಸಭೆಗಳು | 116 |
| ಪಟ್ಟಣ ಪಂಚಾಯತಿಗಳು | 91 |
| ಅಧಿಸೂಚಿತ ಪ್ರದೇಶ ಸಮಿತಿಗಳು | 4 |

ಆಧಾರ: ನಗರಾಭಿವೃದ್ಧಿ ಇಲಾಖೆಯು ನೀಡಿದ ಮಾಹಿತಿ

ಮಹಾನಗರ ಪಾಲಿಕೆಗಳ ಆಡಳಿತವು ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ, 1976ರ ಅಡಿಯಲ್ಲಿ ಹಾಗೂ ಇತರೆ ನಗರ ಸ್ಥಳೀಯ ಸಂಸ್ಥೆಗಳ ಆಡಳಿತವು ಕರ್ನಾಟಕ ಪುರಸಭೆಗಳ ಅಧಿನಿಯಮ, 1964ರ ಅಡಿಯಲ್ಲಿ ನಿಯಂತ್ರಿಸಲ್ಪಡುತ್ತವೆ. ಪ್ರತಿಯೊಂದು ಮಹಾನಗರ ಪಾಲಿಕೆ/ಪುರಸಭಾ ಪ್ರದೇಶವನ್ನು ಅನೇಕ ಸಂಖ್ಯೆಯ ವಾರ್ಡುಗಳನ್ನಾಗಿ ವಿಭಜಿಸಲಾಗಿದೆ, ಅವುಗಳನ್ನು ಸಂಬಂಧಿತ ಪ್ರದೇಶದ ಜನಸಂಖ್ಯೆ, ಭೌಗೋಳಿಕ ಲಕ್ಷಣಗಳು, ಆರ್ಥಿಕ ಸ್ಥಿತಿಗತಿ, ಇತ್ಯಾದಿಗಳನ್ನು ಪರಿಗಣಿಸಿ ರಾಜ್ಯ ಸರ್ಕಾರವು ನಿರ್ಧಾರಣೆ ಮಾಡುತ್ತದೆ ಹಾಗೂ ಅಧಿಸೂಚನೆ ಹೊರಡಿಸುತ್ತದೆ.

## 3.2 ಸಾಂಸ್ಥಿಕ ರಚನೆ

ನಗರಾಭಿವೃದ್ಧಿ ಇಲಾಖೆಯು ಕರ್ನಾಟಕ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ನೇತೃತ್ವದಲ್ಲಿದೆ ಹಾಗೂ ಸಂಪರ್ಕಸೇತು ಇಲಾಖೆಯಾಗಿದೆ. ಡಿಸೆಂಬರ್ 1984ರಲ್ಲಿ ಸ್ಥಾಪಿಸಲಾದ ಪೌರಾಡಳಿತ ನಿರ್ದೇಶನಾಲಯವು, ನಗರಾಭಿವೃದ್ಧಿ ಇಲಾಖೆಯ ನೇರ ನಿಯಂತ್ರಣದಲ್ಲಿ ಕಾರ್ಯನಿರ್ವಹಿಸುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು ಹೊರತುಪಡಿಸಿದಂತೆ, ನಗರ ಸ್ಥಳೀಯ ಸಂಸ್ಥೆಗಳ ಆಡಳಿತಾತ್ಮಕ, ಅಭಿವೃದ್ಧಿ ಹಾಗೂ ಆರ್ಥಿಕ ಚಟುವಟಿಕೆಗಳನ್ನು ನಿಯಂತ್ರಿಸಲು ಹಾಗೂ ಮೇಲ್ವಿಚಾರಣೆ ಮಾಡಲು ಸಂಪರ್ಕಸೇತು ಸಂಸ್ಥೆಯಾಗಿದೆ.

ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳೂ ಅವುಗಳ ಆಡಳಿತ ವ್ಯಾಪ್ತಿಯಲ್ಲಿ ಬರುವ ಜನತೆಯಿಂದ ಚುನಾಯಿಸಲ್ಪಟ್ಟ ಆಡಳಿತ ಮಂಡಳಿಯ ಸದಸ್ಯರಿಂದ ಕೂಡಿದ ಒಂದು ಸಂಸ್ಥೆಯನ್ನು ಹೊಂದಿರುತ್ತವೆ. ಆಡಳಿತ ಮಂಡಳಿಯ ಸದಸ್ಯರಿಂದ ಚುನಾಯಿತರಾಗುವ ಮಹಾಪೌರರು/ಅಧ್ಯಕ್ಷರು ಸಭೆಯ ಅಧ್ಯಕ್ಷತೆಯನ್ನು ವಹಿಸುತ್ತಾರೆ ಹಾಗೂ ಸಂಸ್ಥೆಯ ಆಡಳಿತ ನಿರ್ವಹಣೆಗೆ ಜವಾಬ್ದಾರರಾಗಿರುತ್ತಾರೆ. ತಮ್ಮ ಸಂಬಂಧಿತ ಪ್ರಕಾರ್ಯಗಳನ್ನು ನಡೆಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು ಹೊರತುಪಡಿಸಿದಂತೆ ನಗರ ಸ್ಥಳೀಯ ಸಂಸ್ಥೆಗಳು ನಾಲ್ಕು ಸ್ಥಾಯಿ ಸಮಿತಿಗಳನ್ನು ಹೊಂದಿದ್ದರೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು 12 ಸ್ಥಾಯಿ ಸಮಿತಿಗಳನ್ನು ಹೊಂದಿರುತ್ತದೆ. ಆಯುಕ್ತರು/ಮುಖ್ಯ

ಅಧಿಕಾರಿಯವರು ನಗರ ಸ್ಥಳೀಯ ಸಂಸ್ಥೆಗಳ ಕಾರ್ಯನಿರ್ವಾಹಕ ಮುಖ್ಯಸ್ಥರಾಗಿರುತ್ತಾರೆ. ನಗರ ಸ್ಥಳೀಯ ಸಂಸ್ಥೆಗಳ ಕಾರ್ಯಚಟುವಟಿಕೆಗಳಿಗೆ ಸಂಬಂಧಿಸಿದ ಸಾಂಸ್ಥಿಕ ರಚನೆಯನ್ನು **ಅನುಬಂಧ 3.1**ರಲ್ಲಿ ನೀಡಲಾಗಿದೆ.

## 3.3 ಪ್ರಕಾರ್ಯಗಳು ಹಾಗೂ ಹಣಕಾಸಿನ ವಿಕೇಂದ್ರೀಕರಣ

ಸಂವಿಧಾನದ 74ನೆಯ ತಿದ್ದುಪಡಿಯು ಸಂವಿಧಾನದ XIIನೆಯ ಅನುಸೂಚಿಯಲ್ಲಿ ಪಟ್ಟಿ ಮಾಡಲಾಗಿರುವ 18 ಪ್ರಕಾರ್ಯಗಳನ್ನು ನಗರ ಸ್ಥಳೀಯ ಸಂಸ್ಥೆಗಳಿಗೆ ವಿಕೇಂದ್ರೀಕರಿಸುವುದನ್ನು ಚಿಂತಿಸಿದ್ದಿತು. ಪೌರಾಡಳಿತ ನಿರ್ದೇಶನಾಲಯವು ಮಾಹಿತಿ ಒದಗಿಸಿದಂತೆ (ನವೆಂಬರ್ 2017), ರಾಜ್ಯ ಸರ್ಕಾರವು 17 ಪ್ರಕಾರ್ಯಗಳನ್ನು ವರ್ಗಾಯಿಸಿದ್ದಿತು. ಅಗ್ನಿಶಾಮಕ ಸೇವೆಗಳನ್ನು ನಗರ ಸ್ಥಳೀಯ ಸಂಸ್ಥೆಗಳಿಗೆ ವರ್ಗಾಯಿಸಿರಲಿಲ್ಲ.

## 3.4 ಉತ್ತರದಾಯಿತ್ವದ ಚೌಕಟ್ಟು

### *3.4.1 ರಾಜ್ಯ ಸರ್ಕಾರದ ಅಧಿಕಾರಗಳು*

ನಗರ ಸ್ಥಳೀಯ ಸಂಸ್ಥೆಗಳನ್ನು ನಿಯಂತ್ರಿಸುವ ಅಧಿನಿಯಮಗಳ ಪ್ರಕಾರ, ನಗರ ಸ್ಥಳೀಯ ಸಂಸ್ಥೆಗಳು ಪ್ರಕಾರ್ಯಗಳನ್ನು ಸಮರ್ಪಕವಾಗಿ ನಡೆಸಿಕೊಂಡು ಹೋಗುವುದನ್ನು ಮೇಲ್ವಿಚಾರಣೆ ಮಾಡುವುದಕ್ಕಾಗಿ ರಾಜ್ಯ ಸರ್ಕಾರವು ಈ ಕೆಳಗಿನ ಅಧಿಕಾರಗಳನ್ನು ಹೊಂದಿದೆ:

- ಕರ್ನಾಟಕ ಮಹಾನಗರ ಪಾಲಿಕೆಗಳ ಹಾಗೂ ಕರ್ನಾಟಕ ಪುರಸಭಾ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸಿಕೊಂಡು ಹೋಗುವುದಕ್ಕಾಗಿ ನಿಯಮಗಳನ್ನು ರೂಪಿಸುವುದು;
- ನಗರ ಸ್ಥಳೀಯ ಸಂಸ್ಥೆಗಳು ಕಾರ್ಯ ನಿರ್ವಹಿಸುವಲ್ಲಿ ವಿಫಲವಾದರೆ ಅಥವಾ ಅವುಗಳಿಗೆ ವಿಧಿಸಿರುವ ಕರ್ತವ್ಯ ನಿರ್ವಹಣೆಯಲ್ಲಿ ತಪ್ಪಿದಲ್ಲಿ ಅಂತಹ ನಗರ ಸ್ಥಳೀಯ ಸಂಸ್ಥೆಗಳನ್ನು ವಿಸರ್ಜಿಸುವುದು;
- ನಗರ ಸ್ಥಳೀಯ ಸಂಸ್ಥೆಗಳು ತೆಗೆದುಕೊಂಡಿರುವ ನಿರ್ಧಾರ ಕಾನೂನಾತ್ಮಕವಲ್ಲ ಅಥವಾ ಅದು ಅಧಿನಿಯಮಗಳ ಅನುವುಗಳಲ್ಲಿ ದತ್ತವಾಗಿರುವ ಅಧಿಕಾರವನ್ನು ಮೀರಿದೆ ಎಂಬ ಅಭಿಪ್ರಾಯಕ್ಕೆ ರಾಜ್ಯ ಸರ್ಕಾರವು ಬಂದಲ್ಲಿ ಅಂತಹ ನಿರ್ಣಯವನ್ನು ರದ್ದು ಪಡಿಸುವುದು;
- ನಗರ ಸ್ಥಳೀಯ ಸಂಸ್ಥೆಗಳ ಸಿಬ್ಬಂದಿ ಮತ್ತು ಅಧಿಕಾರಿಗಳ ಸೇವೆಗಳ ವರ್ಗೀಕರಣ, ನೇಮಕಾತಿಯ ವಿಧಾನ, ಸೇವಾ ಷರತ್ತುಗಳು, ವೇತನ ಮತ್ತು ಭತ್ಯೆಗಳು, ಶಿಸ್ತು ಮತ್ತು ನಡತೆಗಳನ್ನು ನಿಯಂತ್ರಿಸುವುದು.

### *3.4.2 ನಿಗಾ ವ್ಯವಸ್ಥೆ*

ನಗರ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳು ಮತ್ತು ಉದ್ಯೋಗಿಗಳ ನಡತೆಯ ಬಗ್ಗೆ ಬರಬಹುದಾದ ಆಪಾದನೆಗಳು ಅಥವಾ ಕುಂದುಕೊರತೆಗಳ ಬಗ್ಗೆ ತನಿಖೆಯನ್ನು ನಡೆಸುವ ಹಾಗೂ ವರದಿಯನ್ನು ನೀಡುವ ಅಧಿಕಾರವನ್ನು ರಾಜ್ಯ ಸರ್ಕಾರದಿಂದ ನೇಮಕಗೊಂಡಿರುವ ಲೋಕಾಯುಕ್ತವು ಹೊಂದಿದೆ.

### *3.4.3 ಲೆಕ್ಕಪರಿಶೋಧನಾ ಅಧ್ಯಾದೇಶ*

**3.4.3.1** ಕರ್ನಾಟಕ ಮಹಾನಗರ ಪಾಲಿಕೆಗಳ ಹಾಗೂ ಕರ್ನಾಟಕ ಪುರಸಭಾ ಅಧಿನಿಯಮದ ಪ್ರಕಾರ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯ ಪ್ರಧಾನ ನಿರ್ದೇಶಕರು ನಗರ ಸ್ಥಳೀಯ ಸಂಸ್ಥೆಗಳ ಪ್ರಾಥಮಿಕ ಲೆಕ್ಕಪರಿಶೋಧಕರಾಗಿರುತ್ತಾರೆ. ನಗರ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಿಸಿದಂತೆ 2013–14 ರಿಂದ 2017–18ರ ಅವಧಿಯಲ್ಲಿ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯ ಲೆಕ್ಕಪರಿಶೋಧನೆಯ ಸ್ಥಿತಿಯನ್ನು **ಕೋಷ್ಟಕ 3.2**ರಲ್ಲಿ ತೋರಿಸಲಾಗಿದೆ.

**ಕೋಷ್ಟಕ 3.2: ಡಿಸೆಂಬರ್ 2018ರಂತೆ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯಿಂದ ನಗರ ಸ್ಥಳೀಯ ಸಂಸ್ಥೆಗಳ ಲೆಕ್ಕಪರಿಶೋಧನೆಯ ವಿವರಗಳ ತಃಖ್ತೆ**

| ವರ್ಷ | ಮಹಾನಗರ ಪಾಲಿಕೆಗಳು | | ನಗರಸಭೆಗಳು | | ಪುರಸಭೆಗಳು/ಪಟ್ಟಣ ಪಂಚಾಯತಿಗಳು/ಅಧಿಸೂಚಿತ ಪ್ರದೇಶ ಸಮಿತಿಗಳು | |
|---|---|---|---|---|---|---|
| | ಒಟ್ಟು | ಲೆಕ್ಕಪರಿಶೋಧಿಸಿದ | ಒಟ್ಟು | ಲೆಕ್ಕಪರಿಶೋಧಿಸಿದ | ಒಟ್ಟು | ಲೆಕ್ಕಪರಿಶೋಧಿಸಿದ |
| 2013–14 | 7 | 7 | 44 | 43 | 168 | 167 |
| 2014–15 | 7 | 4 | 44 | 39 | 168 | 166 |
| 2015–16 | 10 | 6 | 56 | 48 | 208 | 189 |
| 2016–17 | 11 | 1 | 56 | 37 | 208 | 163 |
| 2017–18 | 11 | 1 | 56 | 17 | 210 | 78 |

ಆಧಾರ: ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯು ಒದಗಿಸಿದ ಮಾಹಿತಿ

**3.4.3.2** ರಾಜ್ಯ ಸರ್ಕಾರವು, (ಮೇ 2010) ಅಧಿಸೂಚಿತ ಪ್ರದೇಶಗಳ ಸಮಿತಿಗಳನ್ನು ಹೊರತುಪಡಿಸಿದಂತೆ ಎಲ್ಲ ನಗರ ಸ್ಥಳೀಯ ಸಂಸ್ಥೆಗಳ ಲೆಕ್ಕಪತ್ರಗಳ ಲೆಕ್ಕಪರಿಶೋಧನೆಯನ್ನು 2008–09ರಿಂದ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಕರ್ತವ್ಯಗಳು, ಅಧಿಕಾರಗಳು ಮತ್ತು ಸೇವಾ ಷರತ್ತುಗಳ ನಿಯಮ, 1971 ಪರಿಚ್ಛೇದ 14(2)ರ ಅಡಿಯಲ್ಲಿ ಕಾಯಿದೆಗಳನ್ನು ತಿದ್ದುಪಡಿ ಮಾಡುವ (ಅಕ್ಟೋಬರ್ 2011) ಮೂಲಕ 2011–12ರಿಂದ ತಾಂತ್ರಿಕ ಮಾರ್ಗಸೂಚಿ ಮತ್ತು ಮೇಲ್ವಿಚಾರಣೆ ಅಡಿಯಲ್ಲಿ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರಿಗೆ ವಹಿಸಿತು. ಮಾರ್ಚ್ 2018ರ ಅಂತ್ಯಕ್ಕೆ, 135 ನಗರ ಸ್ಥಳೀಯ ಸಂಸ್ಥೆಗಳ ಲೆಕ್ಕಪತ್ರಗಳ ಲೆಕ್ಕಪರಿಶೋಧನೆಯನ್ನು ತಾಂತ್ರಿಕ ಮಾರ್ಗಸೂಚಿ ಮತ್ತು ಮೇಲ್ವಿಚಾರಣೆ ಅಡಿಯಲ್ಲಿ ನೆಡೆಸಲಾಗಿತ್ತು.

### *3.4.4 ತಪಾಸಣಾ ವರದಿಗಳ ಪ್ರತಿಕ್ರಿಯೆ*

ಮಾರ್ಚ್ 2018ರ ವೇಳೆಗೆ, **ಕೋಷ್ಟಕ 3.3**ರಲ್ಲಿ ತಿಳಿಸಿರುವಂತೆ 8,261 ಕಂಡಿಕೆಗಳನ್ನು ಒಳಗೊಂಡಿರುವ 445 ತಪಾಸಣಾ ವರದಿಗಳು ವಿವಿಧ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಬಾಕಿ ಉಳಿದಿದ್ದವು.

**ಕೋಷ್ಟಕ 3.3: 2016–17ರ ಲೆಕ್ಕಪರಿಶೋಧನೆಯ ಅವಧಿಯ ಬಾಕಿ ಉಳಿದಿರುವ ತಪಾಸಣಾ ವರದಿಗಳು ಮತ್ತು ಕಂಡಿಕೆಗಳ ವಿವರಗಳು**

| ಘಟಕ | 5 ರಿಂದ 10 ವರ್ಷ (2008–09 ರಿಂದ 2012–13) | | 3 ರಿಂದ 5 ವರ್ಷ (2013–14 ರಿಂದ 2014–15) | | 2015–16 | | 2016–17 | | ಒಟ್ಟು | |
|---|---|---|---|---|---|---|---|---|---|---|
| | ತಪಾಸಣಾ ವರದಿ | ಕಂಡಿಕೆ | ತಪಾಸಣಾ ವರದಿ | ಕಂಡಿಕೆ | ತಪಾಸಣಾ ವರದಿ | ಕಂಡಿಕೆ | ತಪಾಸಣಾ ವರದಿ | ಕಂಡಿಕೆ | ತಪಾಸಣಾ ವರದಿ | ಕಂಡಿಕೆ |
| ನಗರ ಸ್ಥಳೀಯ ಸಂಸ್ಥೆಗಳಲ್ಲಿ (ಬಿಬಿಎಮ್‌ಪಿ ಹೊರತುಪಡಿಸಿ) | 110 | 1,321 | 77 | 1,773 | 53 | 1,502 | 56 | 1,720 | 296 | 6,316 |
| ಬಿಬಿಎಮ್‌ಪಿ | 19 | 341 | 59 | 674 | 45 | 645 | 26 | 285 | 149 | 1,945 |
| **ಒಟ್ಟು** | **129** | **1,662** | **136** | **2,447** | **98** | **2,147** | **82** | **2,005** | **445** | **8,261** |

ಆಧಾರ: ತಪಾಸಣಾ ವರದಿಗಳು

ಬಾಕಿಯಿದ್ದ 445 ತಪಾಸಣಾ ವರದಿಗಳ ಪೈಕಿ, 4,109 ಕಂಡಿಕೆಗಳನ್ನು (ಶೇಕಡಾ 50) ಒಳಗೊಂಡ 265 ತಪಾಸಣಾ ವರದಿಗಳು (ಶೇಕಡಾ 60) ಮೂರು ವರ್ಷಗಳಿಗೂ ಮೇಲ್ಪಟ್ಟು ಬಾಕಿ ಉಳಿದಿವೆ. ಇದು ನಗರ ಸ್ಥಳೀಯ ಸಂಸ್ಥೆಗಳ ಅಸಮರ್ಪಕ ಕ್ರಮವನ್ನು ಸೂಚಿಸುತ್ತದೆ. ಬಾಕಿ ಉಳಿದಿರುವ ತಪಾಸಣಾ ವರದಿಗಳು ಮತ್ತು ಕಂಡಿಕೆಗಳನ್ನು **ಅನುಬಂಧ 3.2**ರಲ್ಲಿ ನೀಡಲಾಗಿದೆ.

### *3.4.5 ಆಂತರಿಕ ಲೆಕ್ಕಪರಿಶೋಧನೆ*

ನಗರ ಸ್ಥಳೀಯ ಸಂಸ್ಥೆಗಳ ಕಾರ್ಯಚಟುವಟಿಕೆಗಳನ್ನು ಮೇಲ್ವಿಚಾರಣೆ ಮಾಡುವ ಸಲುವಾಗಿ ರಾಜ್ಯ ಸರ್ಕಾರವು ಆಂತರಿಕ ಲೆಕ್ಕಪರಿಶೋಧನೆ ವಿಭಾಗವನ್ನು ಹೊಂದಿರಲಿಲ್ಲ. ರಾಜ್ಯ ಸರ್ಕಾರವು ಪೌರಾಡಳಿತ ನಿರ್ದೇಶನಾಲಯದ ಉನ್ನತೀಕರಣವನ್ನು ಅನುಮೋದಿಸಿತು (ಆಗಸ್ಟ್ 2018) ಮತ್ತು ಹೆಚ್ಚುವರಿ ಹುದ್ದೆಗಳನ್ನು ಮಂಜೂರು ಮಾಡಿದ್ದು, ಇವುಗಳನ್ನು ಆಂತರಿಕ ಲೆಕ್ಕಪರಿಶೋಧನೆ ವಿಭಾಗವನ್ನು ಸೃಜಿಸಲು ಉಪಯೋಗಿಸಲಾಗುವುದು ಎಂದು ಪೌರಾಡಳಿತ ನಿರ್ದೇಶನಾಲಯವು ತಿಳಿಸಿತು.

#### *3.4.6 ಆಸ್ತಿ ತೆರಿಗೆ ಮಂಡಳಿ*

ರಾಜ್ಯದ ಎಲ್ಲ ಪುರಸಭೆಗಳಲ್ಲಿ ಮತ್ತು ನಗರ ಪಾಲಿಕೆಗಳಲ್ಲಿ ಆಸ್ತಿ ತೆರಿಗೆ ಮೌಲ್ಯಮಾಪನ ಮಾಡಲು ಸ್ವತಂತ್ರ ಮತ್ತು ಪಾರದರ್ಶಕ ಕಾರ್ಯವಿದಾನವನ್ನು ಜಾರಿಗೆ ತರಲು ಸಹಾಯವಾಗುವ ರಾಜ್ಯ ಮಟ್ಟದ ಆಸ್ತಿ ತೆರಿಗೆ ಮಂಡಳಿಯನ್ನು ಸ್ಥಾಪಿಸಲು ಹದಿಮೂರನೇ ಹಣಕಾಸು ಆಯೋಗವು ಶಿಫಾರಸಿತು. ಮುಂದುವರೆದು, ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮದ ಅಧ್ಯಾಯ IX–ಎ ಅಡಿಯಲ್ಲಿನ 102ಎ ಯಿಂದ 102ವೈ ಪರಿಚ್ಛೇದಗಳು ರಾಜ್ಯ ಸರ್ಕಾರವು ಕರ್ನಾಟಕ ಆಸ್ತಿ ತೆರಿಗೆ ಮಂಡಳಿಯನ್ನು ಸ್ಥಾಪಿಸುವ ಸಲುವಾಗಿ ಅನುವು ಮಾಡಿವೆ.

ರಾಜ್ಯದಲ್ಲಿ ಆಸ್ತಿ ತೆರಿಗೆ ಮಂಡಳಿಯನ್ನು ಸ್ಥಾಪಿಸಿರಲಿಲ್ಲ (ನವೆಂಬರ್ 2018).

## 3.5 ಹಣಕಾಸಿನ ಚಿತ್ರಣ ಮತ್ತು ವರದಿಯ ಚೌಕಟ್ಟು

### *3.5.1 ಹಣಕಾಸಿನ ಚಿತ್ರಣ*

#### 3.5.1.1 ನಗರ ಸ್ಥಳೀಯ ಸಂಸ್ಥೆಗಳ ಸಂಪನ್ಮೂಲಗಳು

ನಗರ ಸ್ಥಳೀಯ ಸಂಸ್ಥೆಗಳ ಹಣಕಾಸಿನ ಮೂಲಗಳು ಸ್ವಂತ ಸಂಪನ್ಮೂಲಗಳು, ಅನುದಾನಗಳು ಹಾಗೂ ಕೇಂದ್ರ ಸರ್ಕಾರ (ಭಾರತ ಸರ್ಕಾರ)/ರಾಜ್ಯ ಸರ್ಕಾರದಿಂದ ಸಹಾಯಾನುದಾನಗಳು ಹಾಗೂ ರಾಜ್ಯ ಸರ್ಕಾರವು ಅನುಮೋದನೆ ನೀಡುವ ಮೇರೆಗೆ ಹಣಕಾಸು ಸಂಸ್ಥೆಗಳು ಅಥವಾ ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಪಡೆಯಲಾಗುವ ಸಾಲಗಳನ್ನು ಒಳಗೊಂಡಿರುತ್ತದೆ. ನಗರ ಸ್ಥಳೀಯ ಸಂಸ್ಥೆಗಳು ಒಂದು ವಿಸ್ತೃತ ಸ್ವತಂತ್ರ ತೆರಿಗೆ ವ್ಯಾಪ್ತಿಯನ್ನು ಹೊಂದಿರುವುದಿಲ್ಲ. ಭೂಮಿ/ನಿವೇಶನ ಹಾಗೂ ಕಟ್ಟಡಗಳ ಮೇಲಿನ ಆಸ್ತಿ ತೆರಿಗೆಯು ನಗರ ಸ್ಥಳೀಯ ಸಂಸ್ಥೆಗಳ ಸ್ವಂತ ವರಮಾನದ ಮೂಲಾಧಾರವಾಗಿದೆ. ಕೆಲವು ತೆರಿಗೆಗಳನ್ನು ಸಂಗ್ರಹಿಸುವ ಸಲುವಾಗಿ ಅಧಿಕಾರವನ್ನು ನಗರ ಸ್ಥಳೀಯ ಸಂಸ್ಥೆಗಳಿಗೆ ನೀಡಲಾಗಿದೆಯಾದರೂ ಅವುಗಳ ದರಗಳು ಹಾಗೂ ಪರಿಷ್ಕರಣೆ, ವಸೂಲಾತಿಯ ವಿಧಾನ, ನಿರ್ಧಾರಣೆಯ ವಿಧಾನ, ವಿನಾಯಿತಿಗಳು, ರಿಯಾಯಿತಿಗಳು, ಇತ್ಯಾದಿಗಳು ರಾಜ್ಯ ಸರ್ಕಾರದ ಅಧಿಕಾರದ ವ್ಯಾಪ್ತಿಯಲ್ಲಿವೆ. ನಗರ ಸ್ಥಳೀಯ ಸಂಸ್ಥೆಗಳ ಸ್ವಂತ ತೆರಿಗೆಯೇತರ ವರಮಾನವು ನಕಾಶೆಗಳು, ಮ್ಯುಟೇಷನ್‌ಗಳ ಮಂಜೂರಾತಿಗಾಗಿ ನೀಡಲಾಗುವ ಶುಲ್ಕ, ನೀರಿನ ಕರಗಳು, ಇತ್ಯಾದಿಗಳನ್ನು ಒಳಗೊಂಡಿರುತ್ತದೆ.

#### 3.5.1.2 ನಗರ ಸ್ಥಳೀಯ ಸಂಸ್ಥೆಗಳಿಗೆ ಅನುದಾನಗಳ ಬಿಡುಗಡೆ

ರಾಜ್ಯ ಸರ್ಕಾರವು ನಗರ ಸ್ಥಳೀಯ ಸಂಸ್ಥೆಗಳಿಗೆ 2013–14 ರಿಂದ 2017–18ರ ಅವಧಿಯಲ್ಲಿ ಬಿಡುಗಡೆಗೊಳಿಸಿದ್ದ ಅನುದಾನಗಳ[7] ವಿವರಗಳನ್ನು **ಕೋಷ್ಟಕ 3.4**ರಲ್ಲಿ ತೋರಿಸಲಾಗಿದೆ:

**ಕೋಷ್ಟಕ 3.4: ಅನುದಾನಗಳ ಬಿಡುಗಡೆಯನ್ನು ತೋರಿಸುವ ತಃಖ್ತೆ**

(₹ ಕೋಟಿಗಳಲ್ಲಿ)

| ನಗರ ಸ್ಥಳೀಯ ಸಂಸ್ಥೆಗಳು | 2013–14 | | 2014–15 | | 2015–16 | | 2016–17 | | 2017–18 | |
|---|---|---|---|---|---|---|---|---|---|---|
| | ಆಯ ವ್ಯಯ | ಬಿಡುಗಡೆಯಾದ ಅನುದಾನ | ಆಯ ವ್ಯಯ | ಬಿಡುಗಡೆಯಾದ ಅನುದಾನ | ಆಯ ವ್ಯಯ | ಬಿಡುಗಡೆಯಾದ ಅನುದಾನ | ಆಯ ವ್ಯಯ | ಬಿಡುಗಡೆಯಾದ ಅನುದಾನ | ಆಯ ವ್ಯಯ | ಬಿಡುಗಡೆಯಾದ ಅನುದಾನ |
| ಮಹಾನಗರ ಪಾಲಿಕೆಗಳು | 4,348 | 3,632 | 4,956 | 4,372 | 4,435 | 4,307 | 4,233 | 4,099 | 5,000 | 4,457 |
| ನಗರಸಭೆಗಳು/ ಪುರಸಭೆಗಳು | 1,629 | 1,139 | 1,589 | 1,365 | 1,644 | 1,555 | 1,488 | 1,368 | 1,754 | 1,660 |
| ಪಟ್ಟಣ ಪಂಚಾಯತಿಗಳು/ ಅಧಿಸೂಚಿತ ಪ್ರದೇಶ ಸಮಿತಿಗಳು | 344 | 248 | 312 | 273 | 233 | 214 | 259 | 219 | 383 | 373 |
| **ಒಟ್ಟು** | **6,321** | **5,019** | **6,857** | **6,010** | **6,312** | **6,076** | **5,980** | **5,686** | **7,137** | **6,490** |

ಆಧಾರ: ರಾಜ್ಯ ಆಯವ್ಯಯ ಅಂದಾಜುಗಳು ಹಾಗೂ ಹಣಕಾಸು ಲೆಕ್ಕಪತ್ರಗಳು

[7] ಅನುದಾನವು ರಾಜ್ಯ ಹಣಕಾಸು ಆಯೋಗದ ಅನುದಾನಗಳು, ಹದಿನಾಲ್ಕನೇ ಹಣಕಾಸು ಆಯೋಗದ ಅನುದಾನಗಳು, ಕೇಂದ್ರ ನಿಯೋಜಿತ ಯೋಜನೆ ಮತ್ತು ರಾಜ್ಯ ಯೋಜನೆಗಳಿಗೆ ಬಿಡುಗಡೆಯಾದ ಅನುದಾನಗಳನ್ನು ಹೊಂದಿರುತ್ತದೆ.

2013–14 ರಿಂದ 2017–18ರವರೆಗೆ ಯಾವುದೇ ವರ್ಷದಲ್ಲಿ ನಗರ ಸ್ಥಳೀಯ ಸಂಸ್ಥೆಗಳಿಗೆ ನಿಗದಿಪಡಿಸಿದ ನಿಧಿಯು ಸರಿಯಾಗಿ ಬಿಡುಗಡೆಯಾಗಿಲ್ಲ ಎಂಬುದು ಮೇಲಿನ ಕೋಷ್ಟಕದಿಂದ ಕಾಣಬಹುದಾಗಿದೆ. ನಗರ ಸ್ಥಳೀಯ ಸಂಸ್ಥೆಗಳಿಗೆ ಅನುದಾನದ ವಾಸ್ತವಿಕ ಬಿಡುಗಡೆಗಳು 2013–14 ರಿಂದ 2017–18ರ ವರೆಗಿನ ಅವಧಿಯಲ್ಲಿ ಹೆಚ್ಚುತ್ತಿರುವ ಪ್ರವೃತ್ತಿ ಕಂಡುಬಂದರೂ, 2016–17ರ ಅವಧಿಯಲ್ಲಿನ ಅನುದಾನದ ಬಿಡುಗಡೆ 2015–16ಕ್ಕೆ ಹೋಲಿಸಿದರೆ ಶೇಕಡಾ 6ರಷ್ಟು ಕಡಿಮೆಯಾಗಿತ್ತು.

### 3.5.1.3 ಹಣಕಾಸನ್ನು ಕಡಿಮೆ ಪ್ರಮಾಣದಲ್ಲಿ ಬಿಡುಗಡೆಗೊಳಿಸಿದ್ದುದು

ರಾಜ್ಯದ ಮೂರನೇ ಹಣಕಾಸು ಆಯೋಗದ ಶಿಫಾರಸುಗಳು (ಡಿಸೆಂಬರ್ 2008) ಮತ್ತು ರಾಜ್ಯ ಸರ್ಕಾರದ (ಅಕ್ಟೋಬರ್ 2011) ನಿರ್ಣಯದ ಪ್ರಕಾರ 2017–18ರಲ್ಲಿ ನಗರ ಸ್ಥಳೀಯ ಸಂಸ್ಥೆಗಳಿಗೆ ಸಾಲೇತರ ನಿವ್ವಳ ಸ್ವಂತ ರಾಜಸ್ವ ಸ್ವೀಕೃತಿಗಳ (₹93,606.91 ಕೋಟಿ) ಶೇಕಡಾ 10ರಷ್ಟನ್ನು (ಅಂದರೆ ₹9,360.69 ಕೋಟಿ) ಬಿಡುಗಡೆಗೊಳಿಸಬೇಕಿದ್ದಿತು. ಇದಕ್ಕೆ ಪ್ರತಿಯಾಗಿ, ರಾಜ್ಯ ಸರ್ಕಾರವು ಸಾಲೇತರ ನಿವ್ವಳ ಸ್ವಂತ ರಾಜಸ್ವ ಸ್ವೀಕೃತಿಗಳ ಶೇಕಡಾ 6.93ರಷ್ಟನ್ನು (₹6,489.76 ಕೋಟಿ) ಮಾತ್ರ ಬಿಡುಗಡೆಗೊಳಿಸಿದ್ದು, 2017–18ರಲ್ಲಿ ₹2,870.93 ಕೋಟಿ ಮೊತ್ತದಷ್ಟು ಹಣಕಾಸನ್ನು ಕಡಿಮೆ ಪ್ರಮಾಣದಲ್ಲಿ ಬಿಡುಗಡೆಗೊಳಿಸುವಲ್ಲಿ ಪರಿಣಮಿಸಿತು.

### 3.5.1.4 ಹದಿನಾಲ್ಕನೇ ಹಣಕಾಸು ಆಯೋಗದ ಅನುದಾನ ಬಿಡುಗಡೆ

2017–18ನೇ ವರ್ಷದಲ್ಲಿ ಕೇಂದ್ರ ಸರ್ಕಾರವು ₹899.25 ಕೋಟಿ ಒಟ್ಟು ಮೂಲ ಅನುದಾನವನ್ನು ಎರಡು ಸಮನಾದ ಕಂತುಗಳಲ್ಲಿ ನಗರ ಸ್ಥಳೀಯ ಸಂಸ್ಥೆಗಳಿಗೆ ಬಿಡುಗಡೆ ಮಾಡಿತ್ತು. ಆದಾಗ್ಯೂ, ಮಾರ್ಚ್ 2018ರ ವೇಳೆಗೆ, 2017–18ನೇ ವರ್ಷದ ಕಾರ್ಯಕ್ಷಮತೆ ಅನುದಾನವನ್ನು ಬಿಡುಗಡೆಗೊಳಿಸಿರಲಿಲ್ಲ.

### 3.5.1.5 ಆಸ್ತಿ ತೆರಿಗೆ ಸಂಗ್ರಹಣೆಯ ಸ್ಥಿತಿಗತಿ

ರಾಜ್ಯ ಸರ್ಕಾರವು, 1 ಏಪ್ರಿಲ್ 2002ರಿಂದ ಜಾರಿಗೆ ಬರುವಂತೆ ರಾಜ್ಯದ ಎಲ್ಲಾ ಪುರಸಭೆಗಳಿಗೆ ಅನ್ವಯಗೊಳ್ಳುವ ರೀತಿಯಲ್ಲಿ ಆಸ್ತಿ ತೆರಿಗೆ ಪಾವತಿಗಾಗಿ ಸ್ವಯಂ ನಿರ್ಧಾರಣಾ ಯೋಜನೆಯನ್ನು ಪ್ರಾರಂಭಿಸಿತು. ನಗರ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಿಸಿದಂತೆ (ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು ಹೊರತುಪಡಿಸಿ) ಮಾರ್ಚ್ 2018ರ ಅಂತ್ಯದಲ್ಲಿದ್ದಂತೆ ವಸೂಲಾತಿಗಾಗಿ ಸೃಷ್ಟಿಸಲಾದ ಬೇಡಿಕೆ, ವಸೂಲಾತಿ ಹಾಗೂ ಬಾಕಿ ಇರುವ ಆಸ್ತಿ ತೆರಿಗೆಯ ಸ್ಥಿತಿಗತಿಯನ್ನು ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸಂಬಂಧಿಸಿದಂತೆ ನಿಗದಿಪಡಿಸಲಾಗಿದ್ದ ಗುರಿಗಳು ಹಾಗೂ ಗುರಿಗಳಿಗೆ ಪ್ರತಿಯಾಗಿ ಮಾಡಲಾಗಿದ್ದ ವಸೂಲಾತಿಯ ವಿವರಗಳನ್ನು **ಕೋಷ್ಟಕ 3.5** ಮತ್ತು **ಕೋಷ್ಟಕ 3.6**ರಲ್ಲಿ ತೋರಿಸಲಾಗಿದೆ:

**ಕೋಷ್ಟಕ 3.5: ನಗರ ಸ್ಥಳೀಯ ಸಂಸ್ಥೆಗಳ ಆಸ್ತಿ ತೆರಿಗೆಯ ಬೇಡಿಕೆ, ವಸೂಲಾತಿ ಹಾಗೂ ಬಾಕಿಗಳ ಸ್ಥಿತಿಗತಿ**

(₹ ಕೋಟಿಗಳಲ್ಲಿ)

| ವರ್ಷ | ಪ್ರಾರಂಭಿಕ ಶಿಲ್ಕು | ಚಾಲ್ತಿ ವರ್ಷದ ಬೇಡಿಕೆ | ಒಟ್ಟು ಬೇಡಿಕೆ | ವಸೂಲಾತಿ | ಬಾಕಿ ಶಿಲ್ಕು | ಒಟ್ಟಾರೆ ಬೇಡಿಕೆಗೆ ಹೋಲಿಸಿದರೆ ಶೇಕಡಾವಾರು ವಸೂಲಾತಿ |
|---|---|---|---|---|---|---|
| 2013–14 | 218.19 | 368.44 | 586.63 | 364.95 | 221.68 | 62 |
| 2014–15 | 221.68 | 458.01 | 679.69 | 423.44 | 256.25 | 62 |
| 2015–16 | 256.25 | 569.67 | 825.92 | 481.27 | 344.65 | 58 |
| 2016–17 | 344.65 | 679.46 | 1,024.11 | 553.56 | 470.55 | 54 |
| 2017–18 | 470.55 | 774.15 | 1,244.70 | 674.09 | 570.61 | 54 |

ಆಧಾರ: ಪೌರಾಡಳಿತ ನಿರ್ದೇಶನಾಲಯ ಒದಗಿಸಿದ ಮಾಹಿತಿ

2013–14ರಲ್ಲಿ ₹221.68 ಕೋಟಿ ಮೊತ್ತದಷ್ಟು ಬಾಕಿಗಳು 2017–18ರಲ್ಲಿ ₹570.61 ಕೋಟಿಗೆ ಹೆಚ್ಚಳಗೊಂಡಿದ್ದಿತು ಮತ್ತು 2013–14ರಲ್ಲಿ ವಸೂಲಾತಿಯು ಶೇಕಡಾ 62ರಿಂದ 2017–18ರಲ್ಲಿ ಶೇಕಡಾ 54ಕ್ಕೆ ಇಳಿಕೆಗೊಂಡಿದ್ದಿತು ಎಂಬುದನ್ನು ಮೇಲಿನ ಕೋಷ್ಟಕದಿಂದ ಕಾಣಬಹುದು.

**ಕೋಷ್ಟಕ 3.6: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಸ್ತಿ ತೆರಿಗೆಯ ಗುರಿ ಮತ್ತು ವಸೂಲಾತಿಯ ಸ್ಥಿತಿಗತಿ**

(₹ ಕೋಟಿಗಳಲ್ಲಿ)

| ವರ್ಷ | ಆಯವ್ಯಯದ ಅಂದಾಜು | ವಾಸ್ತವಿಕ ಸಂಗ್ರಹಣೆ | ಶೇಕಡಾವಾರು ಸಂಗ್ರಹಣೆ |
|---|---|---|---|
| 2013–14 | 3,200.00 | 908.06 | 28 |
| 2014–15 | 2,135.00 | 1,176.01 | 55 |
| 2015–16 | 1,900.00 | 1,244.98 | 66 |
| 2016–17 | 2,300.00 | 1,452.57 | 63 |
| 2017–18 | 2,600.00 | 1,551.90 | 60 |

ಆಧಾರ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಒದಗಿಸಿದ ಆಯವ್ಯಯ ಮತ್ತು ವಿವರಗಳು

2013–14 ರಿಂದ 2017–18ರ ಅವಧಿಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಆಸ್ತಿ ತೆರಿಗೆ ವಸೂಲಾತಿಯ ಗುರಿಯನ್ನು ಸಾಧಿಸಿರಲಿಲ್ಲ ಮತ್ತು 2015–16ರಲ್ಲಿ ಸಂಗ್ರಹಣೆಯು ಶೇಕಡಾ 66ರಿಂದ 2017–18ರಲ್ಲಿ ಶೇಕಡಾ 60ಕ್ಕೆ ಇಳಿಕೆಗೊಂಡಿದ್ದಿತು.

### 3.5.1.6 ಜಮೆಯಾಗದ/ಕಡಿಮೆ ಜಮೆಯಾದ ಉಪಕರ

ಕರ್ನಾಟಕ ನಗರಪಾಲಿಕೆಗಳ ಅಧಿನಿಯಮ, ವಿಭಾಗ 108(ಎ)ರ ಅನ್ವಯ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸೇರಿದಂತೆ ಮಹಾನಗರ ಪಾಲಿಕೆಗಳು ಆಸ್ತಿ ತೆರಿಗೆಯ ಜೊತೆಗೆ ಅನ್ವಯವಾಗುವ ಆರೋಗ್ಯ, ಗ್ರಂಥಾಲಯ ಮತ್ತು ಭಿಕ್ಷಾಟನೆ ಉಪಕರಗಳ ವಸೂಲಾತಿ ಮತ್ತು ಸಂಗ್ರಹಣೆ ಮಾಡಬೇಕಿದೆ. ಮುಂದುವರೆದು, ಆರೋಗ್ಯ ಉಪಕರ ಅಧಿನಿಯಮ, 1962ರ ವಿಭಾಗ 4ಎ, ಕರ್ನಾಟಕ ಸಾರ್ವಜನಿಕ ಗ್ರಂಥಾಲಯ ಅಧಿನಿಯಮ, 1965ರ ವಿಭಾಗ 30 (4) ಮತ್ತು ಕರ್ನಾಟಕ ಭಿಕ್ಷಾಟನೆ ನಿಷೇಧ ಅಧಿನಿಯಮ, 1975ರ ವಿಭಾಗ 31, ಆಯಾ ಉಪಕರದ ಕಾಯಿದೆಗಳ ಪ್ರಕಾರ ಸ್ಥಳೀಯ ಪ್ರಾಧಿಕಾರಿಗಳು ಸಂಗ್ರಹಿಸಿದ ಉಪಕರವನ್ನು[8] ಸಂಬಂಧಪಟ್ಟ ಇಲಾಖೆಗಳಿಗೆ ಜಮೆ ಮಾಡಬೇಕಿದ್ದಿತು ಮತ್ತು ಸ್ಥಳೀಯ ಸಂಸ್ಥೆಗಳು ಸಂಗ್ರಹಿಸಿದ ಉಪಕರಗಳ ಶೇಕಡಾ 10ರಷ್ಟನ್ನು ಸಂಗ್ರಹಣಾ ವೆಚ್ಚವನ್ನಾಗಿ ತಮ್ಮಲ್ಲೇ ಉಳಿಸಿಕೊಳ್ಳಲು ಅನುಮತಿಯಿದ್ದಿತು.

ಪೌರಾಡಳಿತ ನಿರ್ದೇಶನಾಲಯ ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಒದಗಿಸಿದ ಮಾಹಿತಿಯ ಪರಿಶೀಲನೆಯು **ಕೋಷ್ಟಕ 3.7** ಮತ್ತು **ಕೋಷ್ಟಕ 3.8** ರಲ್ಲಿ ತೋರಿಸಿದಂತೆ 2013–14 ರಿಂದ 2017–18ರ ಅವಧಿಯಲ್ಲಿ ಸಂಗ್ರಹಣೆ ಮಾಡಿರುವ ಉಪಕರದ ಬೃಹತ್ ಶಿಲ್ಕನ್ನು ಸಂಬಂಧಿಸಿದ ಇಲಾಖೆಗಳಿಗೆ ಜಮೆ ಮಾಡಿರಲಿಲ್ಲವೆಂದು ತೋರಿಸಿತು.

**ಕೋಷ್ಟಕ 3.7: ನಗರ ಸ್ಥಳೀಯ ಸಂಸ್ಥೆಗಳಲ್ಲಿನ ಉಪಕರದ ವಸೂಲಾತಿ, ಪಾವತಿ ಮತ್ತು ಬಾಕಿಯ ವಿವರಗಳು (ಬಿಬಿಎಮ್‌ಪಿ ಹೊರತುಪಡಿಸಿ)**

(₹ ಕೋಟಿಗಳಲ್ಲಿ)

| Year | ಆರೋಗ್ಯ ಉಪಕರ | | | | ಗ್ರಂಥಾಲಯ ಉಪಕರ | | | | ಭಿಕ್ಷಾಟನೆ ಉಪಕರ | | | |
|---|---|---|---|---|---|---|---|---|---|---|---|---|
| | ಪ್ರಾರಂಭಿಕ ಶಿಲ್ಕು | ಸಂಗ್ರಹಣೆ | ಪಾವತಿ | ಬಾಕಿ | ಪ್ರಾರಂಭಿಕ ಶಿಲ್ಕು | ಸಂಗ್ರಹಣೆ | ಪಾವತಿ | ಬಾಕಿ | ಪ್ರಾರಂಭಿಕ ಶಿಲ್ಕು | ಸಂಗ್ರಹಣೆ | ಪಾವತಿ | ಬಾಕಿ |
| 2013-14 | 152.94 | 39.79 | 16.69 | 176.04 | 28.87 | 16.08 | 14.27 | 30.68 | 30.76 | 8.03 | 8.07 | 30.72 |
| 2014-15 | 176.04 | 47.42 | 20.65 | 202.81 | 30.68 | 19.11 | 13.99 | 35.80 | 30.72 | 9.68 | 6.58 | 33.82 |
| 2015-16 | 202.81 | 52.07 | 15.56 | 239.32 | 35.80 | 21.45 | 16.63 | 40.62 | 33.82 | 10.49 | 7.15 | 37.16 |
| 2016-17 | 239.32 | 59.47 | 26.97 | 271.82 | 40.62 | 24.59 | 19.58 | 45.63 | 37.16 | 18.95 | 44.96 | 11.15 |
| 2017-18 | 271.82 | 67.06 | 24.91 | 313.97 | 45.63 | 26.84 | 18.77 | 53.70 | 11.15 | 16.77 | 8.72 | 19.20 |

ಆಧಾರ: ಪೌರಾಡಳಿತ ನಿರ್ದೇಶನಾಲಯ ಒದಗಿಸಿದ ಮಾಹಿತಿ

ಮೇಲಿನ ಕೋಷ್ಟಕದಲ್ಲಿ ತೋರಿಸಿದಂತೆ ರಾಜ್ಯದಲ್ಲಿನ ನಗರ ಸ್ಥಳೀಯ ಸಂಸ್ಥೆಗಳು, ₹313.97 ಕೋಟಿಗಳಷ್ಟು ಆರೋಗ್ಯ ಉಪಕರವನ್ನು ₹53.70 ಕೋಟಿಗಳಷ್ಟು ಗ್ರಂಥಾಲಯ ಉಪಕರವನ್ನು ಮತ್ತು ₹19.20 ಕೋಟಿಗಳಷ್ಟು ಭಿಕ್ಷಾಟನೆ ಉಪಕರವನ್ನು ಸಂಬಂಧಿಸಿದ ಇಲಾಖೆಗಳಿಗೆ ಜಮೆ ಮಾಡಿರಲಿಲ್ಲ.

[8] ಆಸ್ತಿ ತೆರಿಗೆಯ ಮೇಲೆ ಶೇಕಡಾ 15ರ ದರದಲ್ಲಿ ಆರೋಗ್ಯ ಉಪಕರ; ಶೇಕಡಾ 6ರ ದರದಲ್ಲಿ ಗ್ರಂಥಾಲಯ ಉಪಕರ ಮತ್ತು ಶೇಕಡಾ 3ರ ದರದಲ್ಲಿ ಭಿಕ್ಷಾಟನೆ ಉಪಕರಗಳನ್ನು ವಿಧಿಸಲಾಗುವುದು.

**ಕೋಷ್ಟಕ 3.8: ಬಿಬಿಎಮ್‌ಪಿಯಲ್ಲಿನ ಉಪಕರದ ವಸೂಲಾತಿ, ಪಾವತಿ ಮತ್ತು ಬಾಕಿಯ ವಿವರಗಳು**

(₹ ಕೋಟಿಗಳಲ್ಲಿ)

| ವರ್ಷ | ಆರೋಗ್ಯ ಉಪಕರ | | | ಗ್ರಂಥಾಲಯ ಉಪಕರ | | | ಭಿಕ್ಷಾಟನೆ ಉಪಕರ | | |
|---|---|---|---|---|---|---|---|---|---|
| | ಸಂಗ್ರಹಣೆ | ಪಾವತಿ | ಬಾಕಿ | ಸಂಗ್ರಹಣೆ | ಪಾವತಿ | ಬಾಕಿ | ಸಂಗ್ರಹಣೆ | ಪಾವತಿ | ಬಾಕಿ |
| 2013–14 | 136.20 | 0 | 136.20 | 54.48 | 18.50 | 35.98 | 27.24 | 15.00 | 12.24 |
| 2014–15 | 176.40 | 0 | 176.40 | 70.56 | 8.00 | 62.56 | 35.28 | 5.00 | 30.28 |
| 2015–16 | 186.74 | 0 | 186.74 | 74.69 | 58.08 | 16.61 | 37.34 | 12.67 | 24.67 |
| 2016–17 | 217.88 | 0 | 217.88 | 87.15 | 50.00 | 37.15 | 43.57 | 20.00 | 23.57 |
| 2017–18 | 232.78 | 0 | 232.78 | 93.11 | 14.00 | 79.11 | 46.56 | 19.22 | 27.34 |
| | **950.00** | **0** | **950.00** | **379.99** | **148.58** | **231.41** | **189.99** | **71.89** | **118.10** |

ಆಧಾರ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಒದಗಿಸಿದ ಮಾಹಿತಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಸಂಗ್ರಹಣೆ ಮಾಡಿದ ₹950 ಕೋಟಿ ಸಂಪೂರ್ಣ ಆರೋಗ್ಯ ಉಪಕರವನ್ನು ರಾಜ್ಯ ಸರ್ಕಾರಕ್ಕೆ ಹಾಗೂ ಬಾಕಿ ಉಳಿದ ಗ್ರಂಥಾಲಯ ಉಪಕರ (₹231.41 ಕೋಟಿ) ಮತ್ತು ಭಿಕ್ಷಾಟನೆ ಉಪಕರವನ್ನು (₹118.10 ಕೋಟಿ) ಸಂಬಂಧಪಟ್ಟ ಇಲಾಖೆಗಳಿಗೆ ಜಮೆ ಮಾಡಿರಲಿಲ್ಲ.

### 3.5.1.7 ಜಮೆ ಮಾಡದ ಶಿಕ್ಷಣ ಉಪಕರ

ಕರ್ನಾಟಕ (ಕೆಲವು ಉಪಕರಗಳ ವರ್ಧನೆ) ಅಧಿನಿಯಮ, 1976ರ ಪರಿಚ್ಛೇದ 2, ಕರ್ನಾಟಕ ಕಡ್ಡಾಯ ಪ್ರಾಥಮಿಕ ಶಿಕ್ಷಣ ಅಧಿನಿಯಮ, 1961ರ ಅಧ್ಯಾಯ–3ರ ತಿದ್ದುಪಡಿ ಮೂಲಕ ರಾಜ್ಯದಲ್ಲಿ ಪ್ರಾಥಮಿಕ ಶಿಕ್ಷಣಕ್ಕೆ ಪ್ರೋತ್ಸಾಹ ನೀಡುವ ವೆಚ್ಚವನ್ನು ಒದಗಿಸುವ ಉದ್ದೇಶಕ್ಕಾಗಿ ಈ ಕೆಳಗಿನವುಗಳ ಮೇಲೆ ಒಂದು ರೂಪಾಯಿಯ ಮೇಲೆ 10 ಪೈಸೆಯಂತೆ ಶಿಕ್ಷಣ ಉಪಕರವನ್ನು ವಿಧಿಸುವುದನ್ನು ನಿಗದಿಪಡಿಸಿತು: (i) ಭೂಕಂದಾಯ (ii) ಅನುಸೂಚಿ ಎ ಯಲ್ಲಿ ತಿಳಿಸಿರುವ ರಾಜ್ಯದ ಆದಾಯ (iii) ಅನುಸೂಚಿ ಬಿ ಯಲ್ಲಿ[9] ತಿಳಿಸಿರುವ ತೆರಿಗೆ ವಸ್ತುಗಳು. ವಸೂಲು ಮಾಡಿದ ಮೊತ್ತದಲ್ಲಿ ಶೇಕಡಾ 10ರಷ್ಟನ್ನು ಸಂಗ್ರಹಣಾ ವೆಚ್ಚವನ್ನಾಗಿ ಕಳೆಯಲು ಸ್ಥಳೀಯ ಪ್ರಾಧಿಕಾರವು ಅರ್ಹವಾಗಿರುತ್ತದೆ ಮತ್ತು ಉಳಿದ ಮೊತ್ತವನ್ನು ರಾಜ್ಯ ಸರ್ಕಾರಕ್ಕೆ ಪಾವತಿಸಬೇಕು ಎಂದು ಪರಿಚ್ಛೇದ 17ಎ ತಿಳಿಸುತ್ತದೆ. ಮುಂದುವರೆದು, ಕರ್ನಾಟಕ ಶಿಕ್ಷಣ ಅಧಿನಿಯಮ, 1983ರ[10] (ಕೆಇಎ 1983) ಪರಿಚ್ಛೇದ 146(1) ಕರ್ನಾಟಕ ಕಡ್ಡಾಯ ಪ್ರಾಥಮಿಕ ಶಿಕ್ಷಣ ಅಧಿನಿಯಮ, 1961ನ್ನು ರದ್ದುಗೊಳಿಸಿತು ಮತ್ತು ಕರ್ನಾಟಕ ಶಿಕ್ಷಣ ಅಧಿನಿಯಮದಲ್ಲಿ ಶಿಕ್ಷಣ ಉಪಕರವನ್ನು ವಿಧಿಸಿ ಸಂಗ್ರಹಿಸುವ ಬಗ್ಗೆ ನಿರ್ಬಂಧವಿರಲಿಲ್ಲ.

ಆದರೆ, ಮಾರ್ಚ್ 2017ರಲ್ಲಿದ್ದಂತೆ, 13 ನಗರ ಸ್ಥಳೀಯ ಸಂಸ್ಥೆಗಳು ₹50.98 ಲಕ್ಷ ಶಿಕ್ಷಣ ಉಪಕರದ ಶಿಲ್ಕನ್ನು ಹೊಂದಿದ್ದವು ಎಂದು ಆ ನಗರ ಸ್ಥಳಿಯ ಸಂಸ್ಥೆಗಳ ಪರೀಕ್ಷಾ–ತನಿಖೆಯು ತೋರಿಸಿತು. 13ರಲ್ಲಿ 10 ನಗರ ಸ್ಥಳೀಯ ಸಂಸ್ಥೆಗಳು ಉಪಕರವನ್ನು ಜಮೆ ಮಾಡಿವೆ ಹಾಗೂ ಮೂರು[11] ನಗರ ಸ್ಥಳೀಯ ಸಂಸ್ಥೆಗಳು ಉಳಿದ ₹7.30 ಲಕ್ಷ ಉಪಕರವನ್ನು ಹಂತಹಂತವಾಗಿ ಜಮೆ ಮಾಡುತ್ತವೆ ಎಂದು ಪೌರಾಡಳಿತ ನಿರ್ದೇಶಕರು ತಿಳಿಸಿದರು (ಜುಲೈ 2018).

### 3.5.1.8 ಸ್ಥಿರ ಸ್ವತ್ತುಗಳ ವರ್ಗಾವಣೆ ಮೇಲೆ ಶುಲ್ಕದ ಬಿಡುಗಡೆ

ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮ, 1976ರ ಪರಿಚ್ಛೇದ 140ರ ಅನ್ವಯ ದೊಡ್ಡ ನಗರ ಪ್ರದೇಶದ ಪರಿಮಿತಿಗಳೊಳಗೆ ಇರುವ ಎಲ್ಲಾ ಸ್ಥಿರ ಸ್ವತ್ತಿನ ಮಾರಾಟ, ದಾನ, ಅಡಮಾನ, ವಿನಿಮಯ ಅಥವಾ ಶಾಶ್ವತ ಗುತ್ತಿಗೆ, ಇವುಗಳ ಲಿಖಿತ ಪತ್ರಗಳ ಮೇಲೆ ಕರ್ನಾಟಕ ಸ್ಟಾಂಪ್ ಅಧಿನಿಯಮ, 1957ರ ಮೂಲಕ ವಿಧಿಸಲಾದ ಸುಂಕದ ಶೇಕಡಾ ಎರಡರ ದರದಲ್ಲಿ ಸ್ಥಿರ ಸ್ವತ್ತುಗಳ ವರ್ಗಾವಣೆ ಮೇಲೆ

[9] ಕಟ್ಟಡಗಳು ಮತ್ತು ಭೂಮಿಗಳ ಮೇಲೆ ತೆರಿಗೆಗಳು ಹಾಗೂ ವಾಹನಗಳು ಮತ್ತು ಪ್ರಾಣಿಗಳ ಮೇಲೆ ತೆರಿಗೆಗಳು.

[10] ಕರ್ನಾಟಕ ಶಿಕ್ಷಣ ಅಧಿನಿಯಮ, 1983, 1 ಜೂನ್ 1995ರಿಂದ ಜಾರಿಗೆ ಬಂದಿತು.

[11] ಪಟ್ಟಣ ಪಂಚಾಯಿತಿಗಳು, ಅರಭಾವಿ (₹0.19 ಲಕ್ಷ), ಕಬ್ಬೂರು (₹1.60 ಲಕ್ಷ) ಮತ್ತು ಮಲ್ಲಾಪುರ (₹5.50 ಲಕ್ಷ)

ಶುಲ್ಕವನ್ನು ಅಧಿಭಾರದ ರೂಪದಲ್ಲಿ ವಿಧಿಸತಕ್ಕದ್ದು. ನಗರ ಪ್ರದೇಶದಲ್ಲಿರುವ ಭೂಮಿಗಳು ಹಾಗೂ ಇತರೆ ಸ್ಥಿರಾಸ್ತಿಗಳಿಗೆ ಸಂಬಂಧಿಸಿದಂತೆ ಸಂಗ್ರಹಿಸಲಾದ ಸಂಪೂರ್ಣ ಮೊತ್ತವನ್ನು ನೋಂದಣಿಗಳ ಮಹಾ ಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರವರು ರಾಜ್ಯದಲ್ಲಿರುವ ನಗರಪಾಲಿಕೆಗಳಿಗೆ ಜನಸಂಖ್ಯೆಗೆ ಅನುಗುಣವಾಗಿ, ಸಂಗ್ರಹಣಾ ವೆಚ್ಚಗಳ ಕಡೆಗೆ ಶೇಕಡಾ 10ರಷ್ಟನ್ನು ಕಡಿದುಕೊಂಡ ವರ್ಗಾಯಿಸಲಾಗುವುದು,

2014–15 ಮತ್ತು 2015–16ಕ್ಕೆ ಸಂಬಂದಿಸಿದ ಸ್ಥಿರ ಸ್ವತ್ತುಗಳ ವರ್ಗಾವಣೆ ಮೇಲೆ ಶುಲ್ಕ ₹21.19 ಕೋಟಿಯನ್ನು ಡಿಸೆಂಬರ್ 2017ರಲ್ಲಿ ಬಿಡುಗಡೆ ಮಾಡಲಾಗಿತ್ತು ಹಾಗೂ 2016–17 ಮತ್ತು 2017–18ರ ಹೆಚ್ಚುವರಿ ಮುದ್ರಾಂಕ ಶುಲ್ಕ ನಗರ ಸ್ಥಳೀಯ ಸಂಸ್ಥೆಗಳಿಗೆ ವರ್ಗಾವಣೆ ಮಾಡಿರಲಿಲ್ಲ (ಅಕ್ಟೋಬರ್ 2018). ಎಲ್ಲಾ ಜಿಲ್ಲಾ ನೊಂದಣಾಧಿಕಾರಿಗಳಿಂದ ಸಂಪೂರ್ಣ ಮಾಹಿತಿಯು ಸ್ವೀಕೃತವಾದ ನಂತರ ಮತ್ತು ಅವಶ್ಯಕ ಮರುಹೊಂದಾಣಿಕೆಯ ನಂತರ ಸ್ಥಿರ ಸ್ವತ್ತುಗಳ ವರ್ಗಾವಣೆ ಮೇಲೆ ಶುಲ್ಕವನ್ನು ವರ್ಗಾಯಿಸಲಾಗುವುದು ಎಂದು ನೋಂದಣಿಗಳ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು ತಿಳಿಸಿದರು (ಅಕ್ಟೋಬರ್ 2018).

### *3.5.2 ಉತ್ತರದಾಯಿತ್ವದ ಚೌಕಟ್ಟು*

ಸಾರ್ವಜನಿಕ ವಲಯದಲ್ಲಿ ಹಣಕಾಸಿನ ವರದಿಯು ಉತ್ತರದಾಯಿತ್ವದ ಒಂದು ಪ್ರಮುಖ ಅಂಶವಾಗಿದೆ. ಹನ್ನೊಂದನೇ ಹಣಕಾಸು ಆಯೋಗದ ಶಿಫಾರಸುಗಳ ಆಧಾರದ ಮೇರೆಗೆ, ಕೇಂದ್ರ ಸರ್ಕಾರವು ನಗರ ಸ್ಥಳೀಯ ಸಂಸ್ಥೆಗಳಿಗೆ ಸೂಕ್ತವಾದ ಲೆಕ್ಕಪತ್ರಗಳ ನಮೂನೆಗಳನ್ನು ನಿಗದಿಪಡಿಸುವ ಜವಾಬ್ದಾರಿಯನ್ನು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರಿಗೆ ವಹಿಸಿತು.

ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಕಾರ್ಯಪಡೆಯ ಶಿಫಾರಸಿನಂತೆ ಕೇಂದ್ರ ಸರ್ಕಾರದ ನಗರಾಭಿವೃದ್ಧಿ ಮಂತ್ರಾಲಯವು ರಾಷ್ಟ್ರೀಯ ಪೌರಾಡಳಿತ ಲೆಕ್ಕಪತ್ರಗಳ ಕೈಪಿಡಿಯನ್ನು ಅಭಿವೃದ್ಧಿಗೊಳಿಸಿತು. ರಾಜ್ಯ ಸರ್ಕಾರವು, ರಾಷ್ಟ್ರೀಯ ಪೌರಾಡಳಿತ ಲೆಕ್ಕಪತ್ರಗಳ ಕೈಪಿಡಿಯ ಆಧಾರದ ಮೇರೆಗೆ ಕರ್ನಾಟಕ ಪೌರಸಂಸ್ಥೆಗಳ ಲೆಕ್ಕಪತ್ರಗಳು ಮತ್ತು ಆಯವ್ಯಯ ನಿಯಮಗಳು, 2006ರನ್ನು 1ನೇ ಏಪ್ರಿಲ್ 2006ರಿಂದ ಜಾರಿಗೆ ತಂದಿತು. ಕರ್ನಾಟಕ ಪೌರಸಂಸ್ಥೆಗಳ ಲೆಕ್ಕಪತ್ರ ಮತ್ತು ಆಯವ್ಯಯ ನಿಯಮಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು ಹೊರತುಪಡಿಸಿದಂತೆ ಎಲ್ಲ ನಗರ ಸ್ಥಳೀಯ ಸಂಸ್ಥೆಗಳಲ್ಲಿಯೂ ಹಂತಹಂತವಾಗಿ ಜಾರಿಗೊಳಿಸಲಾಯಿತು. 31 ಮಾರ್ಚ್ 2018ರಲ್ಲಿದ್ದಂತೆ, ಎಲ್ಲ ನಗರ ಸ್ಥಳೀಯ ಸಂಸ್ಥೆಗಳು ನಿಧಿ–ಆಧಾರಿತ ಲೆಕ್ಕಪತ್ರಗಳ ಪದ್ಧತಿಯನ್ನು ಜೋಡಿ ನಮೂದು ಪದ್ಧತಿಯಲ್ಲಿ ತಯಾರಿಸುತ್ತಿದ್ದವು. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ನಿಧಿ ಆಧಾರಿತ ಲೆಕ್ಕಪತ್ರಗಳ ಪದ್ಧತಿಯ ಮಾದರಿಯನ್ನು ಬೆಂಗಳೂರು ಮಹಾನಗರ ಪಾಲಿಕೆ (ಲೆಕ್ಕಪತ್ರಗಳು) ನಿಬಂಧನೆಗಳು, 2001ರ ಆಧಾರದ ಮೇರೆಗೆ ನಿರ್ವಹಿಸುತ್ತಿದ್ದಿತು.

### 3.5.2.1 ನಗರ ಸ್ಥಳೀಯ ಸಂಸ್ಥೆಗಳ ಲೆಕ್ಕಪತ್ರಗಳ ತಯಾರಿಕೆ ಹಾಗೂ ಪ್ರಮಾಣೀಕರಣ

ಕರ್ನಾಟಕ ಪೌರಸಂಸ್ಥೆಗಳ ಲೆಕ್ಕಪತ್ರಗಳ ಮತ್ತು ಆಯವ್ಯಯ ತಯಾರಿಕೆ ನಿಯಮಗಳು, 2006ರ ಪ್ರಕಾರ, ನಗರ ಸ್ಥಳೀಯ ಸಂಸ್ಥೆಗಳು ಲೆಕ್ಕಪತ್ರಗಳ ಮೇಲಿನ ಟಿಪ್ಪಣಿಗಳ ಜೊತೆಯಲ್ಲಿ ಸ್ವೀಕೃತಿಗಳು ಮತ್ತು ಪಾವತಿಗಳ ತಃಖ್ತೆ, ಆಸ್ತಿ ಮತ್ತು ಜವಾಬ್ದಾರಿ ತಃಖ್ತೆ ಹಾಗೂ ಆದಾಯ ಮತ್ತು ವೆಚ್ಚ ತಃಖ್ತೆಗಳು ಒಳಗೊಂಡಂತೆ ಹಣಕಾಸು ತಃಖ್ತೆಗಳನ್ನು ನಿರ್ದಿಷ್ಟಪಡಿಸಲಾಗಿರುವ ನಮೂನೆ ಹಾಗೂ ವಿಧಾನದಲ್ಲಿ ತಯಾರಿಸತಕ್ಕದ್ದು ಹಾಗೂ ಅವುಗಳನ್ನು ರಾಜ್ಯ ಸರ್ಕಾರವು ನೇಮಕ ಮಾಡಿರುವ ಲೆಕ್ಕಪರಿಶೋಧಕರಿಗೆ ಹಣಕಾಸು ವರ್ಷವು ಮುಕ್ತಾಯಗೊಳ್ಳುವ ದಿನಾಂಕದಿಂದ ಎರಡು ತಿಂಗಳುಗಳೊಳಗೆ ಸಲ್ಲಿಸತಕ್ಕದ್ದು.

ಲೆಕ್ಕಪರಿಶೋಧಕರು ಹಣಕಾಸು ವರ್ಷವು ಮುಕ್ತಾಯಗೊಂಡ ದಿನಾಂಕದಿಂದ (ಮಾರ್ಚ್ 31) ನಾಲ್ಕು ತಿಂಗಳುಗಳೊಳಗೆ (ಜುಲೈ) ಲೆಕ್ಕಪರಿಶೋಧನೆಯನ್ನು ಪೂರ್ಣಗೊಳಿಸತಕ್ಕದ್ದು ಮತ್ತು ಲೆಕ್ಕಪರಿಶೋಧನೆಯು ಪೂರ್ಣಗೊಂಡ ನಂತರ ಲೆಕ್ಕಪರಿಶೋಧನೆಗೆ ಒಳಪಟ್ಟ ಲೆಕ್ಕಪತ್ರಗಳ ಜೊತೆಯಲ್ಲಿ ಒಂದು ವರದಿಯನ್ನು ನಗರಸಭೆಗೆ ಹಾಗೂ ರಾಜ್ಯ ಸರ್ಕಾರಕ್ಕೆ ಸಲ್ಲಿಸತಕ್ಕದ್ದು. ಲೆಕ್ಕಪರಿಶೋಧನೆಗೆ ಒಳಪಟ್ಟ ಲೆಕ್ಕಪತ್ರಗಳನ್ನು ಹಣಕಾಸು ವರ್ಷವು ಮುಕ್ತಾಯಗೊಂಡ ದಿನಾಂಕದಿಂದ ಐದು ತಿಂಗಳುಗಳೊಳಗೆ ನಗರಸಭೆಯು ಅಳವಡಿಸತಕ್ಕದ್ದು.

2017–18ರ ಸಾಲಿನಲ್ಲಿ 279 ನಗರ ಸ್ಥಳೀಯ ಸಂಸ್ಥೆಗಳಲ್ಲಿ 18 ನಗರ ಸ್ಥಳೀಯ ಸಂಸ್ಥೆಗಳ ಲೆಕ್ಕಪರಿಶೋಧನೆಯು ಪೂರ್ಣಗೊಂಡಿದ್ದವು (ಅಕ್ಟೋಬರ್ 2018).

### 3.5.2.2 ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಲೆಕ್ಕಪತ್ರಗಳ ತಯಾರಿಕೆ ಮತ್ತು ಪ್ರಮಾಣೀಕರಣ

ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮದ ಅನುಸೂಚಿ IXರ ಭಾಗ IIರ ಅನುವು 9(2)ರ ಅನುಸಾರ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರವರು ವಾರ್ಷಿಕ ಲೆಕ್ಕಪತ್ರಗಳನ್ನು ತಯಾರಿಸಿ ಅದನ್ನು ಸಂಬಂಧಪಟ್ಟ ದಾಖಲೆಗಳ ಜೊತೆಯಲ್ಲಿ ಪರಿಶೀಲಿಸುವುದಕ್ಕಾಗಿ ಮುಖ್ಯ ಲೆಕ್ಕಪರಿಶೋಧಕರಿಗೆ ಅಕ್ಟೋಬರ್ ಮೊದಲ ದಿನವನ್ನು ಮೀರದಂತೆ ಒದಗಿಸುವ ಅಗತ್ಯತೆಯಿದ್ದಿತು.

ಆದಾಗ್ಯೂ, 2016–17 ಮತ್ತು 2017–18 ರವರೆಗಿನ ಲೆಕ್ಕಪತ್ರಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಶಾಸನಬದ್ದ ಲೆಕ್ಕಪರಿಶೋಧಕರಾಗಿರುವ ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯ ಪ್ರಧಾನ ನಿರ್ದೇಶಕರು ಲೆಕ್ಕಪರಿಶೋಧನೆ ಮಾಡಿರುವುದಿಲ್ಲ.

## 3.6 ನಿರ್ಣಯ

ಆಸ್ತಿ ತೆರಿಗೆಯ ವಸೂಲಾತಿಗೆ ಹೋಲಿಸಿದಾಗ ಪಾವತಿಯು ಕಳಪೆಯಾಗಿತ್ತು. ನಗರ ಸ್ಥಳೀಯ ಸಂಸ್ಥೆಗಳು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು ಒಳಗೊಂಡಂತೆ ಆರೋಗ್ಯ ಉಪಕರ, ಗ್ರಂಥಾಲಯ ಉಪಕರ ಮತ್ತು ಭಿಕ್ಷಾಟನೆ ಉಪಕರವನ್ನು ಸಂಬಂಧಪಟ್ಟ ಇಲಾಖೆಗಳಿಗೆ ಜಮೆ ಮಾಡಿರಲಿಲ್ಲ ಅಥವಾ ಕಡಿಮೆ ಜಮೆ ಮಾಡಿದರು. ಅಕ್ಟೋಬರ್ 2018ರಲ್ಲಿದ್ದಂತೆ ನೋಂದಣಿಗಳ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು 2016–17ನೇ ಹಾಗೂ 2017–18 ವರ್ಷದ ಸ್ಥಿರ ಸ್ವತ್ತುಗಳ ವರ್ಗಾವಣೆ ಮೇಲೆ ಶುಲ್ಕವನ್ನುನಗರ ಸ್ಥಳೀಯ ಸಂಸ್ಥೆಗಳಿಗೆ ವರ್ಗಾವಣೆ ಮಾಡಿರಲಿಲ್ಲ. ರಾಜ್ಯ ಸರ್ಕಾರವು ಸಾಲೇತರ ನಿವ್ವಳ ಸ್ವಂತ ರಾಜಸ್ವ ಸ್ವೀಕೃತಿಗಳ ಅನುಗುಣವಾಗಿ ನಿರ್ದಿಷ್ಟ ಪಡಿಸಿದ ಶೇಕಡಾ 10ರ ಬದಲಾಗಿ ಶೇಕಡಾ 6.93ರಷ್ಟನ್ನು ಮಾತ್ರ ಬಿಡುಗಡೆಗೊಳಿಸಿತು. ನಗರ ಸ್ಥಳೀಯ ಸಂಸ್ಥೆಗಳ ಕಾರ್ಯಚಟುವಟಿಕೆಗಳನ್ನು ಮೇಲ್ವಿಚಾರಣೆ ಮಾಡುವ ಸಲುವಾಗಿ ರಾಜ್ಯ ಸರ್ಕಾರವು ಆಂತರಿಕ ಲೆಕ್ಕಪರಿಶೋಧನೆ ವಿಭಾಗವನ್ನು ಹೊಂದಿರಲಿಲ್ಲ. ರಾಜ್ಯದಲ್ಲಿ ಆಸ್ತಿ ತೆರಿಗೆ ಮಂಡಳಿಯನ್ನು ಸ್ಥಾಪಿಸಿರಲಿಲ್ಲ (ನವೆಂಬರ್ 2018). ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯು 2016–17 ಮತ್ತು 2017–18ರ ವರ್ಷದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸಂಬಂಧಿಸಿದ ಲೆಕ್ಕಪತ್ರಗಳ ಲೆಕ್ಕಪರಿಶೋಧನೆಯನ್ನು ನೆಡಸಿರಲಿಲ್ಲ. ಮಾರ್ಚ್ 2018ರ ವೇಳೆಗೆ, 4,109 ಕಂಡಿಕೆಗಳನ್ನು ಒಳಗೊಂಡ 265 ತಪಾಸಣಾ ವರದಿಗಳು ಮೂರು ವರ್ಷಗಳಿಗೂ ಮೇಲ್ಪಟ್ಟು ಬಾಕಿ ಉಳಿದಿವೆ. ಇದು ನಗರ ಸ್ಥಳೀಯ ಸಂಸ್ಥೆಗಳ ಅಸಮರ್ಪಕ ಕ್ರಮವನ್ನು ಸೂಚಿಸುತ್ತದೆ.

# ಅಧ್ಯಾಯ - IV

# ನಗರ ಸ್ಥಳೀಯ ಸಂಸ್ಥೆಗಳ ಲೆಕ್ಕಪರಿಶೋಧನೆಯ ಫಲಿತಾಂಶಗಳು

## ಅಧ್ಯಾಯ IV – ಅನುಪಾಲನಾ ಲೆಕ್ಕಪರಿಶೋಧನೆ

## ನಗರಾಭಿವೃದ್ಧಿ ಇಲಾಖೆ

### 4.1 ದಂಡದ ಬಡ್ಡಿಯ ತಪ್ಪಿಸಬಹುದಾಗಿದ್ದ ಪಾವತಿ

**ಆಯವ್ಯಯ ಅವಕಾಶಗಳು ಮತ್ತು ಪರ್ಯಾಪ್ತ ನಿಧಿಗಳು ಲಭ್ಯವಿದ್ದರೂ ಸಹ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಸಾಲದ ಕಂತುಗಳನ್ನು ಮರುಪಾವತಿಸುವಲ್ಲಿ ನಿರಂತರವಾಗಿ ಸುಸ್ತಿದಾರನಾಗಿದ್ದು, ₹20.07 ಕೋಟಿ ತಪ್ಪಿಸಬಹುದಾಗಿದ್ದ ದಂಡದ ಬಡ್ಡಿಯನ್ನು ಪಾವತಿಸುವಲ್ಲಿ ಪರಿಣಮಿಸಿತು.**

ಕರ್ನಾಟಕ ಪುರಸಭೆಗಳ ಅಧಿನಿಯಮ, 1976ರ (ಕೆಎಮ್‌ಸಿ ಅಧಿನಿಯಮ, 1976) ಪರಿಚ್ಛೇದ 164, ಪುರಸಭೆಯೊಂದರಿಂದ ಸಾಲಗಳ ಹಾಗೂ ಸಾಲದ ಮೇಲಿನ ಬಡ್ಡಿಗಳ ಬಾಕಿ ಇರುವ ಎಲ್ಲ ಮರುಪಾವತಿಗಳನ್ನು ಪುರಸಭೆಯಿಂದ ಬಾಕಿಯಿರುವ ಎಲ್ಲ ಪಾವತಿಗಳಿಗಿಂತ ಆದ್ಯತೆಯ ಮೇರೆಗೆ ಮಾಡಬೇಕೆಂದು, ನಿಗದಿಪಡಿಸುತ್ತದೆ. ಅಲ್ಲದೆ, ಕೆಎಮ್‌ಸಿ ಅಧಿನಿಯಮ, 1976ರ ಪರಿಚ್ಛೇದ 167, ಸಾಲಗಳ ಕಾರಣದಿಂದ ಪುರಸಭೆಯು ಹೊಣೆಗಾರನಾಗಿರುವ ಅಸಲು ಮತ್ತು ಬಡ್ಡಿಗಳ ಮರುಪಾವತಿಗೆ ಪುರಸಭೆಯು ತಯಾರಿಸುವ ಆಯವ್ಯಯದಲ್ಲಿ ಅವಕಾಶಗಳನ್ನು ಕಲ್ಪಿಸಬೇಕೆಂದು ನಿಗದಿಪಡಿಸುತ್ತದೆ.

ಪುನರ್ನಿರ್ಮಾಣ ಮತ್ತು ಅಭಿವೃದ್ಧಿಗಾಗಿನ ಅಂತರರಾಷ್ಟ್ರೀಯ ಬ್ಯಾಂಕ್‌ನಿಂದ (ವಿಶ್ವಬ್ಯಾಂಕ್) ಸಾಲದ ನೆರವಿನಿಂದ ಕರ್ನಾಟಕ ಪುರಸಭೆಗಳ ಸುಧಾರಣಾ ಯೋಜನೆಯ (ಕೆಎಮ್‌ಆರ್‌ಪಿ) ಅನುಷ್ಠಾನಕ್ಕೆ ಕರ್ನಾಟಕ ಸರ್ಕಾರವು ಮಂಜೂರಾತಿ (ಸೆಪ್ಟಂಬರ್ 2005) ನೀಡಿರುವುದನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ (ಬಿಬಿಎಮ್‌ಪಿ) ಮುಖ್ಯ ಲೆಕ್ಕಾಧಿಕಾರಿಯವರ (ಸಿಎಓ) ಕಛೇರಿಯ ದಾಖಲೆಗಳ ಪರಿಶೀಲಿನೆಯು (ಜೂನ್ 2018) ತೋರಿಸಿತು. ಸಮರ್ಥ ಸೇವೆಗಳನ್ನು ನೀಡುವಲ್ಲಿ ನಗರ ಸ್ಥಳೀಯ ಸಂಸ್ಥೆಗಳ ಸಾಮರ್ಥ್ಯವನ್ನು ಸುಧಾರಿಸಲು, ಉತ್ತಮ ಆಡಳಿತವನ್ನು ಖಚಿತಪಡಿಸಿಕೊಳ್ಳಲು ಮತ್ತು ಗ್ರೇಟರ್ ಬೆಂಗಳೂರು ಪ್ರದೇಶದಲ್ಲಿ ಒಳಚರಂಡಿ ಸೌಲಭ್ಯಗಳನ್ನು ಹಾಗೂ ಬೆಂಗಳೂರು ನಗರದಲ್ಲಿ ರಸ್ತೆ ಜಾಲವನ್ನು ಸುಧಾರಿಸಲು ರಾಜ್ಯ ಸರ್ಕಾರದ ಪ್ರಯತ್ನಗಳನ್ನು ಮುಂದುವರೆಸಲು ₹1,148.53 ಕೋಟಿ ವೆಚ್ಚದ ಈ ಯೋಜನೆಯನ್ನು ರಚಿಸಲಾಯಿತು. ಸಾಲದ ನಿಬಂಧನೆಗಳು ಮತ್ತು ಷರತ್ತುಗಳನ್ನು ಸರ್ಕಾರಿ ಆದೇಶ (ಸೆಪ್ಟಂಬರ್ 2005) ಹಾಗೂ ಭಾರತ ಮತ್ತು ವಿಶ್ವಬ್ಯಾಂಕ್ ಸಹಿ ಮಾಡಿರುವ ಒಪ್ಪಂದಗಳು (ಮೇ 2006) ಹಾಗೂ ವಿಶ್ವಬ್ಯಾಂಕ್ ಮತ್ತು ಕರ್ನಾಟಕ ರಾಜ್ಯದ ನಡುವಿನ ಒಪ್ಪಂದಗಳು (ಮೇ 2006), ಇವುಗಳ ಮೂಲಕ ನಿಯಂತ್ರಿಸಲಾಗುತ್ತಿತ್ತು. ಯೋಜನೆಯನ್ನು 2005–06ರಿಂದ 2009–10ರ ಐದು ವರ್ಷಗಳ ಅವಧಿಯಲ್ಲಿ ಅನುಷ್ಠಾನಗೊಳಿಸಬೇಕಿತ್ತು ಹಾಗೂ ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮವನ್ನು (ಕೆಯುಐಡಿಎಫ್‌ಸಿ) ಪೂರ್ಣ ಯೋಜನೆಗೆ ಸಂಯೋಜನಾ ಸಂಸ್ಥೆಯನ್ನಾಗಿ ನೇಮಕ ಮಾಡಲಾಯಿತು.

ಕೆಎಮ್‌ಆರ್‌ಪಿ ಅಡಿಯಲ್ಲಿನ ನಾಲ್ಕು ಘಟಕಗಳಲ್ಲಿ ಒಂದು ಬೆಂಗಳೂರು ಅಭಿವೃದ್ಧಿ ಘಟಕವಾಗಿದ್ದಿತು ಮತ್ತು ಅದರಡಿಯಲ್ಲಿ ಬಿಬಿಎಮ್‌ಪಿಗೆ[12] ₹76.47 ಕೋಟಿಗಳ[13] ಸಾಲದ ನೆರವನ್ನು ನೀಡಲಾಗಿತ್ತು. ಬಡ್ಡಿಯ ದರವು ವಾರ್ಷಿಕ ಶೇಕಡಾ 8.5 ರಷ್ಟಿತ್ತು ಮತ್ತು ಸಾಲವನ್ನು 60 ತ್ರೈಮಾಸಿಕ ಕಂತುಗಳಲ್ಲಿ (ಜುಲೈ–ಸೆಪ್ಟಂಬರ್ 2011ರಿಂದ ಏಪ್ರಿಲ್–ಜೂನ್ 2026) ಮರುಪಾವತಿಸಬೇಕಿತ್ತು. ಮರುಪಾವತಿಯಲ್ಲಿ ಯಾವುದೇ ಸುಸ್ತಿದಾರರಾದಲ್ಲಿ ವಾರ್ಷಿಕ ಶೇಕಡಾ 11ರ ದರದಲ್ಲಿ ಬಡ್ಡಿಯನ್ನು ವಿಧಿಸಲಾಗುತ್ತಿತ್ತು.

---

12 ಅಸ್ತಿತ್ವದಲ್ಲಿರುವ ಬೆಂಗಳೂರು ಮಹಾನಗರ ಪಾಲಿಕೆ ಅಡಿಯಲ್ಲಿರುವ ಪ್ರದೇಶಗಳನ್ನು ಏಳು ನಗರಸಭೆಗಳು, ಒಂದು ಪಟ್ಟಣ ಪಂಚಾಯತಿ ಮತ್ತು ಸುತ್ತಮುತ್ತಲಿನ 110 ಗ್ರಾಮಗಳೊಂದಿಗೆ ವಿಲೀನಗೊಳಿಸಿ ಒಂದು ಆಡಳಿತ ಸಂಸ್ಥೆ ಬಿಬಿಎಮ್‌ಪಿಯನ್ನು ರಚಿಸಲು ರಾಜ್ಯ ಸರ್ಕಾರವು ಅಧಿಸೂಚನೆಯನ್ನು ಹೊರಡಿಸಿತು (ಜನವರಿ 2007).

13 ಮಾರ್ಚ್ 2006ರಿಂದ ಜುಲೈ 2009ರವರೆಗೆ ₹73.40 ಕೋಟಿ ಮತ್ತು ಮೇ 2015ರಲ್ಲಿ ₹3.07 ಕೋಟಿ.

ಕೆಯುಐಡಿಎಫ್‌ಸಿ ಸಾಲವನ್ನು ಮರುಪಾವತಿಸಲು ಆಯವ್ಯಯ ಅಂದಾಜುಗಳಲ್ಲಿ (2011–12ರಿಂದ 2017–18) ಬಿಬಿಎಮ್‌ಪಿ ಅವಕಾಶಗಳನ್ನು ಮಾಡಿತ್ತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಕೆಯುಐಡಿಎಫ್‌ಸಿ ಡಿಸೆಂಬರ್ 2011 ಮತ್ತು ಅಕ್ಟೋಬರ್ 2016ರ ನಡುವೆ 21 ಬೇಡಿಕೆ ನೋಟೀಸ್‌ಗಳನ್ನು ನೀಡಿತ್ತು ಮತ್ತು ಈ ಅವಧಿಯಲ್ಲಿ ಬ್ಯಾಂಕ್ ಖಾತೆಯಲ್ಲಿ ಪರ್ಯಾಪ್ತ ನಿಧಿಗಳು ಲಭ್ಯವಿದ್ದವೆಂದು ಬಿಬಿಎಮ್‌ಪಿ ಸಲ್ಲಿಸಿದ್ದ ಬ್ಯಾಂಕ್ ತ:ಖ್ತೆಗಳಿಂದ ತಿಳಿದುಬಂದಿತ್ತು. ಇದರ ಹೊರತಾಗಿಯೂ ಕೆಯುಐಡಿಎಫ್‌ಸಿಗೆ ತ್ರೈಮಾಸಿಕ ಬಾಕಿಗಳನ್ನು ಪಾವತಿಸುವಲ್ಲಿ ಬಿಬಿಎಮ್‌ಪಿ ಸುಸ್ತಿದಾರನಾಗಿತ್ತು ಮತ್ತು ಸೆಪ್ಟಂಬರ್ 2016ಕ್ಕೆ ಕೊನೆಗೊಂಡ ತ್ರೈಮಾಸಿಕದವರೆಗೆ ಯಾವುದೇ ಮೊತ್ತವನ್ನು ಪಾವತಿ ಮಾಡಿರಲಿಲ್ಲ. ₹3.86 ಕೋಟಿಯ ಮೊದಲ ಪಾವತಿಯನ್ನು ನವೆಂಬರ್ 2016ರಂದು ಮಾಡಲಾಯಿತು ಮತ್ತು ಮಾರ್ಚ್ 2017ರ ತ್ರೈಮಾಸಿಕದವರೆಗೆ ಪಾವತಿಯಲ್ಲಿ ಸುಸ್ತಿದಾರನಾಗುವುದು ಮುಂದುವರೆಯಿತು. ತತ್ಪರಿಣಾಮವಾಗಿ, ಡಿಸೆಂಬರ್ 2011 ಮತ್ತು ಮಾರ್ಚ್ 2017ರ ನಡುವೆ ಬೇಡಿಕೆ ನೋಟೀಸ್‌ಗಳ ಮೂಲಕ ಕೆಯುಐಡಿಎಫ್‌ಸಿ ವಿಳಂಬಿತ ಪಾವತಿಗಳಿಗಾಗಿ ₹20.07 ಕೋಟಿಯನ್ನು ದಂಡ ಬಡ್ಡಿಯನ್ನಾಗಿ ಹಕ್ಕು ಸಾದಿಸಿತು. ನಂತರದ ನಾಲ್ಕು ತ್ರೈಮಾಸಿಕಗಳಿಗೆ (ಏಪ್ರಿಲ್–ಜೂನ್2017ರಿಂದ ಜನವರಿ–ಮಾರ್ಚ್ 2018) ಬಾಕಿಗಳನ್ನು ಪಾವತಿಸುವಲ್ಲಿ ಯಾವುದೇ ವಿಳಂಬಗಳಿರಲಿಲ್ಲ. ಮಾರ್ಚ್ 2018ರಲ್ಲಿದ್ದಂತೆ, ಬಿಬಿಎಮ್‌ಪಿ ₹109.44 ಕೋಟಿಗಳನ್ನು ಕೆಯುಐಡಿಎಫ್‌ಸಿಗೆ ಪಾವತಿಸಿತ್ತು ಮತ್ತು ಅದರಲ್ಲಿ ದಂಡಬಡ್ಡಿಯಾದ ₹20.07 ಕೋಟಿ ಸೇರಿತ್ತು (**ಅನುಬಂಧ–4.1**ರಲ್ಲಿ ವಿವರಗಳನ್ನು ನೀಡಲಾಗಿದೆ).

ಹೀಗೆ, ಆಯವ್ಯಯದಲ್ಲಿ ಅವಕಾಶಗಳನ್ನು ಮಾಡಿದ್ದಾಗ್ಯೂ ಮತ್ತು ಪರ್ಯಾಪ್ತ ಹಣವು ಲಭ್ಯವಿದ್ದಾಗ್ಯೂ ಸಾಲದ ಬಾಕಿಗಳನ್ನು ಸಕಾಲಕ್ಕೆ ಮರುಪಾವತಿಸುವಲ್ಲಿನ ಬಿಬಿಎಮ್‌ಪಿಯ ವಿಫಲತೆಯು ಕೆಯುಐಡಿಎಫ್‌ಸಿಗೆ ₹20.07 ಕೋಟಿಗಳ ತಪ್ಪಿಸಬಹುದಾಗಿದ್ದ ದಂಡಬಡ್ಡಿಯ ಪಾವತಿಯಲ್ಲಿ ಪರಿಣಮಿಸಿತು.

ಸೆಪ್ಟಂಬರ್ 2016ರ ತ್ರೈಮಾಸಿಕದವರೆಗಿನ ತ್ರೈಮಾಸಿಕ ಬಾಕಿಗಳು ಪಾವತಿಯಾಗದಿರುವುದರ ಸಂಬಂಧವಾಗಿ ಲೆಕ್ಕಪರಿಶೋಧನಾ ಅವಲೋಕನಗಳನ್ನು ರಾಜ್ಯ ಸರ್ಕಾರವು ಒಪ್ಪಿಕೊಂಡಿತು (ನವೆಂಬರ್ 2018). ಹಣದ ಲಭ್ಯತೆಯಿದ್ದಾಗ್ಯೂ ಬಾಕಿಗಳನ್ನು ಪಾವತಿ ಮಾಡದಿರಲು ಎದುರಾದ ಕಾರಣಗಳನ್ನು/ನಿರ್ಬಂಧಗಳನ್ನು ಉತ್ತರವು ವಿವರಿಸಲಿಲ್ಲ. ₹20.07 ಕೋಟಿಗಳ ಆರ್ಥಿಕ ಹೊರೆಗೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಹೊಣೆಗಾರಿಕೆಯನ್ನು ರಾಜ್ಯ ಸರ್ಕಾರವು ನಿಗದಿಪಡಿಸಬೇಕಿದೆ.

## 4.2 ಆಸ್ತಿ ತೆರಿಗೆ ತಪ್ಪಾದ ನಿರ್ಧರಣೆಯಿಂದ ಆದಾಯದ ನಷ್ಟ

**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಬೊಮ್ಮನಹಳ್ಳಿ ವಲಯದ ಜಂಟಿ ಆಯುಕ್ತರು ಕಟ್ಟಡವೊಂದರ ಕಾರಿಡಾರ್/ಸೇವಾಪ್ರದೇಶವನ್ನು ಕಡಿಮೆ ದರದಲ್ಲಿ ತಪ್ಪಾಗಿ ನಿರ್ಣಯಿಸಿದರು. ಆಸ್ತಿ ತೆರಿಗೆಯನ್ನು ವಿಧಿಸಲು ಅನುಭೋಗತಾ ಪ್ರಮಾಣಪತ್ರದ ದಿನಾಂಕವನ್ನು ಸಹ ಅವರು ಪರಿಗಣಿಸಲಿಲ್ಲ. ಇವುಗಳು ತೆರಿಗೆಯನ್ನು ಕಡಿಮೆ ನಿರ್ಣಯಿಸುವಲ್ಲಿ ಪರಿಣಮಿಸಿ ತತ್ಪರಿಣಾಮವಾಗಿ ₹6.72 ಕೋಟಿ ಆದಾಯದ ನಷ್ಟವಾಯಿತು.**

ಕರ್ನಾಟಕ ಪುರಸಭೆಗಳ ಅಧಿನಿಯಮ, 1976 (ಕೆಎಮ್‌ಸಿ ಅಧಿನಿಯಮ, 1976) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ (ಬಿಬಿಎಮ್‌ಪಿ) ಅಧಿಕಾರ ವ್ಯಾಪ್ತಿಯಡಿಯಲ್ಲಿ ಬರುವ ಎಲ್ಲ ಕಟ್ಟಡಗಳು ಮತ್ತು ಖಾಲಿ ನಿವೇಶನಗಳ ಮೇಲೆ ಆಸ್ತಿ ತೆರಿಗೆಯನ್ನು ವಿಧಿಸಿ ಸಂಗ್ರಹಿಸುವುದಕ್ಕೆ ಅವಕಾಶ ನೀಡುತ್ತದೆ. ಯೂನಿಟ್ ಏರಿಯಾ ವ್ಯಾಲ್ಯೂ ಸಿಸ್ಟಂ ಅಡಿಯಲ್ಲಿ ಸ್ವಯಂ ನಿರ್ಧಾರಿತ ಆಸ್ತಿ ತೆರಿಗೆಯನ್ನು ಪರಿಚಯಿಸಲು ರಾಜ್ಯಸರ್ಕಾರವು ಬಿಬಿಎಮ್‌ಪಿ ಆಸ್ತಿ ತೆರಿಗೆ ನಿಯಮಗಳು, 2009ನ್ನು ಅಧಿಸೂಚಿಸಿತು (ಜನವರಿ 2009). ವಿವಿಧ ಪ್ರದೇಶಗಳನ್ನು ಅಥವಾ ರಸ್ತೆಗಳನ್ನು ವಲಯಗಳನ್ನಾಗಿ ವರ್ಗೀಕರಿಸಿ ಖಾಲಿ

ಇರುವ ನಿವೇಶನ ಅಥವಾ ಕಟ್ಟಡದ ಬಳಕೆಯ ಸ್ವರೂಪ ಮತ್ತು ಕಟ್ಟಡಗಳ ಮತ್ತು ಖಾಲಿ ನಿವೇಶನಗಳ ವಿವಿಧ ವರ್ಗಗಳಿಗೆ ವಿವಿಧ ದರಗಳನ್ನು ನಿರ್ಣಯಿಸಲಾಯಿತು. ಈ ಉದ್ದೇಶಕ್ಕಾಗಿ ಬಿಬಿಎಮ್‌ಪಿ ಆಡಳಿತ ಪ್ರದೇಶವನ್ನು ಆರು ವಲಯಗಳಾಗಿ ವರ್ಗೀಕರಿಸಲಾಯಿತು (ಎ, ಬಿ, ಸಿ, ಡಿ, ಇ ಮತ್ತು ಎಫ್) ಹಾಗೂ ಆಸ್ತಿಗಳನ್ನು 18 ವರ್ಗಗಳಾಗಿ ವರ್ಗೀಕರಿಸಲಾಯಿತು (ಐದು ವಸತಿ ವರ್ಗಗಳು ಮತ್ತು 13 ವಸತಿಯೇತರ ವರ್ಗಗಳು). 'ಸಿ' ವಲಯದಲ್ಲಿ ಕೇಂದ್ರೀಕೃತ ವಾತಾನುಕೂಲಿತ ಸೌಲಭ್ಯವಿರುವ ವಸತಿಯೇತರ ಕಟ್ಟಡಗಳ (ವರ್ಗ VIII) ಆಸ್ತಿ ತೆರಿಗೆ ದರವು (2008–16) ಪ್ರತಿ ಚದರ ಅಡಿಗೆ ₹12 ಆಗಿತ್ತು ಮತ್ತು ಪಾರ್ಕಿಂಗ್ ಪ್ರದೇಶಕ್ಕೆ ಪ್ರತಿ ಚದರ ಅಡಿಗೆ ₹6 ಆಗಿತ್ತು. ಮಲ್ಟಿಪ್ಲೆಕ್ಸ್ ಸಿನಿಮಾ ಮಂದಿರಗಳನ್ನು ವರ್ಗ XI (ii) ಅಡಿಯಲ್ಲಿ ವರ್ಗೀಕರಿಸಲಾಗಿತ್ತು ಮತ್ತು ತೆರಿಗೆಯ ದರವು ಪ್ರತಿ ಚದರ ಅಡಿಗೆ ₹20 ಆಗಿತ್ತು (ಎಲ್ಲ ಆರು ವಲಯಗಳಲ್ಲಿಯೂ).

ಕೆಎಮ್‌ಸಿ ಅಧಿನಿಯಮ, 1976ರ ತೆರಿಗೆ ನಿಯಮಾವಳಿಗಳು (ಅನುಸೂಚಿ III) ಹಾಗೂ ಪರಿಚ್ಛೇದ 147 ಜೊತೆಗೂಡಿ ಬಿಬಿಎಮ್‌ಪಿ ಆಯುಕ್ತರಿಗೆ ಅಥವಾ ಅಧಿಕಾರ ನೀಡಿದ ಅಧಿಕಾರಿಗೆ ತಪಾಸಣೆಯ ಮತ್ತು ಸಂಗ್ರಹಿಸಿದ ಮಾಹಿತಿಯ ಆಧಾರದ ಮೇಲೆ ಹಾಗೂ ಅವರು ಅಗತ್ಯವಿದೆಯೆಂದು ಪರಿಗಣಿಸಿದರೆ ನಡೆಯುವ ವಿಚಾರಣೆಯ ಮೇಲೆ ಆಸ್ತಿ ತೆರಿಗೆಯನ್ನು ಪರಿಷ್ಕರಿಸುವ ಅಧಿಕಾರವನ್ನು ನೀಡುತ್ತದೆ. ಒಂದು ವೇಳೆ ಆಸ್ತಿ ತೆರಿಗೆಯ ಕಡಿಮೆ ಪಾವತಿ ಮಾಡಿದ್ದಲ್ಲಿ ತೆರಿಗೆದಾರನು ತಪ್ಪಿಸಿಕೊಂಡ ತೆರಿಗೆಯ ಜೊತೆಗೆ ತೆರಿಗೆ ವ್ಯತ್ಯಾಸ ಎರಡುಪಟ್ಟು ಸಮಾನವಾದ ದಂಡದೊಂದಿಗೆ ಹಾಗೂ ತಪ್ಪಿಸಿಕೊಂಡ ತೆರಿಗೆಗೆ ಪ್ರತಿ ತಿಂಗಳಿಗೆ ಶೇಕಡಾ ಎರಡರಂತೆ ಬಡ್ಡಿಯನ್ನು ಪಾವತಿಸಬೇಕು. ನಿಯಮಗಳು ಶೇಕಡಾ 10ರಷ್ಟು ಪ್ರಕರಣಗಳವರೆಗೆ ವಿವರವಾದ ಪರಿಶೀಲನೆಯನ್ನು ನಡೆಸಲು ಅವಕಾಶ ನೀಡಿವೆ.

ಸಹಾಯಕ ಕಂದಾಯ ಅಧಿಕಾರಿ, ಅರಕೆರೆ ಉಪವಿಭಾಗ, ಬೊಮ್ಮನಹಳ್ಳಿ ವಲಯ, ಬಿಬಿಎಮ್‌ಪಿಯ ಸಹಾಯಕ ಕಂದಾಯ ಅಧಿಕಾರಿಗಳ (ಎಆರ್‌ಒ) ಕಛೇರಿಯ ದಾಖಲೆಗಳ ಪರೀಕ್ಷಾ–ತನಿಖೆಯು, ಅರಕೆರೆಯ ಎಆರ್‌ಒರವರು 2016–17ರಿಂದ 2017–18ರ ಅವಧಿಯಲ್ಲಿ 50,173 ರಲ್ಲಿ 18 ಪ್ರಕರಣಗಳನ್ನು (ಶೇಕಡಾ 0.04) ಪರಿಶೀಲಿಸಿದ್ದರೆಂದು ತಿಳಿಯಪಡಿಸಿತು. ಈ 18ರಲ್ಲಿ ಎಂಟು ಪ್ರಕರಣಗಳನ್ನು ಲೆಕ್ಕಪರಿಶೋಧನೆಯು ಪರೀಕ್ಷಾ–ತನಿಖೆ ನಡೆಸಿತು ಮತ್ತು ಒಂದು ವಾಣಿಜ್ಯ ಕಟ್ಟಡದ (ರಾಯಲ್ ಮೀನಾಕ್ಷಿ ಮಾಲ್, ಬನ್ನೇರುಘಟ್ಟ ರಸ್ತೆ) ಪ್ರಕರಣದಲ್ಲಿ ಪರಿಷ್ಕೃತ ನಿರ್ಧರಣೆಯು ಸಂಬಂಧಿತ ನಿಯಮಗಳಿಗೆ ಅನುಗುಣವಾಗಿರಲಿಲ್ಲವೆಂದು ಗಮನಿಸಿತು ಏಕೆಂದರೆ ಅದರಲ್ಲಿ 81,885 ಚದರ ಅಡಿಗಳ ಕಾರಿಡಾರ್/ಸೇವಾ ಪ್ರದೇಶವನ್ನು ಪ್ರತಿ ಚದರ ಅಡಿಗೆ ₹6ರಂತೆ ತಪ್ಪಾಗಿ ನಿರ್ಧರಣೆ ಮಾಡಲಾಗಿತ್ತು. ಇದು ಆಸ್ತಿ ತೆರಿಗೆಯ ಕಡಿಮೆ ನಿರ್ಧರಣೆಯಲ್ಲಿ ಮತ್ತು ಕೆಳಗೆ ತೋರಿಸಿರುವಂತೆ ₹6.72 ಕೋಟಿಗಳ ಆದಾಯದ ನಷ್ಟದಲ್ಲಿ ಪರಿಣಮಿಸಿತು.

(1) ಒಂದು ವೇಳೆ ಯಾವುದೇ ವರ್ಷದ ಅಕ್ಟೋಬರ್ 1ನೇ ತಾರೀಖಿನ ನಂತರ ಕಟ್ಟಡವೊಂದನ್ನು ಪೂರ್ಣಗೊಳಿಸಿದ್ದರೆ, ವರ್ಷದ ಎರಡನೆಯ ಅರ್ಧಭಾಗಕ್ಕೆ ಆ ಕಟ್ಟಡಕ್ಕೆ ಆಸ್ತಿ ತೆರಿಗೆಯನ್ನು ಪಾವತಿಸಬೇಕು ಎಂದು ಬಿಬಿಎಮ್‌ಪಿ ನಿಗದಿಪಡಿಸಿತ್ತು. ಅಕ್ಟೋಬರ್ 1ಕ್ಕೆ ಮೊದಲು ಪೂರ್ಣಗೊಳಿಸಿದ ಕಟ್ಟಡದ ಸಂಬಂಧವಾಗಿ ಆಸ್ತಿ ತೆರಿಗೆಯನ್ನು ಪೂರ್ಣ ವರ್ಷಕ್ಕೆ ಪಾವತಿ ಮಾಡಬೇಕಿತ್ತು. ಕಟ್ಟಡವು ಪೂರ್ಣಗೊಳ್ಳುವವರೆಗೆ ಆಸ್ತಿ ತೆರಿಗೆಯನ್ನು ಖಾಲಿ ನಿವೇಶನಕ್ಕೆ ಅನ್ವಯವಾಗುವ ದರದಲ್ಲಿ ಪಾವತಿಸಬೇಕು.

    ಬಿಬಿಎಮ್‌ಪಿಯ ನಗರ ಯೋಜನೆ ಜಂಟಿ ನಿರ್ದೇಶಕರು ಬನ್ನೇರುಘಟ್ಟ ರಸ್ತೆಯಲ್ಲಿರುವ ರಾಯಲ್ ಮೀನಾಕ್ಷಿ ಮಾಲ್‌ಗೆ ಡಿಸೆಂಬರ್ 2010ರಲ್ಲಿ 'ಸಿ' ವಲಯದ ಅನುಭೋಗತಾ ಪತ್ರವನ್ನು ನೀಡಿರುವುದು ಪರಿಶೀಲನೆಯಿಂದ ತಿಳಿದುಬಂದಿತು. ಅನುಭೋಗತಾ ಪತ್ರದ ಅನುಸಾರ ಕಟ್ಟಡದ ಒಟ್ಟು ನಿರ್ಮಿತ ಪ್ರದೇಶವು 6,67,630 ಚದರ ಅಡಿಗಳಾಗಿದ್ದಿತು. ಇದು ಕೇಂದ್ರೀಕೃತ ವಾತಾನುಕೂಲಿತ ಪ್ರದೇಶ (ವರ್ಗ VIIIರ ಅಡಿಯಲ್ಲಿ ಮೇಲ್ಛಾವಣಿ ಪ್ರದೇಶವನ್ನು

ಒಳಗೊಂಡಂತೆ 3,14,942 ಚದರ ಅಡಿ), ಐದರಿಂದ ಏಳನೇ ಮಹಡಿಗಳಲ್ಲಿ ಏಳು ಮಲ್ಟಿಪ್ಲೆಕ್ಸ್ ಥಿಯೇಟರ್‌ಗಳು (ವರ್ಗ XI (ii)ರ ಅಡಿಯಲ್ಲಿ 1,33,344 ಚದರ ಅಡಿ) ಮತ್ತು ಪಾರ್ಕಿಂಗ್ ಪ್ರದೇಶವಾದ 2,19,344 ಚದರ ಅಡಿಗಳನ್ನು ಒಳಗೊಂಡಿತ್ತು.

ಅನುಭೋಗತಾ ಪತ್ರವನ್ನು ಡಿಸೆಂಬರ್ 2010ರಲ್ಲಿ ನೀಡಿದ್ದರಿಂದ 2010–11ರ ಎರಡನೆಯ ಅರ್ಧ ವರ್ಷಕ್ಕೆ ನಿರ್ಮಿತ ಕಟ್ಟಡದ ಮೇಲೆ ₹1.17 ಕೋಟಿ ಆಸ್ತಿ ತೆರಿಗೆಯನ್ನು ಪಾವತಿಸಬೇಕಿದ್ದಿತು. ಆದರೆ, ತೆರಿಗೆದಾರರು 2010–11ರ ಪೂರ್ಣ ವರ್ಷಕ್ಕೆ ಭೂಮಿಗೆ ಮಾತ್ರ ₹0.68 ಲಕ್ಷ ಆಸ್ತಿ ತೆರಿಗೆಯನ್ನು ಪಾವತಿಸಿದ್ದರು (ಏಪ್ರಿಲ್ 2010) ಎಂಬುದನ್ನು ಗಮನಿಸಲಾಯಿತು ಮತ್ತು ಬೊಮ್ಮನಹಳ್ಳಿಯ ಜಂಟಿ ಆಯುಕ್ತರು ಅದನ್ನು ₹0.88 ಲಕ್ಷಕ್ಕೆ ಪರಿಷ್ಕರಣೆ ಮಾಡಿದ್ದರು. ಇದು, ಡಿಸೆಂಬರ್ 2010ರಲ್ಲಿ ಪೂರ್ಣಗೊಂಡ ನಿರ್ಮಿತ ಕಟ್ಟಡದ ಮೇಲೆ ₹1.16 ಕೋಟಿ ಆಸ್ತಿ ತೆರಿಗೆಯನ್ನು ಪಾವತಿಸದಿರುವಲ್ಲಿ ಪರಿಣಮಿಸಿತು (ವಿವರಗಳನ್ನು **ಅನುಬಂಧ–4.2**ರಲ್ಲಿ ನೀಡಲಾಗಿದೆ).

(2) ಬಿಬಿಎಮ್‌ಪಿ ಆಸ್ತಿ ತೆರಿಗೆ ನಿಯಮಗಳು ಸಹ ಕೇಂದ್ರಿಕೃತ ವಾತಾನುಕೂಲಿತವನ್ನು (ವರ್ಗ VIII) ಅಥವಾ ಮಲ್ಟಿಪ್ಲೆಕ್ಸ್ ಥಿಯೇಟರ್‌ಗಳನ್ನು (ವರ್ಗ XI (ii)) ಹೊಂದಿರುವ ಕಟ್ಟಡದ ಸಂಪೂರ್ಣ ನಿರ್ಮಿತ ಪ್ರದೇಶಕ್ಕೆ ಅನ್ವಯವಾಗುವ ದರಗಳಲ್ಲಿ ತೆರಿಗೆಯನ್ನು ಲೆಕ್ಕ ಹಾಕಬೇಕು ಮತ್ತು ಸೇವಾ ಪ್ರದೇಶಕ್ಕೆ, ವಸತಿಯೇತರ ಆಸ್ತಿಯ ಇತರ ಆರು[14] ವರ್ಗಗಳಿಗೆ ಅನ್ವಯವಾಗುವ ದರಗಳಲ್ಲಿ ಅರ್ಧದಷ್ಟನ್ನು ಲೆಕ್ಕ ಹಾಕಲು ಯಾವುದೇ ಅವಕಾಶವಿರುವುದಿಲ್ಲ.

ಆದರೆ, ಬೊಮ್ಮನಹಳ್ಳಿ ವಲಯದ ಜಂಟಿ ಆಯುಕ್ತರು ಐದರಿಂದ ಏಳನೇ ಮಹಡಿಗಳಲ್ಲಿರುವ (ಮಲ್ಟಿಪ್ಲೆಕ್ಸ್ ಥಿಯೇಟರ್ ಪ್ರದೇಶ) 79,153 ಚದರ ಅಡಿ ಕಾರಿಡಾರ್ ಪ್ರದೇಶವನ್ನು ಮತ್ತು ಕೇಂದ್ರೀಕೃತ ವಾತಾನುಕೂಲ ಸೌಲಭ್ಯವಿರುವ 2,732 ಚದರ ಅಡಿ ಸೇವಾ ಪ್ರದೇಶವನ್ನು ಪ್ರತಿ ಚದರ ಅಡಿಗೆ ₹6 ರಂತೆ ತೆರಿಗೆಯನ್ನು ವಿಧಿಸಿದ್ದರು, ಆದರೆ ಅನ್ವಯವಾಗುವ ದರವು ಪ್ರತಿ ಚದರ ಅಡಿಗೆ ಅನುಕ್ರಮವಾಗಿ ₹20 ಮತ್ತು ₹12 ಆಗಿದ್ದಿತು. 81,885 ಚದರ ಅಡಿಗಳು (2,732 ಚದರ ಅಡಿ + 79,153 ಚದರ ಅಡಿ) ಕಾರಿಡಾರ್/ಸೇವಾ ಪ್ರದೇಶಕ್ಕೆ ಕಡಿಮೆ ದರದಲ್ಲಿ ತೆರಿಗೆಯನ್ನು ನಿರ್ಣಯಿಸಿದ್ದು ಬಿಬಿಎಮ್‌ಪಿ ತೆರಿಗೆ ನಿಯಮಗಳಿಗೆ ವಿರುದ್ಧವಾಗಿತ್ತು ಮತ್ತು ಹಾಗಾಗಿ ತೆರಿಗೆಯ ಕಡಿಮೆ ನಿರ್ಧರಣೆಯಲ್ಲಿ ಪರಿಣಮಿಸಿ ತತ್ಪರಿಣಾಮವಾಗಿ 2011–12ರಿಂದ 2017–18ರ ಅವಧಿಗೆ ₹5.56 ಕೋಟಿ ಆದಾಯದ ನಷ್ಟದಲ್ಲಿ ಪರಿಣಮಿಸಿತು (ವಿವರಗಳನ್ನು **ಅನುಬಂಧ–4.2**ರಲ್ಲಿ ನೀಡಲಾಗಿದೆ).

ಇದು ಕೇವಲ ಒಂದು ದೃಷ್ಟಾಂತ ಪ್ರಕರಣವಾಗಿರುವುದರಿಂದ ಮತ್ತಷ್ಟು ಆದಾಯ ನಷ್ಟದ ಯಾವುದೇ ಸಂಭವನೀಯತೆಯನ್ನು ತಡೆಯಲು ಇತರೆ ಭೂಮಿ ಮತ್ತು ಕಟ್ಟಡಗಳ ಸಂಬಂಧವಾಗಿಯೂ ಬಿಬಿಎಮ್‌ಪಿ ಈ ವಿಷಯವನ್ನು ಗಮನಿಸಬೇಕು.

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಹಾಗೂ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಗಳಿಂದ ಅನುಮತಿಗಳನ್ನು ನಂತರ (ಅನುಕ್ರಮವಾಗಿ ಜನವರಿ 2011 ಮತ್ತು ಜುಲೈ 2011) ಪಡೆದುಕೊಂಡಿದ್ದರಿಂದ ಆಸ್ತಿ ತೆರಿಗೆಯನ್ನು ವಿಧಿಸಲು ಅನುಭೋಗ ಪತ್ರದ ದಿನಾಂಕವನ್ನು ಪರಿಗಣಿಸಲಿಲ್ಲ ಎಂದು ರಾಜ್ಯ ಸರ್ಕಾರವು ಉತ್ತರಿಸಿತು (ನವೆಂಬರ್ 2018). 81,885 ಚದರ ಅಡಿಗಳ ಕಾರಿಡಾರ್ ಪ್ರದೇಶಕ್ಕೆ, ಅದನ್ನು ಬಾಡಿಗೆಗೆ ನೀಡಿಲ್ಲದಿರುವುದರಿಂದ ಮತ್ತು ಆ ಪ್ರದೇಶದಲ್ಲಿ ಯಾವುದೇ ವಾಣಿಜ್ಯ ಚಟುವಟಿಕೆ ಇಲ್ಲದಿರುವುದರಿಂದ, ಪ್ರತಿ ಚದರ ಅಡಿಗೆ ₹6ರಂತೆ ತೆರಿಗೆಯನ್ನು

[14] (1) ಹೊಟೆಲ್‌ಗಳು/ರೆಸ್ಟೋರೆಂಟ್‌ಗಳು–ವರ್ಗ IX; (2) ಸ್ಟಾರ್ ಹೊಟೆಲ್‌ಗಳು–ವರ್ಗ X; (3) ಸಿನಿಮಾ ಥಿಯೇಟರ್‌ಗಳು–ವರ್ಗ XI(i); (4) ಖಾಸಗಿ ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಮ್‌ಗಳು–ವರ್ಗ XII; (5) ಸಮುದಾಯ ಭವನಗಳು, ಕಲ್ಯಾಣ ಮಂಟಪಗಳು–ವರ್ಗ XIII; ಮತ್ತು ಕೈಗಾರಿಕಾ ಕಟ್ಟಡಗಳು–ವರ್ಗ XIV.

ಲೆಕ್ಕ ಹಾಕಲಾಯಿತು ಎಂದೂ ತಿಳಿಸಲಾಯಿತು. ಬಾಡಿಗೆ ಒಪ್ಪಂದದ ಅನ್ವಯ ಮಲ್ಟಿಪ್ಲೆಕ್ಸ್‌ನ ಪ್ರದೇಶವು 34,283 ಚದರ ಅಡಿಗಳಾಗಿತ್ತು ಮತ್ತು ಮಲ್ಟಿಪ್ಲೆಕ್ಸ್‌ಗೆ ಆಸ್ತಿ ತೆರಿಗೆಯನ್ನು ಲೆಕ್ಕ ಹಾಕುವಾಗ ಬಿಬಿಎಮ್‌ಪಿ 56,020 ಚದರ ಅಡಿಯನ್ನು ಪರಿಗಣಿಸಿತ್ತು ಎಂದೂ ಸಹ ತಿಳಿಸಲಾಯಿತು. ಉತ್ತರವನ್ನು ಈ ಕೆಳಗಿನ ಕಾರಣಗಳಿಂದ ಒಪ್ಪಲಾಗುವುದಿಲ್ಲ.

(ಎ) ನಿರ್ಮಿತ ಕಟ್ಟಡಕ್ಕೆ ಆಸ್ತಿ ತೆರಿಗೆಯನ್ನು ವಿಧಿಸುವುದಕ್ಕೆ ಕಟ್ಟಡವು ಪೂರ್ಣಗೊಂಡ ದಿನಾಂಕವನ್ನು (ಅಂದರೆ ಅನುಭೋಗತಾ ಪತ್ರದ ದಿನಾಂಕ) ಪರಿಗಣಿಸಬೇಕು.

(ಬಿ) ಮಲ್ಟಿಪ್ಲೆಕ್ಸ್ ಥಿಯೇಟರ್‌ಗಳ ಮತ್ತು ಕೇಂದ್ರೀಕೃತ ವಾತಾನುಕೂಲ ಸೌಲಭ್ಯವಿರುವ ಕಟ್ಟಡಗಳ ಸಂಬಂಧವಾಗಿ ಕಾರಿಡಾರ್ ಪ್ರದೇಶಗಳಿಗೆ ಅರ್ಧ ದರದಲ್ಲಿ ತೆರಿಗೆ ಲೆಕ್ಕ ಹಾಕಲು ಆಸ್ತಿ ತೆರಿಗೆ ನಿಯಮಗಳಲ್ಲಿ ಯಾವುದೇ ಅವಕಾಶವಿಲ್ಲ. ಅಲ್ಲದೆ, ಕಾರಿಡಾರ್ ಪ್ರದೇಶವನ್ನು ಬಾಡಿಗೆಗೆ ನೀಡಲಾಗಿಲ್ಲ ಎನ್ನುವ ವಾದವು ಅಪ್ರಸ್ತುತವಾಗಿದೆ ಏಕೆಂದರೆ ಕಟ್ಟಡವು ಕೇಂದ್ರೀಕೃತ ವಾತಾನುಕೂಲಿತವಾಗಿದೆ ಎಂಬ ವಾಸ್ತವಾಂಶವನ್ನು ಅದು ಬದಲಾಯಿಸುವುದಿಲ್ಲ; ಮತ್ತು

(ಸಿ) ಕಟ್ಟಡದ ನಿರ್ಮಿತ ಪ್ರದೇಶದ ಸಂಬಂಧವಾಗಿ ಬಿಬಿಎಮ್‌ಪಿ ದಾಖಲೆಗಳಲ್ಲಿ ಯಾವುದೇ ಸ್ಥಿರತೆ ಇರಲಿಲ್ಲ. ಅನುಭೋಗತಾ ಪತ್ರದ (ಡಿಸೆಂಬರ್ 2010) ಹಾಗೂ ಬಿಬಿಎಮ್‌ಪಿ ನಗರ ಯೋಜನಾ ಜಂಟಿ ನಿರ್ದೇಶಕರ ಟಿಪ್ಪಣಿಯ (ಮಾರ್ಚ್ 2017) ಅನ್ವಯ 1,33,344 ಚದರ ಅಡಿಗಳ ಒಟ್ಟು ನಿರ್ಮಿತ ಪ್ರದೇಶವಿದ್ದ ಐದು, ಆರು ಮತ್ತು ಏಳನೇ ಮಹಡಿಗಳಲ್ಲಿ ಏಳು ಮಲ್ಟಿಪ್ಲೆಕ್ಸ್ ಥಿಯೇಟರ್‌ಗಳಿದ್ದವು.

## 4.3 ಆದಾಯದ ನಷ್ಟ

**ಬೊಮ್ಮನಹಳ್ಳಿ ಬಿಬಿಎಮ್‌ಪಿ ಆರೋಗ್ಯ ವಿಭಾಗದ ಆರೋಗ್ಯ ಅಧಿಕಾರಿಗಳ ಕಛೇರಿಯಲ್ಲಿ ವಾಣಿಜ್ಯ ಪರವಾನಗಿಗಳನ್ನು ಮೋಸದಿಂದ ನೀಡಿರುವುದು ಮತ್ತು ಆನ್‌ಲೈನ್ ವಾಣಿಜ್ಯ ಪರವಾನಗಿ ವ್ಯವಸ್ಥೆಯನ್ನು ಕಾಲ್ಪನಿಕ ಸಂಖ್ಯೆಗಳೊಂದಿಗೆ ಬದಲಾಯಿಸಿರುವುದು ₹3.75 ಕೋಟಿ ಆದಾಯದ ನಷ್ಟದಲ್ಲಿ ಪರಿಣಮಿಸಿತು. ಅಲ್ಲದೆ, ₹22.44 ಲಕ್ಷ ಮೊತ್ತದ 354 ಬ್ಯಾಂಕರ್ಸ್ ಚೆಕ್ಕುಗಳನ್ನು/ಡಿಮ್ಯಾಂಡ್ ಡ್ರಾಫ್ಟ್‌ಗಳನ್ನು ಬ್ಯಾಂಕ್ ಖಾತೆಗೆ ಜಮೆ ಮಾಡದೆ ಸಂಹಿತೆಯ ನಿಬಂಧನೆಗಳನ್ನು ಅನುಪಾಲಿಸಲು ಅರೋಗ್ಯಾಧಿಕಾರಿಗಳು ವಿಫಲರಾದರು.**

ಯಾವುದೇ ಸರ್ಕಾರಿ ನೌಕರನು ತನ್ನ ಅಧಿಕೃತ ಸಾಮರ್ಥ್ಯದಲ್ಲಿ ಮಾಡುವ ಎಲ್ಲ ವಹಿವಾಟುಗಳನ್ನು ಯಾವುದೇ ಮೀಸಲಾತಿಯಿಲ್ಲದೇ ಲೆಕ್ಕಕ್ಕೆ ತೆಗೆದುಕೊಳ್ಳಬೇಕು ಮತ್ತು ಸ್ವೀಕರಿಸಿದ ಎಲ್ಲಾ ಹಣವನ್ನು ಅನಗತ್ಯ ವಿಳಂಬವಿಲ್ಲದೇ ಎರಡು ದಿನಗಳೊಳಗೆ ಪೂರ್ಣವಾಗಿ ಸರ್ಕಾರಿ ಖಜಾನೆಗೆ, ಸೂಕ್ತ ಖಾತೆಗೆ ಜಮೆ ಮಾಡಬೇಕು ಎಂದು ಕರ್ನಾಟಕ ಹಣಕಾಸು ಸಂಹಿತೆ, 1958ರ ಸಾಮಾನ್ಯ ತತ್ವಗಳು ಮತ್ತು ನಿಯಮಗಳ ಅಧ್ಯಾಯ 2ರ ಅನುಚ್ಛೇದ 4(ಎ) ನಿಗದಿಪಡಿಸುತ್ತದೆ. ಅಸಾಧಾರಣ ಸಂದರ್ಭಗಳಲ್ಲಿ ಎರಡು ದಿನಗಳ ಕಾಲಮಿತಿಯನ್ನು ಅನುಸರಿಸಲಾಗದಿದ್ದರೆ ಇಲಾಖಾ ಮುಖ್ಯಸ್ಥರ ನಿರ್ದಿಷ್ಟ ಆದೇಶದೊಂದಿಗೆ ಆ ಸಮಯವನ್ನು ಏಳು ದಿನಗಳವರೆಗೆ ವಿಸ್ತರಿಸಬಹುದು. ಸಮಯದ ಮಿತಿಯನ್ನು ಇಲಾಖಾ ಮುಖ್ಯಸ್ಥರ ನಿರ್ದಿಷ್ಟ ಆದೇಶದಿಂದ ವಿಸ್ತರಿಸದಿದ್ದರೆ ಎರಡು ದಿನಗಳ ಕಾಲಮಿತಿಯು ಅನ್ವಯಿಸುತ್ತದೆ. ಅಲ್ಲದೆ, ಅನುಚ್ಛೇದ 4(ಬಿ)(ii)ರ ಅನ್ವಯ ಎಲ್ಲ ಚೆಕ್ಕುಗಳು ಮತ್ತು ಡ್ರಾಫ್ಟ್‌ಗಳನ್ನು ನಗದು ಎಂದು ಪರಿಗಣಿಸಬೇಕು ಮತ್ತು ಬೇರೆ ನಗದು ವಹಿವಾಟುಗಳಂತೆ ನಗದು ಪುಸ್ತಕದಲ್ಲಿ ನಮೂದಿಸಬೇಕು.

ಅರ್ಜಿಗಳೊಂದಿಗೆ ಅಗತ್ಯ ಶುಲ್ಕದ ಸ್ವೀಕೃತಿಯ ನಂತರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಮ್‌ಪಿ) ವಾಣಿಜ್ಯ ಪರವಾನಗಿಗಳನ್ನು ನೀಡುತ್ತದೆ. ವ್ಯಾಪಾರಿಯು ಹೊಸ/ನವೀಕೃತ ವಾಣಿಜ್ಯ ಪರವಾನಗಿ ಪತ್ರವನ್ನು ಸಂಬಂಧಪಟ್ಟ ಆರೋಗ್ಯಾಧಿಕಾರಿಗಳ ಕಛೇರಿಯಿಂದ ಪಡೆದುಕೊಳ್ಳುತ್ತಾನೆ ಮತ್ತು

ವಾಣಿಜ್ಯ ಪರವಾನಗಿ ಶುಲ್ಕವನ್ನು ಅದೇ ಉದ್ದೇಶಕ್ಕಾಗಿ ಪ್ರತ್ಯೇಕವಾಗಿ ತೆರೆದಿರುವ ಬ್ಯಾಂಕ್ ಖಾತೆಗಳಲ್ಲಿ[15] ಜಮೆ ಮಾಡಬೇಕು.

ವೈದ್ಯಾಧಿಕಾರಿಗಳು, ಆರೋಗ್ಯ ಇಲಾಖೆ (ಎಮ್‌ಒಹೆಚ್), ಬೊಮ್ಮನಹಳ್ಳಿ ಮತ್ತು ಬೆಂಗಳೂರು (ದಕ್ಷಿಣ), (ಬಿಬಿಎಮ್‌ಪಿ) ಇವರ 2016–17ರ ಅವಧಿಯ ದಾಖಲೆಗಳ ಲೆಕ್ಕಪರಿಶೋಧನೆಯು (ಮಾರ್ಚ್ 2018), ಪರೀಕ್ಷಾ–ತನಿಖೆ ನಡೆಸಿದ ತಿಂಗಳುಗಳಿಗೆ (ಏಪ್ರಿಲ್ 2014 ಮತ್ತು ಅಕ್ಟೋಬರ್ 2015) ₹1.77 ಲಕ್ಷ ಮೊತ್ತದ 34 ಬ್ಯಾಂಕರ್ಸ್ ಚೆಕ್‌ಗಳು/ಡಿಮ್ಯಾಂಡ್ ಡ್ರಾಫ್ಟ್‌ಗಳು ಬ್ಯಾಂಕ್ ಖಾತೆಗಳೊಂದಿಗೆ ಪತ್ತೆಯಾಗದಿರುವುದನ್ನು ತೋರಿಸಿತು. ಆದುದರಿಂದ ಲೆಕ್ಕಪರಿಶೋಧನೆಯು ಬಿಬಿಎಮ್‌ಪಿಯ ಮಾಹಿತಿ ತಂತ್ರಜ್ಞಾನ (ಐಟಿ) ವಿಭಾಗದಿಂದ ಆನ್‌ಲೈನ್ ವಾಣಿಜ್ಯ ಪರವಾನಗಿ ವ್ಯವಸ್ಥೆಯ ಡಾಟಾ ಡಂಪ್ ಅನ್ನು ಪಡೆದುಕೊಂಡಿತು (ಜುಲೈ 2018). ಬಿಬಿಎಮ್‌ಪಿಯ ಐಟಿ ಸಲಹೆಗಾರರು ಡಾಟಾ ಡಂಪ್ ಪೂರ್ಣವಾಗಿದೆ, ಸ್ಥಿರವಾಗಿದೆ ಮತ್ತು ಸಂಪೂರ್ಣ ದತ್ತಾಂಶವನ್ನು ಒಳಗೊಂಡಿದೆ ಹಾಗೂ ಮೂಲ ದತ್ತಾಂಶದ ಅಳಿಸುವಿಕೆ, ತಿದ್ದುವಿಕೆ ಯಾವುದೂ ಆಗಲಿಲ್ಲ ಎಂದು ಪ್ರಮಾಣೀಕರಿಸಿದ್ದರು (ಜುಲೈ 2018). ಲೆಕ್ಕಪರಿಶೋಧನೆಯು ವ್ಯಾಪಾರ ಪರವಾನಗಿ ಶುಲ್ಕದ ಜಮೆಯನ್ನು ಪರಿಶೀಲಿಸಲು ಐಡಿಬಿಐ ಬ್ಯಾಂಕ್ ಮತ್ತು ಕೆನರಾ ಬ್ಯಾಂಕ್‌ಗಳಿಂದ ಬ್ಯಾಂಕ್ ಪಾಸ್‌ಶೀಟ್‌ಗಳನ್ನೂ ಸಹ ಪಡೆದುಕೊಂಡಿತ್ತು (ಅಕ್ಟೋಬರ್ 2018).

ಡಾಟಾ ಡಂಪ್‌ನ ಅನ್ವಯ, ಎಮ್‌ಒಹೆಚ್, ಬೊಮ್ಮನಹಳ್ಳಿ ಮತ್ತು ಬೆಂಗಳೂರು (ದಕ್ಷಿಣ) 2014–15ರಿಂದ 2017–18ರ ಅವಧಿಯಲ್ಲಿ 10,598 ವಾಣಿಜ್ಯ ಪರವಾನಗಿಗಳನ್ನು ನೀಡಿತ್ತು ಮತ್ತು ₹13.03 ಕೋಟಿ ಸಂಗ್ರಹಣೆಯನ್ನು ತೋರಿಸಿತ್ತು. ದತ್ತಾಂಶದ ವಿಶ್ಲೇಷಣೆಯು 525 ವಾಣಿಜ್ಯ ಪರವಾನಗಿಗಳಲ್ಲಿ ಡಿಮ್ಯಾಂಡ್ ಡ್ರಾಫ್ಟ್‌ಗಳ ಸಂಖ್ಯೆಯನ್ನು ಖಾಲಿ ಬಿಟ್ಟಿರುವುದನ್ನು ತೋರಿಸಿತು. ತತ್ಪರಿಣಾಮವಾಗಿ ಲೆಕ್ಕಪರಿಶೋಧನೆಯು ಬ್ಯಾಂಕ್ ಖಾತೆಗಳಿಗೆ ₹27.81 ಲಕ್ಷ ಮೊತ್ತದ ಈ ಚೆಕ್‌ಗಳ ಜಮೆಯನ್ನು ಪರಿಶೀಲಿಸಲಾಗಲಿಲ್ಲ. ದತ್ತಾಂಶದ ಮತ್ತಷ್ಟು ವಿಶ್ಲೇಷಣೆಯು ಕೆಳಗಿನವುಗಳನ್ನು ತೋರಿಸಿತು.

(1) ಒಂದೇ ಡಿಮ್ಯಾಂಡ್ ಡ್ರಾಫ್ಟ್ ಸಂಖ್ಯೆಯನ್ನು ಎರಡು ಅಥವಾ ಹೆಚ್ಚಿನ ಬಾರಿ ನಮೂದಿಸಿ (ಒಂದು ಪ್ರಕರಣದಲ್ಲಿ 45 ಬಾರಿ) 881 ವಾಣಿಜ್ಯ ಪರವಾನಗಿಗಳನ್ನು ನೀಡಲಾಗಿತ್ತು ಮತ್ತು ₹98.17 ಲಕ್ಷ ಸಂಗ್ರಹಣೆಯನ್ನು ತೋರಿಸಲಾಗಿತ್ತು. ಇದರಲ್ಲಿ 270 ವ್ಯಾಪಾರ ಪರವಾನಗಿಗಳಿಗೆ ಸಂಬಂಧಿಸಿದ ₹39.72 ಲಕ್ಷದ ಮೊತ್ತವನ್ನು ಮಾತ್ರ ಪತ್ತೆ ಮಾಡಲಾಯಿತು ಮತ್ತು ಉಳಿದ 611 ವಾಣಿಜ್ಯ ಪರವಾನಗಿಗಳಿಗೆ ಸಂಬಂಧಿಸಿದ ₹58.45 ಲಕ್ಷವನ್ನು ಬ್ಯಾಂಕ್ ಖಾತೆಗಳಿಂದ ಪತ್ತೆ ಮಾಡಲಾಗಲಿಲ್ಲ. ವಿವರಗಳನ್ನು **ಅನುಬಂಧ–4.3**ರಲ್ಲಿ ನೀಡಲಾಗಿದೆ.

(2) ಪುನರಾವರ್ತಿಸದಿದ್ದ 2,071 ಡಿಮ್ಯಾಂಡ್ ಡ್ರಾಫ್ಟ್‌ಗಳಿಗೆ ಸಂಬಂಧಿಸಿದ ₹3.17 ಕೋಟಿ ಮೊತ್ತವನ್ನು ಸಹ ಬ್ಯಾಂಕ್ ಖಾತೆಗಳಿಗೆ ಪತ್ತೆ ಮಾಡಲಾಗಲಿಲ್ಲ.

ವೀಕ್ಷಣೆಯನ್ನು ದೃಢೀಕರಿಸಲು ಲೆಕ್ಕಪರಿಶೋಧನೆಯು ಸಂಬಂಧಿತ ಬ್ಯಾಂಕ್‌ಗಳಿಂದ ಈ ಡಿಮ್ಯಾಂಡ್ ಡ್ರಾಫ್ಟ್‌ಗಳ ಪ್ರಾಮಾಣಿಕತೆಯನ್ನು ತಿಳಿದುಕೊಂಡಿತು (ಸೆಪ್ಟೆಂಬರ್ 2018). ಎರಡು ಬ್ಯಾಂಕ್‌ಗಳು (ಭಾರತೀಯ ಸ್ಟೇಟ್ ಬ್ಯಾಂಕ್–ಪದ್ಮನಾಭನಗರ ಶಾಖೆ ಮತ್ತು ಕೆನರಾ ಬ್ಯಾಂಕ್–ಕೆಆರ್ ಪುರಮ್ ಶಾಖೆ) 451 ಡಿಮ್ಯಾಂಡ್ ಡ್ರಾಫ್ಟ್‌ಗಳಲ್ಲಿ[16] ಯಾವುದನ್ನೂ ಸಹ ತಾವು ನೀಡಿಲ್ಲ ಎಂದು ಖಚಿತಪಡಿಸಿದರು (ಸೆಪ್ಟಂಬರ್ ಮತ್ತು ಅಕ್ಟೋಬರ್ 2018). ಇತರೆ ಬ್ಯಾಂಕ್‌ಗಳಿಂದ ಪ್ರತಿಕ್ರಿಯೆಯನ್ನು ನಿರೀಕ್ಷಿಸಲಾಗಿದೆ (ಜುಲೈ 2019).

---

[15] ಐಡಿಬಿಐ ಬ್ಯಾಂಕ್ ಖಾತೆ ಸಂಖ್ಯೆ.0008104000436250 (15.03.2016ರಂದು ಮುಕ್ತಾಯಗೊಳಿಸಲಾಯಿತು) ಮತ್ತು ಕೆನರಾ ಬ್ಯಾಂಕ್ ಖಾತೆ ಸಂಖ್ಯೆ.11 (9.10.2015ರಂದು ತೆರೆಯಲಾಗಿದೆ).

[16] ಲೆಕ್ಕಪರಿಶೋಧನೆಯು, 2682 ಡಿಮ್ಯಾಂಡ್ ಡ್ರಾಫ್ಟ್‌ಗಳಲ್ಲಿ, ಭಾರತೀಯ ಸ್ಟೇಟ್ ಬ್ಯಾಂಕ್–ಪದ್ಮನಾಭನಗರ ಶಾಖೆಗೆ ಸಂಬಂಧಪಟ್ಟ 260 ಡಿಮ್ಯಾಂಡ್ ಡ್ರಾಫ್ಟ್‌ಗಳ ಹಾಗೂ ಕೆನರಾ ಬ್ಯಾಂಕ್–ಕೆಆರ್ ಪುರಮ್ ಶಾಖೆಗೆ ಸಂಬಂದಪಟ್ಟ 191 ಡಿಮ್ಯಾಂಡ್ ಡ್ರಾಫ್ಟ್‌ಗಳ ಪಟ್ಟಿಯನ್ನು ದೃಡೀಕರಿಸಲು ಒದಗಿಸಿತು.

ಹೀಗೆ, 10,073 ಪರಿಶೀಲಿಸಬಹುದಾದ ಪ್ರಕರಣಗಳಲ್ಲಿ ಲೆಕ್ಕಪರಿಶೋಧನೆಯು ₹3.75 ಕೋಟಿ[17] ಮೊತ್ತದ 2,682 ಡಿಮ್ಯಾಂಡ್ ಡ್ರಾಫ್ಟ್‌ಗಳನ್ನು ಬ್ಯಾಂಕ್ ಖಾತೆಗಳೊಂದಿಗೆ ಪತ್ತೆ ಹಚ್ಚಲಾಗಲಿಲ್ಲ. ವಾಣಿಜ್ಯ ಪರವಾನಗಿಗಳನ್ನು ನೀಡಲು ಎಮ್‌ಒಹೆಚ್ ಕಾಲ್ಪನಿಕ ಡಿಮ್ಯಾಂಡ್ ಡ್ರಾಫ್ಟ್ ಸಂಖ್ಯೆಗಳನ್ನು ನಮೂದಿಸಿತ್ತು ಎನ್ನುವುದು ಮೇಲಿನಿಂದ ಸ್ಪಷ್ಟವಾಗುತ್ತದೆ. ಇದು ಹಣದ ದುರುಪಯೋಗವನ್ನು ಅನುಕೂಲಿಸಿತಲ್ಲದೇ ₹3.75 ಕೋಟಿ ಆದಾಯದ ನಷ್ಟದಲ್ಲಿಯೂ ಪರಿಣಮಿಸಿತು.

2008–09ರಿಂದ 2016–17ರ ಅವಧಿಯಲ್ಲಿ ವಾಣಿಜ್ಯ ಪರವಾನಗಿ ಶುಲ್ಕದ ಕಡೆಗೆ ಪಡೆದ ₹22.44 ಲಕ್ಷ ಮೊತ್ತದ 354 ಡಿಮ್ಯಾಂಡ್ ಡ್ರಾಫ್ಟ್‌ಗಳನ್ನು ಬ್ಯಾಂಕ್ ಖಾತೆಗಳಿಗೆ ಜಮೆ ಮಾಡಿರಲಿಲ್ಲ ಮತ್ತು ಸೆಪ್ಟಂಬರ್ 2018ರಲ್ಲಿದ್ದಂತೆ ಅವುಗಳು ಎಮ್‌ಒಹೆಚ್ ನಲ್ಲಿಯೇ ಉಳಿದುಕೊಂಡಿದ್ದವು. ಡಿಮ್ಯಾಂಡ್ ಡ್ರಾಫ್ಟ್‌ಗಳನ್ನು ಬ್ಯಾಂಕ್ ಖಾತೆಗಳಿಗೆ ಜಮೆ ಮಾಡದಿರಲು ಎಮ್‌ಒಹೆಚ್ ಯಾವುದೇ ಕಾರಣಗಳನ್ನು ನೀಡಲಿಲ್ಲ. ಡಿಮ್ಯಾಂಡ್ ಡ್ರಾಫ್ಟ್‌ಗಳನ್ನು ಅನಧಿಕೃತವಾಗಿ ಉಳಿಸಿಕೊಂಡಿದ್ದು ಸಂಹಿತೆಯ ನಿಬಂಧನೆಗಳಿಗೆ ವಿರುದ್ಧವಾಗಿತ್ತು ಮತ್ತು ₹3.81 ಲಕ್ಷ[18] ಸಂಭವನೀಯ ಬಡ್ಡಿ ಆದಾಯದ ನಷ್ಟದಲ್ಲಿ ಪರಿಣಮಿಸಿತು. ಒಂದು ವೇಳೆ ಎಮ್‌ಒಹೆಚ್, ಬೊಮ್ಮನಹಳ್ಳಿ ಮತ್ತು ಬೆಂಗಳೂರು (ದಕ್ಷಿಣ) 354 ಡಿಮ್ಯಾಂಡ್ ಡ್ರಾಫ್ಟ್‌ಗಳನ್ನು ಮರುಮೌಲ್ಯಮಾಪನ ಮಾಡಿ ಬ್ಯಾಂಕ್ ಖಾತೆಗೆ ಜಮೆ ಮಾಡದಿದ್ದಲ್ಲಿ ₹22.44 ಲಕ್ಷದ ಮತ್ತಷ್ಟು ಆದಾಯದ ನಷ್ಟದ ಸಂಭವನೀಯತೆಯನ್ನು ತಳ್ಳಿಹಾಕುವಂತಿಲ್ಲ. ಎಮ್‌ಒಹೆಚ್, ಬೊಮ್ಮನಹಳ್ಳಿ ಮತ್ತು ಬೆಂಗಳೂರು (ದಕ್ಷಿಣ) ಡಿಮ್ಯಾಂಡ್ ಡ್ರಾಫ್ಟ್‌ಗಳ ಸ್ವೀಕೃತಿ ಮತ್ತು ಬ್ಯಾಂಕ್ ಖಾತೆಗಳಿಗೆ ಅವುಗಳ ಜಮೆಯನ್ನು ದಾಖಲಿಸಲು ನಗದು ಪುಸ್ತಕ, ಜಮೆ ರಿಜಿಸ್ಟರ್ ಮತ್ತು ಸಂಬಂಧಿಸಿದ ರಿಜಿಸ್ಟರ್‌ಗಳನ್ನು ನಿರ್ವಹಿಸಿರಲಿಲ್ಲ. ಈ ಮೂಲ ದಾಖಲೆಗಳ ಅನುಪಸ್ಥಿತಿಯಲ್ಲಿ ಕಛೇರಿಯು ತನ್ನ ದಾಖಲೆಗಳಲ್ಲಿ ಜಮೆಯಾಗಿದೆ ಎಂದು ತೋರಿಸಲ್ಪಟ್ಟಿದ್ದ ಮೊತ್ತವು ಸಂಬಂಧಪಟ್ಟ ಬ್ಯಾಂಕ್ ಖಾತೆಗಳಿಗೆ ವಾಸ್ತವವಾಗಿ ಜಮೆಯಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಲಿಲ್ಲ.

ಹೀಗೆ, ಶಾಸನಬದ್ಧ ದಾಖಲೆಗಳನ್ನು ನಿರ್ವಹಿಸದಿರುವುದರ ಜೊತೆಗೆ ಡಿಮ್ಯಾಂಡ್ ಡ್ರಾಫ್ಟ್‌ಗಳನ್ನು ಅಕ್ರಮವಾಗಿ ಉಳಿಸಿಕೊಂಡಿರುವುದು ಹಾಗೂ ನಮೂದುಗಳನ್ನು ತಿದ್ದುಪಡಿ ಮಾಡಿರುವುದು ಹಣದ ದುರುಪಯೋಗಕ್ಕೆ ಕಾರಣವಾಯಿತು ಮತ್ತು ತತ್ಪರಿಣಾಮವಾಗಿ ₹3.75 ಕೋಟಿಗಳ ಆದಾಯದ ನಷ್ಟದಲ್ಲಿ ಪರಿಣಮಿಸಿತು. ಇವುಗಳು ಕೇವಲ ದೃಷ್ಟಾಂತ ಪ್ರಕರಣಗಳಾಗಿದ್ದು ಈ ವಿಷಯದಲ್ಲಿ ಜವಾಬ್ದಾರಿಯನ್ನು ನಿಗದಿಪಡಿಸಲು ಮತ್ತು ಸೂಕ್ತ ಸರಿಪಡಿಸುವ ಕ್ರಮಗಳನ್ನು ತೆಗೆದುಕೊಳ್ಳಲು ಸರ್ಕಾರದಿಂದ ವಿವರವಾದ ತನಿಖೆಯ ಅವಶ್ಯಕತೆಯಿದೆ.

ಇಲಾಖಾ ವಿಚಾರಣೆಯನ್ನು ನಡೆಸಲು ಮತ್ತು ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮಗಳನ್ನು ಕೈಗೊಳ್ಳಲು ಅವಶ್ಯಕ ಕ್ರಮವನ್ನು ತೆಗೆದುಕೊಳ್ಳಲಾಗುತ್ತದೆ ಹಾಗೂ ವಿಚಾರಣೆಯು ಪೂರ್ಣಗೊಂಡ ನಂತರ ಸೂಕ್ತ ಉತ್ತರವನ್ನು ನೀಡಲಾಗುವುದು ಎಂದು ರಾಜ್ಯ ಸರ್ಕಾರವು ತಿಳಿಸಿತು (ನವೆಂಬರ್ 2018).

ಸಂಬಂಧಪಟ್ಟ ನೌಕರರನ್ನು ಅಮಾನತ್ತುಗೊಳಿಸಲಾಗಿದೆ ಮತ್ತು ಅವರುಗಳ ಉತ್ತರವನ್ನು ಒಪ್ಪಿಕೊಂಡಿಲ್ಲ ಎಂದು ಬಿಬಿಎಮ್‌ಪಿ ತಿಳಿಸಿತು (ಆಗಸ್ಟ್ 2019). ಈ ಪ್ರಕರಣದಲ್ಲಿ ಉಂಟಾಗಿರುವ ನಷ್ಟದ ಬಗ್ಗೆ ವಿವರವಾಗಿ ಪರಿಶೀಲಿಸಲು ವಿಶೇಷ ಆಯುಕ್ತರ (ಹಣಕಾಸು) ನೇತೃತ್ವದಲ್ಲಿ ಸಮಿತಿಯೊಂದನ್ನು ರಚಿಸಲಾಗುತ್ತಿದೆ ಮತ್ತು ಕಾನೂನಿನ ಅನ್ವಯ ಸಂಬಂಧಪಟ್ಟವರ ವಿರುದ್ಧ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದೂ ಸಹ ತಿಳಿಸಿತು.

---

17 ₹58.45 ಲಕ್ಷ (611 ಪ್ರಕರಣಗಳು) + ₹3.17 ಕೋಟಿ (2,071 ಪ್ರಕರಣಗಳು).

18 ಉಳಿತಾಯ ಖಾತೆಯ ಬಡ್ಡಿ ದರದಂತೆ, ಜಮೆ ಆಗದಿರುವ ಡಿಮ್ಯಾಂಡ್ ಡ್ರಾಫ್ಟ್‌ಗಳ ಮೊತ್ತದ ಮೇಲೆ ಶೇಕಡಾ 4ರ ರಂತೆ ಲೆಕ್ಕ.

## 4.4 ಒಪ್ಪಂದದ ಬೇಡಿಕೆಯ ಪರಿವರ್ತನೆ/ಮಾರ್ಪಾಟು ಮಾಡದಿದ್ದುದರಿಂದ ಹಾಗೂ ವಿದ್ಯುತ್ ಅಂಶದ ನಿರ್ವಹಣೆ ಮಾಡದಿದ್ದುದರಿಂದಾದ ತಪ್ಪಿಸಬಹುದಾಗಿದ್ದ ಪಾವತಿ

**ಕಲಬುರಗಿ ಮಹಾನಗರ ಪಾಲಿಕೆ, ರಾಮನಗರ ಪುರಸಭೆ ಮತ್ತು ಹರಪನಹಳ್ಳಿ, ಕಾರ್ಕಳ ಹಾಗೂ ಮಳವಳ್ಳಿ ಪಟ್ಟಣ ಪಂಚಾಯತಿಗಳು ಒಪ್ಪಂದದ ಬೇಡಿಕೆಯನ್ನು ಬಳಕೆಗೆ ಅನುಗುಣವಾಗಿ ಮಾರ್ಪಾಟು ಮಾಡಲು ಕ್ರಮ ಕೈಗೊಳ್ಳದಿರುವುದು ಹಾಗೂ ವಿದ್ಯುತ್ ಅಂಶವನ್ನು ನಿಗದಿತ ಮಟ್ಟದಲ್ಲಿ ನಿರ್ವಹಿಸದಿರುವುದು 2015–16ರಿಂದ 2017–18ರ ಅವಧಿಯಲ್ಲಿ ₹94.93 ಲಕ್ಷ ತಪ್ಪಿಸಬಹುದಾಗಿದ್ದ ಪಾವತಿಯಲ್ಲಿ ಪರಿಣಮಿಸಿತು.**

ಕರ್ನಾಟಕ ವಿದ್ಯುತ್ ಸುಧಾರಣಾ ಕಾಯಿದೆ, 1999 ಮತ್ತು 2015–16ರಿಂದ 2017–18ರ ಅವಧಿಯಲ್ಲಿ ಜಾರಿಯಲ್ಲಿದ್ದ ವಿದ್ಯುತ್ ಸರಬರಾಜಿನ ಶುಲ್ಕವು ಅಧಿಕ ಒತ್ತಡ[19] (ಹೈ ಟೆನ್ಷನ್) (ಹೆಚ್‌ಟಿ) ತಂತಿಗಳ ಬಿಲ್ಲಿಂಗ್ ಬೇಡಿಕೆಯು ಆ ತಿಂಗಳ ಅವಧಿಯಲ್ಲಿ ದಾಖಲಾಗಿರುವ ಗರಿಷ್ಠ ಬೇಡಿಕೆಯಾಗಿರುತ್ತದೆ ಅಥವಾ ಒಪ್ಪಂದದ ಬೇಡಿಕೆಯ (ಸಿಡಿ) ಶೇಕಡಾ 75ರಷ್ಟು, ಇವೆರಡರಲ್ಲಿ ಯಾವುದು ಹೆಚ್ಚೋ, ಅದಾಗಿರುತ್ತದೆ ಎಂದು ನಿಗದಿಪಡಿಸಿತ್ತು. ಯಾವುದೇ ಸಮಯದಲ್ಲಿ ಗರಿಷ್ಠ ಬೇಡಿಕೆಯು ಒಪ್ಪಂದದ ಬೇಡಿಕೆ ಅಥವಾ ಆಯ್ಕೆ ಮಾಡಿದ ಬೇಡಿಕೆ ಅಥವಾ ನಿರ್ಬಂಧದ ಅವಧಿಯಲ್ಲಿ ಅರ್ಹತಾ ಬೇಡಿಕೆಗಿಂತ ಅಧಿಕವಾಗಿದ್ದರೆ, ವಿದ್ಯುತ್ ಅಧಿನಿಯಮ 2003ರ ಪರಿಚ್ಛೇದ 126(6)ರ ಅನ್ವಯ ತಡೆಗಟ್ಟುವ ಶುಲ್ಕದಂತೆ ಗ್ರಾಹಕರು ಹೆಚ್ಚುವರಿ ಬೇಡಿಕೆಯ ಪ್ರಮಾಣಕ್ಕೆ ಪ್ರತಿ ತಿಂಗಳಿಗೆ ಪ್ರತಿ ಕಿಲೋ ವೋಲ್ಟ್ ಆಂಪ್ಸ್‌ಗೆ (ಕೆವಿಎ) ಸಾಮಾನ್ಯ ದರಕ್ಕಿಂತ ಎರಡುಪಟ್ಟು ಪಾವತಿಸಬೇಕು. 'ಕರ್ನಾಟಕ ರಾಜ್ಯದಲ್ಲಿ ವಿತರಣಾ ಪರವಾನಗಿದಾರರ ವಿದ್ಯುತ್ ಸರಬರಾಜಿನ ಷರತ್ತುಗಳ' ಕಲಮು 34.01 ಮತ್ತು 34.02ರ ಅನ್ವಯ ಹೆಚ್‌ಟಿ ಗ್ರಾಹಕರು ತನ್ನ ಒಪ್ಪಂದದ ಬೇಡಿಕೆಯನ್ನು ಹೆಚ್ಚಿಸಲು ಅಥವಾ ಕಡಿಮೆ ಮಾಡಿಸಲು ಅರ್ಹನಾಗಿರುತ್ತಾನೆ. ಅಲ್ಲದೆ, ಶುಲ್ಕ ನೀತಿಯ ಅನ್ವಯ ಹೆಚ್‌ಟಿ ಗ್ರಾಹಕರು 0.90 ಗಿಂತ ಕಡಿಮೆಯಿರದಂತೆ ಸರಾಸರಿ ವಿದ್ಯುತ್ ಅಂಶವನ್ನು (ಪಿಎಫ್) [20] ನಿರ್ವಹಣೆ ಮಾಡಿರಬೇಕು. ಈ ಉದ್ದೇಶಕ್ಕಾಗಿ ಹೆಚ್‌ಟಿ ಗ್ರಾಹಕರು ತಮ್ಮ ಅನುಷ್ಠಾನದಲ್ಲಿ ಸೂಕ್ತ ಸಾಮರ್ಥ್ಯದ ಪವರ್ ಕೆಪಾಸಿಟರ್ ಅನ್ನು (ವಿದ್ಯುತ್ ಅಂಶ ಸರಿಪಡಿಕೆ ಉಪಕರಣ) ಅಳವಡಿಸಿಕೊಳ್ಳುವ ಅವಶ್ಯಕತೆಯಿದೆ. ಒಂದು ವೇಳೆ ದಾಖಲಿಸಿದ ವಿದ್ಯುತ್ ಅಂಶ 0.90 ಲ್ಯಾಗ್‌ಗಿಂತ ಕಡಿಮೆಯಿದ್ದರೆ, 0.90 ಲ್ಯಾಗ್‌ಗಿಂತ ಕೆಳಗಿನ ಪ್ರತಿ 0.01 ವಿದ್ಯುತ್ ಅಂಶಕ್ಕೆ, ಬಳಸಿದ ವಿದ್ಯುತ್‌ನ ಪ್ರತಿ ಯೂನಿಟ್‌ಗೆ ಮೂರು ಪೈಸೆಯಂತೆ ಮೇಲ್ತೆರಿಗೆಯನ್ನು (ದಂಡ) ವಿಧಿಸಲಾಗುತ್ತದೆ.

ಮಾರ್ಚ್ 2017ಕ್ಕೆ ಕೊನೆಗೊಂಡ ವರ್ಷದ ಸ್ಥಳೀಯ ಸಂಸ್ಥೆಗಳ ಮೇಲಿನ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿಯ ಕಂಡಿಕೆ 4.6ರಲ್ಲಿ ಒಪ್ಪಂದದ ಬೇಡಿಕೆಯನ್ನು ಕಡಿತಗೊಳಿಸುವ ಹಾಗೂ ನಿಗದಿತ ಮಟ್ಟದಲ್ಲಿ ವಿದ್ಯುತ್ ಅಂಶವನ್ನು ನಿರ್ವಹಿಸುವಲ್ಲಿ ಶಿವಮೊಗ್ಗ ನಗರಪಾಲಿಕೆಯ ವಿಫಲತೆಯು ₹46.32 ಲಕ್ಷ ತಪ್ಪಿಸಬಹುದಾಗಿದ್ದ ಪಾವತಿಯಲ್ಲಿ ಪರಿಣಮಿಸಿದ ಬಗ್ಗೆ ಉಲ್ಲೇಖ ಮಾಡಲಾಗಿತ್ತು. ಈ ಕಂಡಿಕೆಯನ್ನು ಸ್ಥಳೀಯ ಸಂಸ್ಥೆಗಳು ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಮೇಲಿನ ಸಮಿತಿಯು ಇನ್ನೂ ಚರ್ಚಿಸಬೇಕಿದೆ (ಜನವರಿ 2019).

2015–16ರಿಂದ 2017–18ರ ಅವಧಿಗೆ ಐದು[21] ನಗರ ಸ್ಥಳೀಯ ಸಂಸ್ಥೆಗಳ ವಿದ್ಯುತ್ ಬಿಲ್ಲುಗಳ ಪರಿಶೀಲನೆ ಮತ್ತು ನಂತರ ಸಲ್ಲಿಸಿದ ಹೆಚ್ಚುವರಿ ಮಾಹಿತಿಯು, (ಬಿಲ್ಲುಗಳ ಮತ್ತು ಒಪ್ಪಂದಗಳ

---

19 ಅಧಿಕ ಒತ್ತಡ ತಂತಿಗಳೆಂದರೆ 650 ವೋಲ್ಟ್‌ಗಳಿಗಿಂತಲೂ ಹೆಚ್ಚು ಮತ್ತು 33,000 ವೋಲ್ಟ್‌ಗಳವರೆಗೂ ವಿದ್ಯುತ್ ಸರಬರಾಜು ಮಾಡುವ ಮಾರ್ಗಗಳು.

20 ವಿದ್ಯುತ್ ಅಂಶವೆಂದರೆ ಉಪಯುಕ್ತವಾದ (ವಾಸ್ತವಿಕ) ಶಕ್ತಿ ಮತ್ತು ಸಂಪೂರ್ಣ (ಪ್ರತ್ಯಕ್ಷ) ಶಕ್ತಿಯ ಅನುಪಾತ, ಇದು ವಿದ್ಯುತ್ ಶಕ್ತಿಯನ್ನು ಉಪಯುಕ್ತ ಕಾರ್ಯೋತ್ಪಾದನೆಯನ್ನಾಗಿ ಪರಿವರ್ತಿಸುವ ದಕ್ಷತೆಯ ಅಳತೆ.

21 ಕಲಬುರಗಿ ಮಹಾನಗರ ಪಾಲಿಕೆ (ಫೆಬ್ರವರಿ–ಮಾರ್ಚ್ 2016); ರಾಮನಗರ ಪುರಸಭೆ (ಏಪ್ರಿಲ್–ಮೇ 2017), ಹರಪನಹಳ್ಳಿ ಪಟ್ಟಣ ಪಂಚಾಯತಿ (ಜುಲೈ–ಆಗಸ್ಟ್ 2017), ಕಾರ್ಕಳ ಪಟ್ಟಣ ಪಂಚಾಯತಿ (ಸೆಪ್ಟಂಬರ್ 2017) ಮತ್ತು ಮಳವಳ್ಳಿ ಪಟ್ಟಣ ಪಂಚಾಯತಿ (ಸೆಪ್ಟಂಬರ್ 2017).

ಪ್ರತಿಗಳು, ತಪಾಸಣಾ ಟಿಪ್ಪಣಿ, ಮುಂತಾದವುಗಳು) ಅಂತಹ ಲೋಪಗಳು ಇತರ ನಗರ ಸ್ಥಳೀಯ ಸಂಸ್ಥೆಗಳಲ್ಲೂ ಮುಂದುವರೆದಿದ್ದವು ಎಂಬುದನ್ನು ತೋರಿಸಿತು. ಲೆಕ್ಕಪರಿಶೋಧನೆಯು ಕೆಳಕಂಡಂತೆ ಗಮನಿಸಿತು:

(1) ವಾಸ್ತವಿಕ ಮಾಸಿಕ ವಿದ್ಯುತ್ ಬಳಕೆಗೆ ಹೋಲಿಸಿದರೆ ಒಪ್ಪಂದದ ಬೇಡಿಕೆಯು ಬಹಳ ಅಧಿಕವಾಗಿದ್ದಿತು ಮತ್ತು ನಾಲ್ಕು [22] ಹೆಚ್‌ಟಿ ಅನುಷ್ಠಾನಗಳ ಸಂಬಂಧವಾಗಿ ಬಿಲ್ಲಿಂಗ್ ಅವಧಿಯಲ್ಲಿ ಸರಾಸರಿ ಬಳಕೆಯು ಒಪ್ಪಂದದ ಶೇಕಡಾ 0ಯಿಂದ ಶೇಕಡಾ 61ರಷ್ಟಿತ್ತು.

(2) ರಾಮನಗರ ಪುರಸಭೆಯ ಒಂದು ಹೆಚ್‌ಟಿ ಅನುಷ್ಠಾನದಲ್ಲಿ ಏಪ್ರಿಲ್ 2015ರಿಂದ ಫೆಬ್ರವರಿ 2018ರ ಅವಧಿಯಲ್ಲಿ ವಿದ್ಯುತ್ ಬಳಕೆಯು ಶೂನ್ಯವಾಗಿತ್ತು; ಮತ್ತು

(3) ಹರಪನಹಳ್ಳಿ ಪಟ್ಟಣ ಪಂಚಾಯತಿಯ ಒಂದು ಹೆಚ್‌ಟಿ ಅನುಷ್ಠಾನದಲ್ಲಿ ವಾಸ್ತವಿಕವಾಗಿ ದಾಖಲಿಸಿದ ಬೇಡಿಕೆಯು ಒಪ್ಪಂದದ ಬೇಡಿಕೆಗಿಂತ ಅಧಿಕವಾಗಿದ್ದಿತು.

ಶುಲ್ಕದ ಅನುಸೂಚಿಯ ಅನ್ವಯ, ಐದು ಅನುಷ್ಠಾನಗಳ ಸಂಬಂಧವಾಗಿ ಒಪ್ಪಂದದ ಬೇಡಿಕೆಯ ಶೇಕಡಾ 75ಕ್ಕೆ ಬಿಲ್ಲುಗಳನ್ನು ನೀಡಲಾಗಿತ್ತು ಮತ್ತು ಹರಪನಹಳ್ಳಿ ಪಟ್ಟಣ ಪಂಚಾಯತಿಯ ಒಂದು ಅನುಷ್ಠಾನದ ಸಂಬಂಧವಾಗಿ ಅಧಿಕ ಬೇಡಿಕೆಯ ಮೇಲೆ ಪ್ರತಿ ತಿಂಗಳಿಗೆ ಪ್ರತಿ ಕೆವಿಎಗೆ ವಿಧಿಸುವ ಸಾಮಾನ್ಯ ದರದ ಎರಡು ಪಟ್ಟು ವಿಧಿಸಲಾಗಿತ್ತು. ಒಪ್ಪಂದದ ಬೇಡಿಕೆಯನ್ನು ಹೆಚ್ಚಿಸಲು ಅಥವಾ ಕಡಿಮೆ ಮಾಡಲು ಅವಕಾಶ ಮಾಡಿಕೊಡುವ ನಿಬಂಧನೆಗಳು ಲಭ್ಯವಿದ್ದಾಗ್ಯೂ ಸಹ ನಗರ ಸ್ಥಳೀಯ ಸಂಸ್ಥೆಗಳು ಬಳಕೆಗೆ ಅನುಗುಣವಾಗಿ ಒಪ್ಪಂದದ ಬೇಡಿಕೆಯನ್ನು ಮಾರ್ಪಾಟು ಮಾಡಲು ಯಾವುದೇ ಕ್ರಮಗಳನ್ನು ಕೈಗೊಳ್ಳಲಿಲ್ಲವೆಂದು ನಾವು ಗಮನಿಸಿದೆವು. ಇದು ವಾಸ್ತವಿಕವಾಗಿ ಬಳಕೆ ಮಾಡದಿದ್ದ/ಹೆಚ್ಚಿಗೆ ಬಳಕೆ ಮಾಡಿದ ವಿದ್ಯುತ್ ಶುಲ್ಕದ ಕಡೆಗೆ ₹41.63 ಲಕ್ಷ ತಪ್ಪಿಸಬಹುದಾಗಿದ್ದ ಪಾವತಿಯಲ್ಲಿ ಪರಿಣಮಿಸಿತು. ವಿವರಗಳನ್ನು **ಅನುಬಂಧ–4.4**ರಲ್ಲಿ ನೀಡಲಾಗಿದೆ.

**ಅನುಬಂಧ–4.5**ರಲ್ಲಿ ವಿವರಿಸಿರುವಂತೆ, ನಗರ ಸ್ಥಳೀಯ ಸಂಸ್ಥೆಗಳು 0.90ರ ವಿದ್ಯುತ್ ಅಂಶವನ್ನು ನಿರ್ವಹಣೆ ಮಾಡದಿದ್ದುದರಿಂದ, ನಗರ ಸ್ಥಳೀಯ ಸಂಸ್ಥೆಗಳ 12 [23] ಹೆಚ್‌ಟಿ ಅನುಷ್ಠಾನಗಳ ಸಂಬಂಧವಾಗಿ ವಿದ್ಯುತ್ ಸರಬರಾಜು ಕಂಪನಿಗಳು ₹53.30 ಲಕ್ಷ ಒಟ್ಟು ಮೊತ್ತದ ವಿದ್ಯುತ್ ಅಂಶದ ಮೇಲ್ತೆರಿಗೆಯನ್ನು ವಿಧಿಸಿದ್ದವು (2015–16ರಿಂದ 2017–18) ಎಂಬುದನ್ನು ಸಹ ನಾವು ಗಮನಿಸಿದೆವು. ಇದು ಪವರ್ ಕೆಪ್ಯಾಸಿಟರ್‌ಗಳನ್ನು ಅಳವಡಿಸದಿದ್ದುರಿಂದ ಅಥವಾ ಅಳವಡಿಸಿದ ಪವರ್ ಕೆಪ್ಯಾಸಿಟರ್‌ಗಳು ಕಾರ್ಯ ನಿರ್ವಹಿಸದಿದ್ದುದರಿಂದಾಗಿತ್ತು ಮತ್ತು ನಗರ ಸ್ಥಳೀಯ ಸಂಸ್ಥೆಗಳು ಅವುಗಳನ್ನು ದುರಸ್ತಿ ಮಾಡಿಸಲು ಯಾವುದೇ ಕ್ರಮ ಕೈಗೊಳ್ಳಲಿಲ್ಲ.

ಹೀಗೆ, ಬಳಕೆಗೆ ಅನುಗುಣವಾಗಿ ಒಪ್ಪಂದದ ಬೇಡಿಕೆಯನ್ನು ಹೆಚ್ಚಿಸಲು ಅಥವಾ ಕಡಿಮೆಗೊಳಿಸಲು ಕ್ರಮ ತೆಗೆದುಕೊಳ್ಳುವಲ್ಲಿನ ನಗರ ಸ್ಥಳೀಯ ಸಂಸ್ಥೆಗಳ ವಿಫಲತೆ ಮತ್ತು ನಿಗದಿತ 0.90 ಮಟ್ಟದ ವಿದ್ಯುತ್ ಅಂಶವನ್ನು ನಿರ್ವಹಣೆ ಮಾಡದಿರುವುದು ₹94.93 ಲಕ್ಷ ತಪ್ಪಿಸಬಹುದಾಗಿದ್ದ ಅಧಿಕ ಪಾವತಿಯಲ್ಲಿ ಪರಿಣಮಿಸಿತು.

ವಾಸ್ತವಿಕ ಬಳಕೆಗೆ ಪ್ರತಿಯಾಗಿ ಬೇಡಿಕೆಯನ್ನು ಹೆಚ್ಚು ಅಥವಾ ಕಡಿಮೆ ಮಾಡಲು ಗುಲ್ಬರ್ಗ ವಿದ್ಯುತ್ ಸರಬರಾಜು ಕಂಪನಿಯ ಓ&ಎಮ್ ವಿಭಾಗ–1ರ ಕಾರ್ಯ ನಿರ್ವಾಹಕ ಇಂಜಿನಿಯರ್‌ರವರಿಗೆ ಹಾಗೂ ವಿದ್ಯುತ್ ಅಂಶ ದಂಡವನ್ನು ತಪ್ಪಿಸಲು ಕೆಪ್ಯಾಸಿಟರ್‌ಗಳನ್ನು ಬದಲಾಯಿಸುವಂತೆ ಕರ್ನಾಟಕ ನಗರ

[22] ಎಸ್‌ಡಿಬಿಹೆಚ್‌ಟಿ–2 ಮತ್ತು ಯುಡಿಆರ್‌ಹೆಚ್‌ಟಿ–8 (ಕಲಬುರಗಿ ಮಹಾನಗರ ಪಾಲಿಕೆ); ಹೆಚ್‌ಟಿ–73 (ಕಾರ್ಕಳ ಪಟ್ಟಣ ಪಂಚಾಯತಿ); ಎಮ್‌ಹೆಚ್‌ಟಿ–128 (ಮಳವಳ್ಳಿ ಪಟ್ಟಣ ಪಂಚಾಯತಿ)

[23] ಎಸ್‌ಡಿಬಿಹೆಚ್‌ಟಿ–2, ಜಿಹೆಚ್‌ಟಿಪಿ–8 ಮತ್ತು ಯುಡಿಆರ್‌ಹೆಚ್‌ಟಿ–8 (ಕಲಬುರಗಿ ಮಹಾನಗರ ಪಾಲಿಕೆ); ಆರ್‌ಎಮ್‌ಜಿಹೆಚ್‌ಟಿ–41 (ರಾಮನಗರ ಪುರಸಭೆ); ಹೆಚ್‌ಟಿಹೆಚ್‌ಡಬ್ಲ್ಯು–1, ಹೆಚ್‌ಟಿಹೆಚ್‌ಡಬ್ಲ್ಯು–2 ಮತ್ತು ಹೆಚ್‌ಟಿಹೆಚ್‌ಡಬ್ಲ್ಯು–3 (ಹರಪನಹಳ್ಳಿ ಪಟ್ಟಣ ಪಂಚಾಯತಿ); ಹೆಚ್‌ಟಿ–14 ಮತ್ತು ಹೆಚ್‌ಟಿ–73 (ಕಾರ್ಕಳ ಪಟ್ಟಣ ಪಂಚಾಯತಿ); ಎಮ್‌ಹೆಚ್‌ಟಿ–128, ಎಮ್‌ಹೆಚ್‌ಟಿ–16 ಮತ್ತು ಎಮ್‌ಹೆಚ್‌ಟಿ–15 (ಮಳವಳ್ಳಿ ಪಟ್ಟಣ ಪಂಚಾಯತಿ)

ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ (ಕೆಯುಡಬ್ಲ್ಯುಎಸ್&ಡಿಬಿ)[24] ಪತ್ರಗಳನ್ನು ಬರೆದಿರುವುದಾಗಿ ಕಲಬುರಗಿ ಮಹಾನಗರ ಪಾಲಿಕೆ ಆಯುಕ್ತರು ಉತ್ತರಿಸಿದರು (ಮಾರ್ಚ್ 2016).

ಜುಲೈ 2017ರಿಂದ ಹೆಚ್‌ಟಿ ಅನುಷ್ಠಾನದ ನಿರ್ವಹಣೆಯನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ಪುರಸಭೆಯು ತೆಗೆದುಕೊಂಡಿತ್ತೆಂದು ರಾಮನಗರ ಪುರಸಭೆಯ ಆಯುಕ್ತರು ತಿಳಿಸಿದರು (ಜುಲೈ 2018) ಮತ್ತು ಕೆಪ್ಯಾಸಿಟರ್‌ಅನ್ನು ಅಳವಡಿಸಿರುವುದಕ್ಕೆ ಸಾಕ್ಷಿಯಾಗಿ ಛಾಯಾಚಿತ್ರವನ್ನು ಹಾಗೂ ವಿದ್ಯುತ್ ಅಂಶದಲ್ಲಿ ಸುಧಾರಣೆಯನ್ನು ತೋರಿಸುವ ಮೇ 2018ರ ವಿದ್ಯುತ್ ಬಿಲ್ಲನ್ನು ಸಹ ಸಲ್ಲಿಸಿದ್ದಾರೆ. ಇತರೆ ಮೂರು ನಗರ ಸ್ಥಳೀಯ ಸಂಸ್ಥೆಗಳು ಯಾವುದೇ ಉತ್ತರವನ್ನು ನೀಡಿಲ್ಲ.

ಸಂಪರ್ಕಿತ ಬೇಡಿಕೆಯೊಂದಿಗೆ ಸೂಕ್ತವಾಗಿ ಒಪ್ಪಂದದ ಬೇಡಿಕೆಯನ್ನು ಕಡಿತಗೊಳಿಸುವಂತೆ ಮತ್ತು ದಂಡಗಳನ್ನು ತಪ್ಪಿಸಲು ಸೂಕ್ತ ಸಾಮರ್ಥ್ಯದ ಕೆಪ್ಯಾಸಿಟರ್ ಘಟಕಗಳನ್ನು ಅಥವಾ ಸ್ವಯಂ ಚಾಲಿತ ವಿದ್ಯುತ್ ಅಂಶ ಸರಿಪಡಿಕೆ ಪ್ಯಾನೆಲ್‌ಗಳನ್ನು (ಎಪಿಎಫ್‌ಸಿ) ಅಳವಡಿಸುವ ಮೂಲಕ ಹೆಚ್‌ಟಿ ಅನುಷ್ಠಾನಗಳ ವಿದ್ಯುತ್ ಅಂಶವನ್ನು ಸುಧಾರಿಸುವಂತೆ ಸೂಚನೆಗಳನ್ನು ನೀಡಿರುವುದಾಗಿ ರಾಜ್ಯ ಸರ್ಕಾರವು ಉತ್ತರಿಸಿತು (ನವೆಂಬರ್ 2018).

## 4.5 ಹೆಚ್ಚುವರಿ ನೆಲಬಾಡಿಗೆಯನ್ನು ವಸೂಲು ಮಾಡದಿದ್ದುದರಿಂದ ಆದಾಯದ ನಷ್ಟ

**ಕಟ್ಟಡ ಪರವಾನಗಿ ನೀಡಿದ ದಿನಾಂಕದಿಂದ ಎರಡು ವರ್ಷಗಳೊಳಗೆ ಕಟ್ಟಡಗಳನ್ನು ಪೂರ್ಣಗೊಳಿಸದ ಆರು ಪರೀಕ್ಷಾ–ತನಿಖೆ ನಡೆಸಿದ ಪ್ರಕರಣಗಳಲ್ಲಿ ಹೆಚ್ಚುವರಿ ನೆಲಬಾಡಿಗೆಯನ್ನು ಸಂಗ್ರಹ ಮಾಡುವಲ್ಲಿನ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಿಫಲತೆಯು ₹36.50 ಲಕ್ಷ ಆದಾಯದ ನಷ್ಟದಲ್ಲಿ ಪರಿಣಮಿಸಿತು.**

ಬೆಂಗಳೂರು ಮಹಾನಗರ ಪಾಲಿಕೆ ಕಟ್ಟಡ ಬೈ–ಲಾಗಳು, 2003ರ (ಬೈ–ಲಾಗಳು) ಕಂಡಿಕೆ 3.8 ಮತ್ತು ಅದರಡಿಯಲ್ಲಿನ ಟಿಪ್ಪಣಿಯ ಅನ್ವಯ ಸಾರ್ವಜನಿಕ ಭೂಮಿಯಲ್ಲಿ ಕಟ್ಟಡ ಸಾಮಗ್ರಿಗಳನ್ನು ದಾಸ್ತಾನು ಮಾಡಿರುವುದಕ್ಕೆ ಕಟ್ಟಡದ ಮಾಲೀಕರು ನಿಗದಿತ ದರಗಳಲ್ಲಿ ನೆಲಬಾಡಿಗೆಯನ್ನು ಪಾವತಿಸಬೇಕು. ನೆಲಬಾಡಿಗೆಯು ಕಟ್ಟಡದ ಎಲ್ಲಾ ಮಹಡಿಗಳ ನೆಲವಿಸ್ತೀರ್ಣದ ಮೇಲೆ ಆಧಾರಿತವಾಗಿರುತ್ತದೆ ಮತ್ತು ಎರಡು ವರ್ಷಗಳ ಅವಧಿಗೆ ಮಾತ್ರ ಮಾನ್ಯವಾಗಿರುತ್ತದೆ. ಎರಡು ವರ್ಷಗಳ ಅವಧಿಯ ಒಳಗೆ ಕಟ್ಟಡವನ್ನು ಪೂರ್ಣಗೊಳಿಸದಿದ್ದಲ್ಲಿ ಹಾಗೂ ಅನುಭೋಗ ಪ್ರಮಾಣ ಪತ್ರವನ್ನು ಪಡೆದುಕೊಳ್ಳದಿದ್ದಲ್ಲಿ, ಮುಂದಿನ ಅವಧಿಗೆ, ಕಟ್ಟಡವು ಪೂರ್ಣಗೊಳ್ಳುವವರೆಗೂ ಅಥವಾ ಅದು ಭಾಗಶ: ಪೂರ್ಣಗೊಳ್ಳುವವರೆಗೂ ವರ್ಷಕ್ಕೆ ಸಾಮಾನ್ಯ ದರದ ಅರ್ಧದಷ್ಟು ದರದಲ್ಲಿ ನೆಲ ಬಾಡಿಗೆಯನ್ನು ಪಾವತಿಸತಕ್ಕದ್ದು. ಅಂತಹ ಪ್ರಕರಣಗಳಲ್ಲಿ ಹೆಚ್ಚುವರಿ ನೆಲಬಾಡಿಗೆಯನ್ನು ಸಂಗ್ರಹಣೆ ಮಾಡಿದ ನಂತರವೇ ಅನುಭೋಗ ಪತ್ರವನ್ನು ನೀಡಬೇಕೆಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ (ಬಿಬಿಎಮ್‌ಪಿ) ಆಯುಕ್ತರು ಸೂಚಿಸಿದ್ದರು (ಆಗಸ್ಟ್ 2014).

ಮಾರ್ಚ್ 2014ಕ್ಕೆ ಕೊನೆಗೊಂಡ ವರ್ಷದ ಸ್ಥಳೀಯ ಸಂಸ್ಥೆಗಳ ಮೇಲಿನ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿಯ (2015ನೇ ವರ್ಷದ ವರದಿ ಸಂಖ್ಯೆ.2) ಕಂಡಿಕೆ 6.7ರಲ್ಲಿ ಹೆಚ್ಚುವರಿ ನೆಲಬಾಡಿಗೆಯನ್ನು ವಸೂಲು ಮಾಡದಿದ್ದುದರಿಂದಾದ ₹41 ಲಕ್ಷ ಆದಾಯದ ನಷ್ಟದ ಬಗ್ಗೆ ಉಲ್ಲೇಖಿಸಲಾಗಿತ್ತು. ಈ ಅವಲೋಕನವನ್ನು ಸ್ಥಳೀಯ ಸಂಸ್ಥೆಗಳು ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಮೇಲಿನ ಸಮಿತಿಯು ಚರ್ಚಿಸಿ ತನ್ನ 20ನೇ ವರದಿಯಲ್ಲಿ (ಜೂನ್ 2017) ಬಾಕಿಯಿರುವ ನೆಲಬಾಡಿಗೆಯನ್ನು ವಸೂಲು ಮಾಡಬೇಕು ಮತ್ತು ನೆಲಬಾಡಿಗೆಯನ್ನು ವಸೂಲು ಮಾಡದಿರಲು

[24] ಡಿಸೆಂಬರ್ 2011ರಿಂದ ಕಲಬುರಗಿಯಲ್ಲಿನ ನೀರು ಸರಬರಾಜು ಯೋಜನೆಗಳ ಕಾರ್ಯನಿರ್ವಹಣೆಯನ್ನು ಕೆಯುಡಬ್ಲ್ಯುಎಸ್&ಡಿಬಿಗೆ ವಹಿಸಲಾಗಿದೆ.

ಕಾರಣರಾಗಿರುವ ಸಂಬಂಧಪಟ್ಟ ಬಿಬಿಎಮ್‌ಪಿ ನೌಕರರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕೆಂದು ಶಿಫಾರಸು ಮಾಡಿತ್ತು.

ಮಹಾದೇವಪುರ ವಲಯದ ಬಿಬಿಎಮ್‌ಪಿ ಪಟ್ಟಣ ಯೋಜನಾ ಸಹಾಯಕ ನಿರ್ದೇಶಕರ (ಎಡಿಟಿಪಿ) ಕಛೇರಿಯಲ್ಲಿನ ದಾಖಲೆಗಳ ಪರಿಶೀಲನೆಯು (ಮಾರ್ಚ್ 2018). ಬಿಬಿಎಮ್‌ಪಿಯಲ್ಲಿ ಅಂತಹ ಲೋಪಗಳು ಇನ್ನೂ ಮುಂದುವರೆದಿರುವುದನ್ನು ತೋರಿಸಿತು. ಮಾರ್ಚ್ 2010ರಿಂದ ಮಾರ್ಚ್ 2014ರ ಅವಧಿಯಲ್ಲಿ ಅನುಮೋದಿಸಿದ ಏಳು ಕಟ್ಟಡ ಯೋಜನೆಗಳ ಪರೀಕ್ಷಾ–ತನಿಖೆಯು ಮಹಾದೇವಪುರ ವಲಯದ ಎಡಿಟಿಪಿಯವರು ಕೇವಲ ಒಂದು ಪ್ರಕರಣದಲ್ಲಿ (ಶ್ರೀಮತಿ ರತ್ನಮ್ಮ ಮತ್ತು ಇತರರು) ನೆಲಬಾಡಿಗೆಯನ್ನು ವಿಧಿಸಿ ಸಂಗ್ರಹಿಸಿದ್ದರೆಂದು (ಜುಲೈ 2016) ತೋರಿಸಿತು. ಉಳಿದ ಆರು ಪ್ರಕರಣಗಳಲ್ಲಿ ನಿರ್ಮಾಣದ ಅವಧಿಯು ಎರಡು ವರ್ಷಗಳನ್ನು ಮೀರಿದ್ದರೂ ಸಹ ಎಡಿಟಿಪಿಯವರು ಹೆಚ್ಚುವರಿ ನೆಲಬಾಡಿಗೆಯನ್ನು ವಿಧಿಸಿ ಸಂಗ್ರಹಿಸಿರಲಿಲ್ಲ. ಇದು, **ಅನುಬಂಧ 4.6**ರಲ್ಲಿ ವಿವರಿಸಿರುವಂತೆ, ₹36.50 ಲಕ್ಷ ಆದಾಯದ ನಷ್ಟದಲ್ಲಿ ಪರಿಣಮಿಸಿತು.

ಇವುಗಳು ಕೇವಲ ದೃಷ್ಟಾಂತ ಪ್ರಕರಣಗಳಾಗಿದ್ದು ಅಂತಹ ಹೆಚ್ಚಿನ ಪ್ರಕರಣಗಳಿರುವ ಸಂಭವನೀಯತೆಯನ್ನು ತಳ್ಳಿಹಾಕುವಂತಿಲ್ಲ. ಆದುದರಿಂದ, ಅಗತ್ಯತೆಯಿರುವಂತೆ ಮತ್ತು ನಿಯಮಗಳಂತೆ ಹೆಚ್ಚುವರಿ ನೆಲಬಾಡಿಗೆಯನ್ನು ವಸೂಲು ಮಾಡುವುದನ್ನು ಖಚಿತಪಡಿಸಿಕೊಳ್ಳಲು ಬಿಬಿಎಮ್‌ಪಿ ಅಂತಹ ಎಲ್ಲ ಪ್ರಕರಣಗಳನ್ನು ಆಂತರಿಕವಾಗಿ ಪರಿಶೀಲಿಸಬೇಕು.

ರಾಜ್ಯ ಸರ್ಕಾರವು ಲೆಕ್ಕಪರಿಶೋಧನಾ ಅವಲೋಕನವನ್ನು ಒಪ್ಪಿಕೊಂಡಿತು ಮತ್ತು ಹೆಚ್ಚುವರಿ ನೆಲಬಾಡಿಗೆಯನ್ನು ಪಾವತಿಸಲು ಬಿಲ್ಡರ್‌ಗಳಿಗೆ 25.10.2018ರಂದು ನೋಟೀಸ್‌ಗಳನ್ನು ಜಾರಿ ಮಾಡಲಾಗಿದೆ ಮತ್ತು ಮೊತ್ತವನ್ನು 30.11.2018ರೊಳಗೆ ಬಿಬಿಎಮ್‌ಪಿ ಖಾತೆಗೆ ಜಮೆ ಮಾಡಲಾಗುವುದು ಎಂದು ತಿಳಿಸಿತು (ನವೆಂಬರ್ 2018). ಆದರೆ, ಹೆಚ್ಚುವರಿ ನೆಲಬಾಡಿಗೆಯನ್ನು ವಸೂಲು ಮಾಡದಿರುವುದಕ್ಕೆ ಸಂಬಂಧಪಟ್ಟ ನೌಕರರ ವಿರುದ್ಧ ಹೊಣೆಗಾರಿಕೆಯನ್ನು ನಿಗದಿಪಡಿಸುವ ವಿಷಯದಲ್ಲಿ ಉತ್ತರವು ಮೌನವಾಗಿದೆ ಮತ್ತು ಅಂತಹದೇ ಪ್ರಕರಣಗಳ ಆಂತರಿಕ ಪರಿಶೀಲನೆಯ ಬಗ್ಗೆ ಯಾವುದೇ ಬದ್ಧತೆಯನ್ನು ವ್ಯಕ್ತಪಡಿಸಿಲ್ಲ.

## 4.6 ಮೇಲ್ವಾಟು ವೆಚ್ಚವನ್ನು ಕಡಿಮೆ ಸಂಗ್ರಹಣೆ ಮಾಡಿದ್ದರಿಂದಾದ ಆದಾಯದ ನಷ್ಟ

**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಂಜನಾಪುರ ಉಪವಿಭಾಗದ ಸಹಾಯಕ ಕಂದಾಯ ಅಧಿಕಾರಿಯವರಿಂದ ಮೇಲ್ವಾಟು ವೆಚ್ಚದ ಕಡಿಮೆ ಸಂಗ್ರಹಣೆಯು ₹31.21 ಲಕ್ಷ ಆದಾಯದ ನಷ್ಟದಲ್ಲಿ ಪರಿಣಮಿಸಿತು.**

